ಶುಕ್ರವಾರ, ಮಾರ್ಚ್ 24, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ಗುರುವಾರ ನಡೆದ 'ಗುಮ್ರಾಹ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಮೃಣಾಲ್ ಠಾಕೂರ್ ಪಾಲ್ಗೊಂಡಿದ್ದರು



ಶುಕ್ರವಾರ, ಮಾರ್ಚ್ 24, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 82 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ಇಂದು ತೆರೆ ಮೇಲೆ ಮೆರೆಯಲಿರುವ 'ಹೊಯ್ಸಳ' ಡಾಲಿಯ ಸಿಂಹಾವಲೋಕನ

ಮೀಸಲು ಯಥಾಸ್ಥಿತಿ ಆದೇಶ ತೆರವು 9

ಎಸ್‌ಸಿ, ಎಸ್‌ಟಿ ಮೀಸಲು: ಶೆಡ್ಯೂಲ್ 9ಕ್ಕೆ ಸೇರಿಸಲು ಕೇಂದ್ರಕ್ಕೆ ಪತ್ರ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,925 ▼	17,076 ▼	₹61,200 (ಬೆಂಗಳೂರು)	₹70,900 (ಬೆಂಗಳೂರು)	82.20 ▲

ಚಿನಕುರಳಿ

ಪ್ರಕಾಶ್ ಶೆಟ್ಟಿ



ಭಾರತದ ಸಿರಿವಂತರ ಪಟ್ಟಿ: ಎರಡನೇ ಸ್ಥಾನಕ್ಕಿಳಿದ ಅದಾನಿ 12

ಮಧ್ಯಂತರ ಆದೇಶ ನೀಡಿದ ಹೈಕೋರ್ಟ್

ಸಾರಿಗೆ ಮುಷ್ಕರಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ನೌಕರರಿಗೆ ಸಮಾನವಾದ ವೇತನವನ್ನು ನಮಗೂ ನೀಡಬೇಕು ಮತ್ತು ಸಾರಿಗೆ ನೌಕರರ ವಿರುದ್ಧ ಹೂಡಲಾಗಿರುವ ಅಕ್ರಮ ಕೇಸುಗಳನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿ ರಾಜ್ಯ ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆ, ಶುಕ್ರವಾರ (ಮಾ.24) ನಡೆಸಲು ನಿರ್ಧರಿಸಿದ್ದ ಮುಷ್ಕರಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಮುಷ್ಕರಕ್ಕೆ ತಡೆ ಕೋರಿ ಶಿವಮೊಗ್ಗದ ಹಾರೋಗೊಳಿಗೆ ಗ್ರಾಮದ ಹಿರಿಯ ನಾಗರಿಕ ಎಚ್.ಎಂ. ವೆಂಕಟೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ, ಮೂರು ವಾರಗಳ ಕಾಲ ಮುಷ್ಕರ ನಡೆಸದಂತೆ ನಿರ್ದೇಶಿಸಿತು.

8ನೇ ಪುಟ ನೋಡಿ

ಮುಷ್ಕರ ಮುಂದೂಡಿಕೆ


'ನ್ಯಾಯಾಲಯದ ನಿರ್ದೇಶನದ ಮೇರೆಗೆ ಮುಷ್ಕರ ಮುಂದೂಡಲಾಗಿದ್ದು, ಪದಾಧಿಕಾರಿಗಳ ಸಭೆ ನಡೆಸಿ ಮುಂದಿನ ದಿನಾಂಕ ಪ್ರಕಟಿಸಲಾಗುವುದು' ಎಂದು ಸಮಾನ ಮನಸ್ಕರ ವೇದಿಕೆ ತಿಳಿಸಿದೆ.

'ಮೂರು ವಾರ ಮುಷ್ಕರ ನಡೆಸದಂತೆ ನ್ಯಾಯಾಲಯ ಹೇಳಿದ್ದು, ಈ ಅವಧಿಯಲ್ಲಿ ಕಾನೂನು ಹೋರಾಟ ಮುಂದುವರಿಯಲಿದೆ. ಕಾರ್ಮಿಕ ಸಂಘಟನೆಗಳಿಗೆ ಚುನಾವಣೆ ನಡೆಸಲು ಅಗತ್ಯ ಕ್ರಮಗಳನ್ನೂ ಕೈಗೊಳ್ಳಲಾಗುವುದು' ಎಂದು ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ವಿಧಾನಸಭೆ ಚುನಾವಣೆ ಪ್ರಕ್ರಿಯೆಗಳು ಆರಂಭವಾಗಲಿವೆ. ನೌಕರರ ಬೇಡಿಕೆಗಳಿಗೆ ಸ್ಪಂದಿಸದವರಿಗೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಾಗುವುದು' ಎಂದರು.

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಿಧನ

ಹಾಸನ: ಶ್ರವಣಬೆಳಗೊಳದ ದಿಗಂಬರ ಜೈನ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ (75) ಗುರುವಾರ ಬೆಳಿಗ್ಗೆ ನಿಧನರಾದರು.



ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಬೆಳ್ಳೂರಿನಲ್ಲಿರುವ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಬೆಳಿಗ್ಗೆ ವಾಯುವಿಹಾರ ಮಾಡುತ್ತಿದ್ದಾಗ ಕುಸಿದು ಬಿದ್ದಿದ್ದ ಸ್ವಾಮೀಜಿಯನ್ನು 8.30ಕ್ಕೆ ಆಸ್ಪತ್ರೆಗೆ ಕರೆತಂದ ವೇಳೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಬೆಳಿಗ್ಗೆ 9.32ಕ್ಕೆ ನಿಧನರಾದರು' ಎಂದು ವೈದ್ಯರು ತಿಳಿಸಿದರು.

7ನೇ ಪುಟ ನೋಡಿ

ಜನಮಂಗಳಕ್ಕೆ ಶ್ರಮಿಸಿದ ಸರ್ವ ಸಮುದಾಯಗಳ ಸಂತ 7

ಮಾನನಷ್ಟ: ಕಾಂಗ್ರೆಸ್ ಸಂಸದನ ಹೇಳಿಕೆಗೆ ಶಿಕ್ಷೆ

ರಾಹುಲ್‌ಗೆ 2 ವರ್ಷ ಸಜೆ

ಸೂರತ್ (ಪಿಟಿಐ): ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರಿಗೆ ಗುಜರಾತ್‌ನ ನ್ಯಾಯಾಲಯವು 2019ರಲ್ಲಿ ದಾಖಲಾದ ಮಾನನಷ್ಟ ಮೊಕದ್ದಮೆಯಲ್ಲಿ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಗುರುವಾರ ತೀರ್ಪು ನೀಡಿದೆ. ಮಾನನಷ್ಟಕ್ಕೆ ಇರುವ ಗರಿಷ್ಠ ಶಿಕ್ಷೆಯು ಎರಡು ವರ್ಷಗಳಾಗಿವೆ. 'ಎಲ್ಲ ಕಳ್ಳರಿಗೂ ಮೋದಿ ಎಂಬ ಉಪನಾಮ ಏಕಿದೆ' ಎಂದು ರಾಹುಲ್ ಅವರು ಪ್ರಶ್ನಿಸಿದ್ದರು.

ನ್ಯಾಯಾಲಯವು ತೀರ್ಪು ಪ್ರಕಟಿಸುವಾಗ ರಾಹುಲ್ ಅವರು ಹಾಜರಿದ್ದರು. ಭಾರತೀಯ ದಂಡ ಸಂಹಿತೆಯ ಸೆಕ್ಷನ್‌ಗಳಾದ 499 ಮತ್ತು 500ರ ಅಡಿಯಲ್ಲಿ ರಾಹುಲ್ ಅವರು ತಪ್ಪಿತಸ್ಥರು ಎಂದು ನ್ಯಾಯಾಲಯ ಹೇಳಿದೆ. ಶಿಕ್ಷೆಯನ್ನು 30 ದಿನಗಳವರೆಗೆ ಅಮಾನತಿನಲ್ಲಿ ಇರಿಸಿ, ಮೇಲ್ಮನವಿ ಸಲ್ಲಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಅವರಿಗೆ ಜಾಮೀನನ್ನೂ ನೀಡಲಾಗಿದೆ.



ಈ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸೇರಿದಂತೆ ಹಲವರು ಈ ಪ್ರಕರಣದ ಕುರಿತು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಹಾತ್ಮ ಗಾಂಧಿಯನ್ನು ಉದ್ಧರಿಸಿ ಟ್ವೀಟ್ ಮಾಡುವ ಮೂಲಕ ರಾಹುಲ್ ಅವರು ಪ್ರತಿಕ್ರಿಯೆ ನೀಡಿದ್ದಾರೆ. 'ನನ್ನ ಧರ್ಮವು ಸತ್ಯ ಮತ್ತು ಅಹಿಂಸೆಯ ಮೇಲೆ ಆಧಾರಿತವಾಗಿದೆ. ಸತ್ಯವೇ ನನ್ನ ದೇವರು, ಅಹಿಂಸೆಯೇ ಅದನ್ನು ಪಡೆಯಲು ಇರುವ ಮಾರ್ಗ– ಮಹಾತ್ಮ ಗಾಂಧಿ'. ಸ್ವಾತಂತ್ರ್ಯ ಹೋರಾಟಗಾರರಿಗೆ ನಮನ ಸಲ್ಲಿಸುವುದಕ್ಕಾಗಿ ಮತ್ತೊಂದು ಟ್ವೀಟ್ ಅನ್ನೂ ಅವರು ಮಾಡಿದ್ದಾರೆ. ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಅವರನ್ನು ಸ್ಮರಿಸಿದ್ದಾರೆ. 'ಭಾರತ ಮಾತೆಯ ಈ ದಿಟ್ಟ ಮಕ್ಕಳಿಂದ ದೇಶಕ್ಕಾಗಿ ನಿರ್ಭೀತಿಯಿಂದ ಹೋರಾಡಲು ನಾನು ಕಲಿತಿದ್ದೇನೆ' ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಲೋಕಸಭೆಗೆ 2019ರಲ್ಲಿ ನಡೆದ ಚುನಾವಣಾ ಪ್ರಚಾರ ಸಂದರ್ಭದಲ್ಲಿ ರಾಹುಲ್ ಅವರು ಕೋಲಾರದಲ್ಲಿ ಮಾಡಿದ ಭಾಷಣದಲ್ಲಿ ಈ ಹೇಳಿಕೆ ಕೊಟ್ಟಿದ್ದರು. 2019ರ ಏಪ್ರಿಲ್ 13ರಂದು ಈ ಹೇಳಿಕೆ ನೀಡಲಾಗಿತ್ತು. ಅದನ್ನು ಪ್ರಶ್ನಿಸಿ ಸೂರತ್ (ಪಶ್ಚಿಮ) ಕ್ಷೇತ್ರದ ಶಾಸಕ ಪೂರ್ಣೇಶ್ ಮೋದಿ ಅವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಇನ್ನಷ್ಟು ಸುದ್ದಿಗಳು 10

‘ಲಿಟ್ ಫೆಸ್ಟ್’ ಮುಂದೂಡಿಕೆ

ಬೆಂಗಳೂರು: ವೀರಲೋಕ ಬುಕ್ಸ್ ಇಲ್ಲಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏ.2ರಂದು ಹಮ್ಮಿಕೊಂಡಿದ್ದ ‘ಕರ್ನಾಟಕ ಲಿಟ್ ಫೆಸ್ಟ್’ ಅನ್ನು ಜೂನ್ ತಿಂಗಳಿಗೆ ಮುಂದೂಡಲಾಗಿದೆ.

ಜೈಪುರ ಲಿಟ್ ಫೆಸ್ಟಿವಲ್ ಪ್ರೇರಣೆಯಿಂದ ಈ ಉತ್ಸವವನ್ನು ಘೋಷಿಸಲಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಈ ಫೆಸ್ಟ್ ಬಗ್ಗೆ ಪರ–ವಿರೋಧದ ಚರ್ಚೆಗಳು ನಡೆದು, ವಿವಾದಗಳಾಗಿದ್ದವು. ‘ಇದು ರಾಜಕೀಯ ಪ್ರೇರಿತ ಫೆಸ್ಟ್’ ಎಂಬ ಆರೋಪಗಳು ಕೇಳಿಬಂದಿದ್ದವು. ಹೀಗಾಗಿ, ಆಯೋಜಕರು ಉತ್ಸವವನ್ನು ಮುಂದೂಡಿದ್ದಾರೆ.

‘ಹೊರ ರಾಜ್ಯಗಳಂತೆ ಇಲ್ಲೂ ಅಂತಹ ಸಾಹಿತ್ಯ ಉತ್ಸವಗಳು ಯಶಸ್ವಿಯಾಗಬೇಕೆಂಬ ಕನಸು ಕಂಡು, ಅದೇ ಮಾದರಿಯಲ್ಲಿ ಒಂದು ಉತ್ಸವವನ್ನು ಆಯೋಜಿಸುವ ಉತ್ಸಾಹ ನನ್ನದಾಗಿತ್ತು. ನನಗೆ ಪಂಥ, ಪಕ್ಷ ಇರಲಿಲ್ಲ. ಆದರೂ ಕೆಲವು ವಿಚಾರದಲ್ಲಿ ವಿವಾದಗಳಾದವು. ಆ ವಿವಾದಗಳೆಲ್ಲವನ್ನೂ ಸಹಿಸಿಕೊಳ್ಳುವಷ್ಟು ಶಕ್ತಿಯಿದೆ. ಆದರೆ, ಕರ್ನಾಟಕ ಲಿಟ್ ಫೆಸ್ಟ್ ಚುನಾವಣೆಗೆ ಅಸ್ತ್ರವಾಗಿ ಬಳಕೆಯಾಗುತ್ತಿದೆ ಎಂಬುದು ಗೊತ್ತಾದ ತಕ್ಷಣ ನಿಜಕ್ಕೂ ಗಾಬರಿಯಾಯಿತು’ ಎಂದು ಉತ್ಸವದ ಸಂಯೋಜಕ ವೀರಕಪುತ್ರ ಶ್ರೀನಿವಾಸ್ ಹೇಳಿದ್ದಾರೆ.

‘ಚುನಾವಣೆ ಮುಗಿದ ಕೂಡಲೇ ದಿನಾಂಕವನ್ನು ತಿಳಿಸುತ್ತೇವೆ. ಸುಮಾರು 400 ಜನ ಇದಕ್ಕೆ ನೋಂದಾಯಿಸಿಕೊಂಡಿದ್ದಾರೆ. ಅವರಿಗೆ ಹಣವನ್ನು ಹಿಂದಿರುಗಿಸುವ ಪ್ರಕ್ರಿಯೆ ನಡೆಯಲಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಕಾಸಸೌಧ: ‘ಪ್ರಾಜೆಕ್ಟ್ ರಶ್ಮಿ’ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕಾಸಸೌಧದ ಮೂರನೇ ಮಹಡಿಯಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ‘ಪ್ರಾಜೆಕ್ಟ್ ರಶ್ಮಿ’ ಯೋಜನೆಯಡಿ ಮಹಿಳೆಯರಿಗೆ ವಿಶ್ರಾಂತಿ ಕೊಠಡಿಯನ್ನು ಆರಂಭಿಸಲಾಗಿದೆ.

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಗುರುವಾರ ಈ ಕೊಠಡಿಗೆ ಚಾಲನೆ ನೀಡಿದರು.

ಮಹಿಳೆಯರ ಈ ವಿಶೇಷ ಕೊಠಡಿಯಲ್ಲಿ ಆರೋಗ್ಯಕರ ಪರಿಸರದೊಂದಿಗೆ ಸ್ವಚ್ಛ ಕುಡಿಯುವ ನೀರು, ಶಿಶುಪಾಲನಾ ಕೊಠಡಿ, ಶೌಚಾಲಯ, ಹಾಲುಣಿಸುವ ತಾಯಿ ಹಾಗೂ ಗರ್ಭಿಣಿಯರಿಗೆ ಅನುಕೂಲಕರ ವಿಶ್ರಾಂತಿ ಕೊಠಡಿ ನಿರ್ಮಿಸಲಾಗಿದೆ. ಇದಕ್ಕಾಗಿ ₹53 ಲಕ್ಷ ವೆಚ್ಚ ಮಾಡಲಾಗಿದೆ ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ಕೆ. ಶ್ರೀನಿವಾಸ್ ಮಾಹಿತಿ ನೀಡಿದರು.

ಕೊಠಡಿಯಲ್ಲಿ ಮಿನಿ ಫ್ರಿಜ್,ಮೈಕ್ರೋ ಓವನ್, ವಾಟರ್ ಫಿಲ್ಟರ್, ಸೋಫಾಗಳು, ಡೈನಿಂಗ್ ಟೇಬಲ್‌ಗಳು, ಲೆಗ್ ಮಸಾಜ್ ಚೇರ್, ಸ್ಯಾನಿಟರಿ ವಿಲೇವಾರಿ ಡೆಸ್ಟ್ ಬಿನ್ಸ್, ಹ್ಯಾಂಡ್ ಡ್ರೈಯರ್, ಒಣ ಮತ್ತು ಹಸಿ ತ್ಯಾಜ್ಯಕ್ಕೆ ಪ್ರತ್ಯೇಕ ಬಕೆಟ್, ವೈಫೈ ಸಂಪರ್ಕ, ಎಲ್‌ಇಡಿ ವಿದ್ಯುತ್ ವ್ಯವಸ್ಥೆಗಳಿವೆ ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಸುಶೀಲಮ್ಮ ಹೇಳಿದರು.

ಯೋಜನೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಧಿಕಾರಿಗಳು, ಇತರರು ಇದ್ದರು.



ಮಹಿಳಾ ಕೊಠಡಿಯನ್ನು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಉದ್ಘಾಟಿಸಿದರು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಬೆಂಗಳೂರು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ಕೆ. ಶ್ರೀನಿವಾಸ್ ಇದ್ದರು.

ಶರಣರ ಅರ್ಜಿ: ವಿಚಾರಣೆ ಏ.6ಕ್ಕೆ

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿರುವ ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿದ ಮತ್ತು ಮಠಕ್ಕೆ ರಾಜ್ಯ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿರುವುದನ್ನು ಪ್ರಶ್ನಿಸಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಏಪ್ರಿಲ್ 6ಕ್ಕೆ ಮುಂದೂಡಿದೆ.

ಈ ಸಂಬಂಧದ ಎರಡು ಪ್ರತ್ಯೇಕ ರಿಟ್ ಅರ್ಜಿಗಳು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಗುರುವಾರ ವಿಚಾರಣೆ ನಿಗದಿಯಾಗಿದ್ದವು. ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಜಯಕುಮಾರ್ ಎಸ್.ಹಿರೇಮಠ ಅವರು, ‘ಪ್ರಕರಣದಲ್ಲಿ ವಾದ ಮಂಡಿಸಬೇಕಿರುವ ಹಿರಿಯ ವಕೀಲ ಸಿ.ವಿ.ನಾಗೇಶ್ ಗೈರಾಗಿರುವ ಕಾರಣ ವಿಚಾರಣೆ ಮುಂದೂಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಏಪ್ರಿಲ್ 6ಕ್ಕೆ ನಿಗದಿಪಡಿಸಿತು.

ಸಿನಿಮಾ ಪುರವಣಿ

‘ಹೊಯ್ಸಳ’ನ ಸಿಂಹಾವಲೋಕನ

ಶರತ್ ಹೆಗ್ಡೆ

- **ರಂಗಭೂಮಿಯಿಂದ ಡಾಲಿ ಪಿಕ್ಚರ್ಸ್‌ವರೆಗೆ ‘ಹೊಯ್ಸಳ’ನ ಸಿಂಹಾವಲೋಕನ?**

ತುಂಬಾ ನೆನಪುಗಳು ಇವೆ. ಒಳ್ಳೆಯದು, ಕೆಟ್ಟದ್ದು ಎರಡೂ ಇವೆ. ಒಳ್ಳೆಯದನ್ನಷ್ಟೇ ನೆನಪಿಟ್ಟುಕೊಂಡು, ಕೆಟ್ಟದ್ದನ್ನು ಮುಂದಕ್ಕೆ ದಾಟಿಸದೇ ನಮ್ಮದೇ ಆದ ಹಾದಿಯಲ್ಲಿ ಮುಂದುವರಿಯಬೇಕು. ಎಂಜಿನಿಯರ್ ಆಗಿದ್ದವನು ಒಂದು ಭಂಡ ಧೈರ್ಯದ ಮೇಲೆ ಕಲಾಕ್ಷೇತ್ರದಲ್ಲಿ ಕನಸು ಕಟ್ಟಿಕೊಂಡು ಬಂದೆ. ಅದು ಕೈ ಹಿಡಿದಿದೆ. ಜನ ನನ್ನ ಪ್ರತಿಯೊಂದು ಪಾತ್ರವನ್ನೂ ಆನಂದಿಸಿದ್ದಾರೆ. ಅವರದ್ದೇ ಆದ ಹೆಸರು ಕೊಟ್ಟು ಪ್ರೀತಿಯಿಂದ ಕಂಡಿದ್ದಾರೆ. ಹೀಗೆ ಈ ಕ್ಷೇತ್ರದಿಂದ, ಜನರಿಂದ ಸಾಕಷ್ಟು ಪಡೆದಿದ್ದೇನೆ. ಅದೇ ರೀತಿ ಒಳ್ಳೆಯದನ್ನೇ ಕೊಡಬೇಕು. ಡಾಲಿ ಪಿಕ್ಚರ್ಸ್ ಮೂಲಕ ಹೊಸ ಬರಹಗಾರರಿಗೆ ಅವಕಾಶ ಕೊಟ್ಟಿದ್ದೇವೆ. ಈ ಕ್ಷೇತ್ರಕ್ಕೆ ಹೊಸಬರು ಬರಬೇಕು. ಹೊಸ ಪ್ರತಿಭೆಗಳು ಬರುತ್ತಿವೆ ಕೂಡ. ಸಿನಿಮಾ ಕ್ಷೇತ್ರದಲ್ಲಿ ಅದು ನಿರಂತರವಾಗಿ ಆಗಬೇಕು. ಆ ಕೆಲಸವನ್ನು ನನ್ನ ನಿರ್ಮಾಣ ಸಂಸ್ಥೆ ಮಾಡುತ್ತಿದೆ.

- **ನಿಮ್ಮ ಹೆಸರಿಗೆ ಅಂಟಿಕೊಂಡ ‘ಡಾಲಿ’ ಬಗ್ಗೆ?**

ಎಲ್ಲಿ ಹೋದರೂ ಜನ ನನ್ನನ್ನು ಆ ಪಾತ್ರದ ಹೆಸರಿನಲ್ಲೇ ಕರೆಯುತ್ತಾರೆ. ಬಹುಶಃ ನನ್ನ ಹೆಸರು ಬರೀ ಧನಂಜಯ ಅಂದರೆ ಗೊತ್ತಾಗಲಿಕ್ಕಿಲ್ಲ. ನಾನು ನನ್ನದೇ ಆದ ಪಾತ್ರದ ಹೆಸರನ್ನು ಛಾಪು ಮೂಡಿಸಲು ಸಾಕಷ್ಟು ಪ್ರಯತ್ನಿಸಿದೆ. ಆದರೆ, ಸಾಧ್ಯವಾಗಲೇ ಇಲ್ಲ. ಆದರೆ, ‘ಡಾಲಿ’ಯನ್ನು ಜನರೇ ತಮ್ಮ ಮಾತುಗಳಲ್ಲಿಟ್ಟುಕೊಂಡರು. ಮನಸ್ಸಿನಲ್ಲಿ ಜಾಗ ಕೊಟ್ಟರು. ಇದಕ್ಕಿಂತ ಖುಷಿ ಇನ್ನೇನಿದೆ ಹೇಳಿ. ಅದೆಷ್ಟೋ ಖ್ಯಾತನಾಮ ನಟರಿಗೆ ಅವರ ಪಾತ್ರದ ಮೂಲಕ ಗೌರವ ಸಿಕ್ಕಿದೆ. ಅದೇ ಗೌರವ ನನಗೂ ಸಿಕ್ಕಿದೆ ಎಂಬ ಸಂತೋಷವಿದೆ.

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

- **ಬಹುತೇಕ ಸಿನಿಮಾಗಳಲ್ಲಿ ತೀರಾ ಶ್ರೀಸಾಮಾನ್ಯನನ್ನೇ ಕೇಂದ್ರೀಕರಿಸಿದ ಪಾತ್ರ ಮಾಡಿದ್ದೀರಿ.**

ಹೌದು, ನಾನೂ ಮಧ್ಯಮ ವರ್ಗದಿಂದ ಬಂದವನೇ. ಸಮಾಜದಲ್ಲಿ ಅವರೇ ಹೆಚ್ಚು ಇರುವುದೂ ಹೌದು. ಅಂಥ ಕಥೆಗಳನ್ನು ಕೇಳಿದಾಗ ನನಗೆ ಇಷ್ಟವಾಗುತ್ತದೆ. ಹಾಗಾಗಿ ಪಾತ್ರಗಳು ಸಹಜವಾಗಿ ಹೆಚ್ಚು ಹತ್ತಿರವಾಗುತ್ತವೆ. ಬಡವ ರ‍್ಯಾಸ್ಕಲ್, ರತ್ನನ್ ಪ್ರಪಂಚ, ಮಾನ್ಸೂನ್ ರಾಗ ಇವೆಲ್ಲವುಗಳಲ್ಲಿ ‘ಕಾಮನ್ ಮ್ಯಾನ್’ ಆಗಿ ಕಾಣಿಸಿಕೊಂಡಿದ್ದೇನೆ. ಜೀವನ ಮೌಲ್ಯಗಳನ್ನು ಹೇಳಿದ್ದೇನೆ. ನಾವು ಸಹಜವಾಗಿದ್ದಷ್ಟೂ ಜನರಿಗೆ ಹತ್ತಿರವಾಗುತ್ತೇವೆ. ನನ್ನ ವ್ಯಕ್ತಿತ್ವವೂ ಹಾಗೆಯೇ. ನಮ್ಮ ಚಿತ್ರಗಳನ್ನೂ ಹೆಚ್ಚು ಆಡಂಬರವಿಲ್ಲದೇ ಸಹಜವಾಗಿ ಪ್ರಚಾರ ಮಾಡಿದ್ದೇವೆ. ಶ್ರೀಸಾಮಾನ್ಯನ ಸಹಜ ಕಥೆಗಳನ್ನು ತೋರಿಸಬೇಕಲ್ವಾ?

- **ನಾಯಕ ಅಥವಾ ಖಳ ಯಾವ ಪಾತ್ರಕ್ಕೂ ಒಗ್ಗಿಕೊಳ್ಳುತ್ತೀರಲ್ಲಾ?**

ಒಬ್ಬ ಕಲಾವಿದನಾಗಿ ಅದು ನನ್ನ ಜವಾಬ್ದಾರಿಯೂ ಹೌದು. ನಾಯಕನೇ ಆಗಬೇಕು ಇಂಥದ್ದೇ ಪಾತ್ರ ಬೇಕು ಅನ್ನುವುದಕ್ಕಿಂತಲೂ ಇಂಥ ಸಿನಿಮಾದಲ್ಲಿ, ಈ ತಂಡದೊಂದಿಗೆ ನಾನು ಕೆಲಸ ಮಾಡಬೇಕು ಎಂಬ ಆಸೆ ಮತ್ತು ಉತ್ಸಾಹ ಇರುತ್ತದೆ. ಸಹಜ ಆರಂಭದ ದಿನಗಳಲ್ಲಿ ನಾನಿನ್ನೂ ಪೋಷಕ ನಟನಾಗಿಯೇ ಇರಬೇಕಾ? ನೆಗೆಟಿವ್ ಪಾತ್ರಗಳನ್ನೇ ಮಾಡಬೇಕಾ ಎಂಬ ಸಣ್ಣ ಅಳುಕು ಇದ್ದದ್ದು ನಿಜ. ಆದರೆ, ಜನ ನನ್ನ ನೆಗೆಟಿವ್ ಪಾತ್ರಗಳನ್ನೂ ಅಷ್ಟೇ ಖುಷಿಯಿಂದ ಸ್ವೀಕರಿಸಿದರು. ಹಾಗಾಗಿ ಆ ಪಾತ್ರ ಈ ಪಾತ್ರ ಎಂದೇನಿಲ್ಲ. ಗಟ್ಟಿಯಾದ, ಒಳ್ಳೆಯ ಪಾತ್ರ ಒಬ್ಬ ಕಲಾವಿದನಿಗೆ ಸಿಗಬೇಕು. ಅದೇ ಖುಷಿ.

- **ಡಾಲಿಯೊಳಗಿನ ಕವಿ, ಕಥೆಗಾರನ ಬಗ್ಗೆ?**

ಬರಹ ಮೊದಲಿನಿಂದಲೂ ನನಗೆ ತುಂಬಾ ಇಷ್ಟ. ಇತ್ತೀಚೆಗೆ ಮೈಸೂರು ಆರ್ಕೆಸ್ಟ್ರಾ ಚಿತ್ರಕ್ಕೂ ಹಾಡುಗಳನ್ನು ಬರೆದೆ. ಕಾಲೇಜು ದಿನಗಳಿಂದಲೂ ಬರೆಯುತ್ತಿದ್ದೆ. ಅದನ್ನು ಇಷ್ಟಪಡುವ ಸ್ನೇಹಿತರು ತುಂಬಾ ಇದ್ದರು. ಈಗ ಸಿನಿಮಾ ಸಂಬಂಧಿಸಿದ ಒತ್ತಡಗಳ ಕಾರಣದಿಂದ ಸ್ವಲ್ಪ ಕಡಿಮೆ ಆಗಿದೆ. ಆಗೊಮ್ಮೆ ಈಗೊಮ್ಮೆ ಬರೆಯುತ್ತಿರುತ್ತೇನೆ.

- **ಹೆಡ್– ಬುಷ್ ಭಾಗ 2 ಯಾವಾಗ ಬರುತ್ತದೆ?**

ಸದ್ಯಕ್ಕಿಲ್ಲ. ಮುಂದೆ ಯಾವತ್ತಾದರೂ ಒಮ್ಮೆ ಮಾಡೋಣ ಎಂದು ನಾನು ಮತ್ತು ಅಗ್ನಿ ಶ್ರೀಧರ್ ಮಾತನಾಡಿದ್ದೇವೆ. ಈಗ ಬೇರೆ ಚಿತ್ರಗಳತ್ತ ಗಮನವಿದೆ.

- **ಯಾರಿವರು ಗುರುದೇವ್ ಹೊಯ್ಸಳ?**

ಪೊಲೀಸ್. ಶ್ರೀಸಾಮಾನ್ಯನ ಪರ ಇರುವ ದಕ್ಷ ಪೊಲೀಸ್ ಅಧಿಕಾರಿ. ನೈತಿಕ ಚೌಕಟ್ಟಿನ ಒಳಗೆ ಕೆಲಸ ಮಾಡಬೇಕು ಎಂದು ಒದ್ದಾಡುತ್ತಿರುತ್ತಾನೆ. ಆದರೆ ವ್ಯವಸ್ಥೆಯ ನಡುವೆ ಇದ್ದು ಆತ ಏಗಬೇಕು. ಪೊಲೀಸರೂ ಮನುಷ್ಯರಲ್ವಾ. ಅವರ ತೊಳಲಾಟ, ಅದರ ಮಧ್ಯೆಯೂ ಇರುವ ಸೇವಾ ಭಾವ, ಪ್ರಾಮಾಣಿಕತೆಯನ್ನು ತೋರಿಸಿದ್ದೇವೆ.

- **ಹೊಯ್ಸಳ ನಾವೇಕೆ ನೋಡಬೇಕು?**

ಒಳ್ಳೆಯ ಪೊಲೀಸ್ ಅಧಿಕಾರಿಯ ಕಥೆ. ಒಳ್ಳೆಯ ಸಂದೇಶ ಇರುವ ಸಾಮಾಜಿಕ ಕಳಕಳಿಯ ಚಿತ್ರವೂ ಹೌದು. ನಿಮ್ಮನ್ನು ಪೂರ್ತಿ ಮನರಂಜಿಸುತ್ತದೆ. ಈವರೆಗೆ ಎಷ್ಟೆಲ್ಲಾ ಪಾತ್ರಗಳನ್ನು ಆನಂದಿಸಿದ್ದೀರೋ ಅಂಥದ್ದೇ ಖುಷಿ ಹೊಯ್ಸಳ ಪಾತ್ರದ ಮೂಲಕ ನಿಮಗೆ ಸಿಗುತ್ತದೆ.

- **ಮುಂದಿನ ಯೋಜನೆಗಳು?**

ರಮ್ಯಾ ಅವರು ಪ್ರಧಾನ ಪಾತ್ರದಲ್ಲಿರುವ ಉತ್ತರಕಾಂಡ ಸ್ಕ್ರಿಪ್ಟ್ ಕೆಲಸ ನಡೆದಿದೆ. ‘ಝೀಬ್ರಾ’ ಎಂಬ ತೆಲುಗು ಸಿನಿಮಾದಲ್ಲಿ ಸತ್ಯದೇವ್ ಅವರ ಜೊತೆ ನಟಿಸುತ್ತಿದ್ದೇನೆ. ಪುಷ್ಪ–2 ಶೂಟಿಂಗ್ ಶುರುವಾಗಿದೆ. ಜಾಲಿ ರೆಡ್ಡಿಯ (ಡಾಲಿ ಅವರ ಪಾತ್ರ) ಸರದಿ ಯಾವಾಗ ಬರುತ್ತದೋ ಗೊತ್ತಿಲ್ಲ. ಹೀಗೆ ಒಳ್ಳೆಯ ಚಿತ್ರಗಳನ್ನು ಕೊಡಬೇಕು ಎಂಬ ಕನಸಿನೊಂದಿಗೆ ಸಾಗಿದ್ದೇನೆ.



ಡಾಲಿ ಧನಂಜಯ

> ರಂಗಭೂಮಿಯಿಂದ ಬಂದ ಈ ನಟರಾಕ್ಷಸ ‘ಜಯನಗರ ಫೋರ್ತ್ ಬ್ಲಾಕ್’ನಿಂದ ‘ಹೊಯ್ಸಳ’ದವರೆಗೆ ನಟಿಸುತ್ತಾ ಬಂದರು. ಜೊತೆಗೆ ಡಾಲಿ ಪಿಕ್ಚರ್ಸ್ ಮೂಲಕ ಹೊಸಬರಿಗೆ ಅವಕಾಶವನ್ನೂ ಕೊಟ್ಟರು. ಈ ‘ಹೊಯ್ಸಳ’ನ ಸಿಂಹಾವಲೋಕನ ಸಿನಿಮಾ ಪುರವಣಿ ಜೊತೆಗೆ...

ವಾರಾಂತ್ಯದ ಯಶೋಗಾಥೆ ರಮೇಶ್ ಜೊತೆ



ರಮೇಶ್ ಅರವಿಂದ್

ಜೀ ವಾಹಿನಿಯ ಜನಪ್ರಿಯ ಕಾರ್ಯಕ್ರಮ ವೀಕೆಂಡ್ ವಿತ್ ರಮೇಶ್‌ನ ಐದನೇ ಆವೃತ್ತಿಯ ಘೋಷಣೆ ಆಗಿದೆ. ಈಗ ಕುತೂಹಲವೆಂದರೆ ಮೊದಲ ಆವೃತ್ತಿಯಲ್ಲಿ ಯಾರ‍್ಯಾರಿದ್ದಾರೆ ಅನ್ನವುದು. ವಾಹಿನಿಯ ಮುಖ್ಯ ಕಂಟೆಂಟ್ ಅಧಿಕಾರಿ ರಾಘವೇಂದ್ರ ಹುಣಸೂರು ಮತ್ತು ಕಾರ್ಯಕ್ರಮದ ನಿರೂಪಕ ರಮೇಶ್ ಅರವಿಂದ್ ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಆ ಗುಟ್ಟುಗಳನ್ನು ತೆರೆದಿಟ್ಟರು.

ಐದನೇ ಆವೃತ್ತಿಯ ಮೊದಲ ಅತಿಥಿ ಮೋಹಕ ತಾರೆ ರಮ್ಯಾ. ಆ ಬಳಿಕ ನಟ ಪ್ರಭುದೇವ್, ಮುಂದೆ ಜಗ್ಗಿ ವಾಸುದೇವ್ ಸಹಿತ ಅನೇಕ ಖ್ಯಾತನಾಮರನ್ನು ಸಂದರ್ಶಿಸಲು ಸಿದ್ಧತೆ ನಡೆದಿದೆಯಂತೆ.

ಏನು ಹೊಸತನ?

‘ಕಾರ್ಯಕ್ರಮದ ಮೂಲ ಪರಿಕಲ್ಪನೆ ಹಾಗೂ ವಿನ್ಯಾಸದಲ್ಲಿ ಯಾವುದೇ ಬದಲಾವಣೆ ಇಲ್ಲ. ಸೆಟ್, ಸ್ಥಳಾವಕಾಶ ದೊಡ್ಡದಾಗಿರಲಿದೆ. ಅದೇ ಯಶೋಗಾಥೆ, ಸಾಧನೆಯ ಸ್ಫೂರ್ತಿ ಕಥೆಗಳು ಇರಲಿವೆ. ಚುನಾವಣೆ ಸಮೀಪಿಸುತ್ತಿರುವ ಕಾರಣ ಸದ್ಯ ಯಾವುದೇ ರಾಜಕಾರಣಿಗಳ ಸಂದರ್ಶನ/ ವಿಶೇಷ ಕಾರ್ಯಕ್ರಮ ನಡೆಸುವುದಿಲ್ಲ’ ಎಂದು ಹುಣಸೂರು ಸ್ಪಷ್ಟಡಿಸಿದರು.

‘ನಾನಿಲ್ಲಿ ನಿಮಿತ್ತ ಮಾತ್ರ. ಈ ಕಾರ್ಯಕ್ರಮದ ಹಿಂದೆ ದೊಡ್ಡದಾದ ಸಂಶೋಧನಾ ತಂಡವಿದೆ. ಅವರ ಪರಿಶ್ರಮ ತುಂಬಾ ದೊಡ್ಡದು. ಪ್ರತಿ ಸಂದರ್ಶನದಕ್ಕೂ ಶ್ರದ್ಧೆಯಿಂದ ಪೂರ್ವತಯಾರಿ ಮಾಡುತ್ತೇವೆ. ಪ್ರತಿ ವ್ಯಕ್ತಿಯ ಒಳ್ಳೆಯ ಮುಖವನ್ನು ಪರಿಚಯಿಸುವುದೇ ನಮ್ಮ ಗುರಿ. ಪ್ರತಿ ಸಂದರ್ಶನದಲ್ಲೂ ಆಯಾ ವ್ಯಕ್ತಿಗಳ ಜೀವನವನ್ನು ಅವಲೋಕನ ಮಾಡುತ್ತೇನೆ. ಅವರ ಸಾಧನೆಯ ಮಟ್ಟಕ್ಕೆ ನಾನು ಏರಿದ್ದೇನೆಯೇ? ಅವರು ಯಾವ ಹಂತದಲ್ಲಿದ್ದಾರೆ. ನಾನು ಇನ್ನೂ ಏನು ಮಾಡಬಹುದು ಎಂದೂ ಚಿಂತನೆ ಮಾಡುತ್ತೇನೆ. ಇಂಥ ಅಪರೂಪದ ಸಾಧಕರ ನೂರಾರು ಕಥೆಗಳನ್ನು ಹೇಳುವ ಅದ್ಭುತ ಅವಕಾಶವೇ ನನಗೆ ಸಿಕ್ಕಿರುವುದಕ್ಕೆ ನಾನು ಧನ್ಯ’ ಎಂದರು ರಮೇಶ್.

ಪ್ರತಿ ಶನಿವಾರ ಮತ್ತು ಭಾನುವಾರ ವೀಕೆಂಡ್ ವಿತ್ ರಮೇಶ್ ಜೀ ಕನ್ನಡ ವಾಹಿನಿಯಲ್ಲಿ ರಾತ್ರಿ 9ರಿಂದ ಪ್ರಸಾರವಾಗಲಿದೆ.

‘ಫೋಟೊ’ ತೆಗೆದ ಮಹಾದೇವ



ಮಹಾದೇವ ಹಡಪದ

ಇತ್ತೀಚೆಗೆ ಬಿಡುಗಡೆಯಾದ 19.20.21 ಚಿತ್ರದಲ್ಲಿ ನಾಯಕನ ತಂದೆಯ ಪಾತ್ರವನ್ನು ಗಮನಿಸಿರಬಹುದು. ಹೆಚ್ಚು ಮನ ತಟ್ಟಿದ ಪಾತ್ರವದು. ಆ ಕಲಾವಿದ ಮಹಾದೇವ ಹಡಪದ. ರಂಗಭೂಮಿ ಕಲಾವಿದರಾದ ಅವರು ಈಗ ಇನ್ನೊಂದು ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಹೆಸರು ‘ಫೋಟೊ’. ರಂಗಭೂಮಿ ಕಲಾವಿದರು ಅಭಿನಯಿಸಿದ ಚಿತ್ರವಿದು. ಈ ಚಿತ್ರ ಅಷ್ಟಾಗಿ ಪ್ರಚಾರದಲ್ಲಿಲ್ಲ. ಆದರೆ ಇದೇ ಚಿತ್ರ ಸದ್ದಿಲ್ಲದೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಕಾಣುತ್ತಿದೆ. ಮಾರ್ಚ್ 25ರಂದು ಬೆಳಿಗ್ಗೆ 9.45ಕ್ಕೆ ಒರಾಯನ್ ಮಾಲ್‌ನಲ್ಲಿ, ಮಾರ್ಚ್ 28ರಂದು ಮಧ್ಯಾಹ್ನ 1 ಗಂಟೆಗೆ ಚಾಮರಾಜಪೇಟೆಯ ರಾಜ್‌ಕುಮಾರ್ ಭವನದಲ್ಲಿ ಪ್ರದರ್ಶನಗಳು ನಡೆಯಲಿವೆ.

ಕೊರೊನಾ ಕಾಲಘಟ್ಟದಲ್ಲಿ ಉತ್ತರ ಕರ್ನಾಟಕದಿಂದ ವಲಸೆ ಬಂದಿದ್ದ ಕಾರ್ಮಿಕ ಹಾಗೂ ಅವನ ಮಗ ಎದುರಿಸುವ ಸಮಸ್ಯೆಗಳ ಸುತ್ತ ನಡೆಯುವ ಕಥೆಯಿದು.

ಉತ್ಸವ್ ಗೋನವಾರ ಈ ಚಿತ್ರದ ನಿರ್ದೇಶಕರು. ಜಹಾಂಗೀರ್, ಸಂಧ್ಯಾ ಅರಕೆರೆ, ಡಿಂಗ್ರಿ ನರೇಶ್, ಗಾಯತ್ರಿ ಹೆಗ್ಗೋಡು, ವೀರೇಶ್ ತಾರಾಗಣದಲ್ಲಿದ್ದಾರೆ. ಫಕೀರಪ್ಪ ಬಂಡಿವಾಡ ಚಿತ್ರದ ನಿರ್ಮಾಪಕರು. ದಿನೇಶ್ ದಿವಾಕರನ್ ಛಾಯಾಗ್ರಹಣ, ಶಿವರಾಜ್ ಮೇಹು ಸಂಕಲನ, ರವಿ ಹಿರೇಮಠ್ ಶಬ್ದ ವಿನ್ಯಾಸ, ಶಶಾಂಕ್ ಕೆ.ಎಸ್. ಸಿಂಕ್ ಸೌಂಡ್ ರೆಕಾರ್ಡಿಂಗ್ ಮಾಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಚೇರಿ, ಅನೆಕ್ಸ್ ಕಟ್ಟಡ –1, ಎನ್.ಆರ್.ವೃತ್ತ, ಬೆಂಗಳೂರು–560 002.

ಸಂಖ್ಯೆ: ಬೃಬೆಂಮಪಾ/ಮು.ಆಯುಕ್ತರು/ಪಿಎಸ್ಆರ್(ಜಿ)/4329/2022–23 ದಿನಾಂಕ: 20–03–2023

ನಮೂನೆ–3

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, **"45.00 ಮೀಟರ್‌ಗಳ ಅಗಲದಂತೆ, ಅನುಮೋದಿತ ಮಹಾಯೋಜನೆ–2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ವರ್ತೂರು, ಗುಂಜೂರುಪಾಳ್ಯ ಮಾರ್ಗವಾಗಿ ಗೇರ್ ಶಾಲೆ ರಸ್ತೆಯಿಂದ ಪೆರಿಫೆರಲ್ ವರ್ತುಲ ರಸ್ತೆಯವರೆಗೆ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ"** ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು / ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಉಪ ಆಯುಕ್ತರವರ ಕಚೇರಿ (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: **ಬೆಂಗಳೂರು ನಗರ** ತಾಲ್ಲೂಕಿನ ಹೆಸರು: **ಬೆಂಗಳೂರು ಪೂರ್ವ** ಗ್ರಾಮದ ಹೆಸರು : **ಗುಂಜೂರು**

Sy. No/ Khata No.	Type of Land		Nature of Land			Dimension of the land/plot & extent in Sq.m		Boundaries of the land /plot				Building Details			Present Activity on Land/Building (Specify activity such as Shops, office, Factory apartment, individual house ets.,	Market (guidlines) value of the land per Sq.m (in Rs.)	Name and address of the owner of the plot/land for which DRC is to be issued
	Vacant	Built up	Agriculture	Converted undeveloped	Approved layout / Developed land Building Site	Dimension	Extent	North	South	East	West	Extent in Sq.m	Type of Construction & No. of floors	Floor Area Ratio			
Sy. No. 122/3 BBMP Khata Sl. No. 7709, M.N.No. 317	Vacant Land		Converted A Khata Land			1584.95 Sq.m		Remaining portion of Sy.No: 122/3	Sy.No.116/10 & 116/11	Sy. No. 122/4	Sy. No. 119/4B	None	None	None	Vacant	35,000/- per Sq.m	M/s. Akarsha Reality Private Limited #2/4, Langford Garden, Richmond Town, Bangalore-560025.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿದ ವಿಳಾಸಕ್ಕೆ ಸಲ್ಲಿಸಬಹುದು.

ವಿಭಾಗ/ಉಪ–ವಿಭಾಗ/ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ.107, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಬಿಬಿಎಂಪಿ ವತಿಯಿಂದ ಪಂತರಪಾಳ್ಯದಲ್ಲಿ ನಿರ್ಮಾಣ

ಪುನೀತ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆ ಸಲುವಾಗಿ ಕೆಲಸ ಮಾಡುವುದು ಒಂದು ಕಡೆಯಾದರೆ, ವಿಶ್ವಾಸ ಇಟ್ಟಿರುವ ಜನರ ಸೇವೆ ಮಾಡಬೇಕು ಎನ್ನುವುದು ಮತ್ತೊಂದು ಕಡೆ. ಸಮಯ ನೋಡಿ ಕೆಲಸ ಮಾಡುವುದು ಕರ್ತವ್ಯ, ಸಮಯಾತೀತವಾಗಿ ಕೆಲಸ ಮಾಡುವುದು ನೈಜ ಸೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಬಿಎಂಪಿ ವತಿಯಿಂದ ನಾಯಂಡಹಳ್ಳಿ ವಾರ್ಡ್‌ನ ಪಂತರಪಾಳ್ಯದಲ್ಲಿ ನಿರ್ಮಿಸಿರುವ ಡಾ. ಪುನೀತ್ ರಾಜ್‌ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಪುನರುಜ್ಜೀವನಗೊಂಡ ನಾಯಂಡಹಳ್ಳಿ ಕೆರೆ ಲೋಕಾರ್ಪಣೆಗೊಳಿಸಿ ಗುರುವಾರ ಮಾತನಾಡಿದರು.

'ಬೆಂಗಳೂರು ನಮ್ಮ ಹೆಮ್ಮೆ, ಪ್ರತಿಷ್ಠೆ, ಗೌರವ. ಕೆಂಪೇಗೌಡರು ಕಟ್ಟಿರುವ ಬೆಂಗಳೂರು ಹೆಸರನ್ನು ಉಳಿಸುವುದು ನಮ್ಮ ಕರ್ತವ್ಯ. ಬೆಂಗಳೂರಿನ ಬ್ರ್ಯಾಂಡ್ ಉಳಿಸಲು ಎಲ್ಲರೂ ಅಭಿಮಾನ ಬೆಳೆಸಿಕೊಳ್ಳಬೇಕು' ಎಂದರು.



ಪಂತರಪಾಳ್ಯದಲ್ಲಿ ಡಾ. ಪುನೀತ್ ರಾಜ್ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಉದ್ಘಾಟಿಸಿದರು. ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣ ಗೌಡ, ಬಿಬಿಎಂಪಿ ವಲಯ ಆಯುಕ್ತ ಡಾ. ಆರ್.ಎಲ್.ದೀಪಕ್, ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್. ಆರ್. ರಮೇಶ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ವಸತಿ ಸಚಿವ ವಿ. ಸೋಮಣ್ಣ, ನಟ ರಾಘವೇಂದ್ರ ರಾಜ್‌ಕುಮಾರ್ ಇದ್ದರು.

'ಸೋಮಣ್ಣ ವಸತಿ ಸಚಿವರಾಗಿ ಕೊಳೆಗೇರಿಗಳಲ್ಲಿ ವಾಸಿಸುವ 3 ಲಕ್ಷಕ್ಕಿಂತ ಹೆಚ್ಚು ಜನರಿಗೆ ಹಕ್ಕುಪತ್ರ ವಿತರಿಸಿದ್ದಾರೆ. 85 ಸಾವಿರ ಮನೆಗಳನ್ನು ವಿತರಿಸಲಾಗಿದೆ. ಬೆಂಗಳೂರಿನಲ್ಲಿ 1 ಲಕ್ಷ ಮನೆ ನಿರ್ಮಾಣ ಗುರಿ ಹೊಂದಿದ್ದು, ರಾಜ್ಯದಲ್ಲಿ 5 ಲಕ್ಷ ಮನೆ ಹಂಚಿಕೆ ಮಾಡಲಾಗುತ್ತಿದೆ' ಎಂದು ನುಡಿದರು.

ಸಚಿವರಾದ ವಿ ಸೋಮಣ್ಣ ಮಾತನಾಡಿ, 'ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ಮಾದರಿ ಕ್ಷೇತ್ರವಾಗಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಮುಖ ಕಾರಣ. ಸ್ನೇಹಕ್ಕೋಸ್ಕರ ಒಂದು ಕ್ಷೇತ್ರಕ್ಕೆ ಒಬ್ಬ ಮುಖ್ಯಮಂತ್ರಿ ಹತ್ತಾರು ಬಾರಿ ಭೇಟಿ ನೀಡಿದ್ದು ನನ್ನ 45 ವರ್ಷಗಳ ರಾಜಕಾರಣ ದಲ್ಲೇ ಮೊದಲು. ಕ್ಷೇತ್ರದಲ್ಲಿ ಒಟ್ಟು 515 ಬೆಡ್ ಗಳ ಅತ್ಯಾಧುನಿಕ ಆಸ್ಪತ್ರೆಗಳು ನಿರ್ಮಾಣವಾಗಿವೆ. ಕೆಲವೇ ದಿನಗಳಲ್ಲಿ ಈ ಆಸ್ಪತ್ರೆ ಸಾರ್ವಜನಿಕರ ಬಳಕೆಗೆ ತೆರೆಯಲಿದೆ' ಎಂದು ಹೇಳಿದರು.

ಸಚಿವ ಡಾ. ಕೆ.ಸುಧಾಕರ್, ಚಿತ್ರನಟ ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಇದ್ದರು.

ಪರಮಶಿವಮೂರ್ತಿ ಹಂಪಿ ಕನ್ನಡ ವಿ.ವಿ ನೂತನ ಕುಲಪತಿ

ಹೊಸಪೇಟೆ (ವಿಜಯನಗರ): ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಪ್ರೊ.ಡಿ.ವಿ. ಪರಮಶಿವಮೂರ್ತಿ ಅವರು ನೇಮಕಗೊಂಡಿದ್ದಾರೆ. ತುಮಕೂರು ವಿಶ್ವವಿದ್ಯಾಲಯದ ಡಾ.ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿರುವ ಪರಮಶಿವಮೂರ್ತಿ ಅವರನ್ನು ಮೂರು ವರ್ಷಗಳ ಅವಧಿಗೆ ಕುಲಪತಿಯಾಗಿ ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗುರುವಾರ ಆದೇಶ ಹೊರಡಿಸಿದ್ದಾರೆ. ಹಿಂದಿನ ಕುಲಪತಿ



ಪರಮಶಿವಮೂರ್ತಿ


ಪ್ರೊ.ಸ.ಚಿ. ರಮೇಶ ಅವರ ಅವಧಿ ಫೆ.20ರಂದು ಕೊನೆಗೊಂಡಿತ್ತು. ಹೊಸ ಕುಲಪತಿ ಆಯ್ಕೆ ಪ್ರಕ್ರಿಯೆಗೆ ರಚಿಸಲಾಗಿದ್ದ ಶೋಧನಾ ಸಮಿತಿ ಸಕಾಲಕ್ಕೆ ಸಭೆ ಸೇರಲು ಸಾಧ್ಯವಾಗಿರಲಿಲ್ಲ. ಬಳಿಕ ರಾಜ್ಯಪಾಲರು ತಮ್ಮ ವಿವೇಚನಾಧಿಕಾರ ಬಳಸಿ ಫೆ.21ರಂದು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಟಿ.ಪಿ. ವಿಜಯ್ ಅವರನ್ನು ಪ್ರಭಾರ ಕುಲಪತಿಯಾಗಿ ನೇಮಿಸಿದ್ದರು.

ಮೈಸೂರು ವಿವಿ: ಲೋಕನಾಥ್ ಕುಲಪತಿ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಪ್ರೊ. ಲೋಕನಾಥ್ ಎನ್.ಕೆ. ಅವರು ನೇಮಕವಾಗಿದ್ದು, ಗುರುವಾರ ಸಂಜೆ ಅಧಿಕಾರ ಸ್ವೀಕರಿಸಿದರು.

ಕುಲಪತಿಯಾಗಿದ್ದ ಪ್ರೊ.ಜಿ.ಹೇಮಂತಕುಮಾರ್ ಅವರ ಅಧಿಕಾರವಧಿ 2022ರ ನ.15ರಂದು ಮುಕ್ತಾಯಗೊಂಡಿತ್ತು. ಹಂಗಾಮಿ ಕುಲಪತಿಯಾಗಿ



ಲೋಕನಾಥ್

ಪ್ರೊ. ಎಚ್. ರಾಜಶೇಖರ್ ನ.18ರಂದು ಅಧಿಕಾರ ವಹಿಸಿಕೊಂಡಿದ್ದರು. ಅವರ ಬಳಿಕ, ಪ್ರೊ.ಮುಜಾಫರ್ ಅಸ್ಸಾದಿ ಫೆ.18ರಂದು ಅಧಿಕಾರ ಸ್ವೀಕರಿಸಿದ್ದರು. ಶೋಧನಾ ಸಮಿತಿ ಶಿಫಾರಸಿನಂತೆ ಲೋಕನಾಥ್ ಅವರನ್ನು ರಾಜ್ಯಪಾಲರು ನೇಮಿಸಿದ್ದಾರೆ.

81,582 ಕುಟುಂಬಕ್ಕೆ 27ರಂದು ಹಕ್ಕುಪತ್ರ ವಿತರಣೆ: ಅಶೋಕ

ಬೆಂಗಳೂರು: 'ಗೊಲ್ಲರಹಟ್ಟಿ, ಕುರುಬರ ದೊಡ್ಡಿಗಳಲ್ಲಿ ವಾಸ ಮಾಡುವ 81,582 ಕುಟುಂಬಗಳಿಗೆ ಇದೇ 27ರಂದು ಹಕ್ಕುಪತ್ರ ವಿತರಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಜಿಲ್ಲಾಧಿಕಾರಿಗಳ ಜೊತೆ ಗುರುವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಮಾತನಾಡಿದ ಅವರು, 'ಅಂದು ಬೆಳಿಗ್ಗೆ 11 ಗಂಟೆಗೆ 23 ಜಿಲ್ಲೆಗಳ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

'ಅಂದು ಚಿಕ್ಕಬಳ್ಳಾಪುರದಲ್ಲಿ ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಚಾಲನೆ ನೀಡಲಿದ್ದಾರೆ. ಕೇಂದ್ರ ಸಚಿವ ಮನ್‌ಸುಖ್ ಮಾಂಡವೀಯ, ಸಚಿವ ಡಾ. ಸುಧಾಕರ್ ಉಪಸ್ಥಿತರಿರಲಿದ್ದಾರೆ. ಅದೇ ದಿನ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಹಕ್ಕುಪತ್ರ ನೀಡಲಾಗುವುದು. 'ಈವರೆಗೆ 1,672 ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮ ಎಂದು ಘೋಷಿಸಲಾಗಿದೆ. 2,488 ಪ್ರದೇಶಗಳ ಘೋಷಣೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಆ ಮೂಲಕ, 81 ಸಾವಿರಕ್ಕೂ ಹೆಚ್ಚು ಜನರಿಗೆ ಒಂದೇ ದಿನದಲ್ಲಿ ಹಕ್ಕುಪತ್ರ ನೀಡಲಾಗುವುದು' ಎಂದರು.

ಸಿ.ಎಂ.ಗೆ ಅವಮಾನ: ಖಂಡನೆ

ಬೆಳಗಾವಿ: 'ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮರಾಠಿಗರ ಮೇಲೆ 'ದಾದಾಗಿರಿ' ಮಾಡುತ್ತಿದ್ದಾರೆ' ಎಂದು ಮಂಗಳವಾರ ಮಹಾರಾಷ್ಟ್ರ ವಿಧಾನ ಪರಿಷತ್ ಅಧಿವೇಶನದಲ್ಲಿ ಸದಸ್ಯೆ ಡಾ.ಮನಿಷಾ ಹರಿಹಾಯ್ದಿದ್ದಾರೆ.

'ಗಡಿಯಲ್ಲಿರುವ 865 ಹಳ್ಳಿಗಳಿಗೆ ಮಹಾರಾಷ್ಟ್ರ 'ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ಯೋಜನೆ' ಘೋಷಣೆ ಮಾಡಿದೆ. ಇದನ್ನು ಪ್ರಶ್ನಿಸಲು ಬೊಮ್ಮಾಯಿ ಅವರಿಗೆ ಎಷ್ಟು ಧೈರ್ಯ? ನಮ್ಮ ಜನರಿಗೆ ನಾವು ಆರೋಗ್ಯ ವಿಮೆ ಘೋಷಣೆ ಮಾಡಿದರೆ ತಪ್ಪೇನು?' ಎಂದು ಡಾ.ಮನಿಷಾ ಪ್ರಶ್ನಿಸಿದ್ದಾರೆ.

ಅವಮಾನಕ್ಕೆ ಖಂಡನೆ: ಈ ಬಗ್ಗೆ ಕಿಡಿ ಕಾರಿದ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ, 'ಸಚಿವೆ ಹೇಳಿಕೆ ಖಂಡನೀಯ' ಎಂದಿದ್ದಾರೆ.

3ರಂದು ಐಪಿಎ ನೀರಥಾನ್

ಬೆಂಗಳೂರು: ಇಂಡಿ ಯನ್ ಪ್ಲಂಬಿಂಗ್ ಅಸೋಸಿಯೇಷನ್(ಐಪಿಎ) ಜಲಜಾಗೃತಿ ಉತ್ಸವ 'ನೀರಥಾನ್-ನೀರಿಗಾಗಿ ಓಟ'ವನ್ನು ಏ.3ರಂದು ಆಯೋಜಿಸಿದೆ.

ಜಲ ಸಂರಕ್ಷಣೆಗೆ ಪ್ರೋತ್ಸಾಹ ನೀಡುವಂತಹ ನಡವಳಿಕೆಯ ಬದಲಾವಣೆಯ ಪ್ರಭಾವ ಬೀರುವ ಜಾಗೃತಿಯನ್ನು ಸಾಮಾನ್ಯ ಜನರಲ್ಲಿ ಹರಡುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಸಂಸ್ಥೆಯ ಬಿ.ಕೆ. ಪ್ರಸಾದ್ ತಿಳಿಸಿದರು.

ರನ್ಸ್ 360ರ ರೂಬಿ, ಬಿ-ಫಿಟ್‌ನ-ಭರಣಿ, ಪಿಎಸ್‌ಎನ್ ರನ್ಸ್‌ನ ಸಂಗಮಿತ್ರ, ರೂಪದರ್ಶಿ ಶ್ವೇತಾ ಮರ್ಯ, ಫಾಸ್ಟ್ ಆ್ಯಂಡ್ ಅಪ್ ರಾಯಭಾರಿ ಸ್ಮಿತಾ ಶರ್ಮಾ, ಓಡು ರನ್ನಿಂಗ್ ಕ್ಲಬ್‌ನ ಪ್ರವೀಣ್ ಶೆಟ್ಟಿ, ಫಿಟ್‌ನೆಸ್ ರೂಪದರ್ಶಿ ಲವೆನಾ ಬಲನಿ, ಸಿಸ್ಕೊ ರನ್‌ನ ಬಾಲಸುಬ್ರಮಣಿಯಂ ಪಾಲ್ಗೊಳ್ಳಲಿದ್ದಾರೆ. ನೀರಥಾನ್ 10 ಕಿ.ಮೀ, 5 ಕಿ.ಮೀ, 3 ಕಿ.ಮೀ. ಓಟಗಳನ್ನು ಹೊಂದಿದೆ. ₹1.76 ಲಕ್ಷ ಮೊತ್ತದ ಒಟ್ಟು 30 ಬಹುಮಾನಗಳಿವೆ. ಹೆಚ್ಚಿನ ಮಾಹಿತಿಗೆ: www.ipaneerathon.com

ಬಸವನಗುಡಿ ಅಭಿವೃದ್ಧಿಗೆ ಒತ್ತು: ಅರಮನೆ ಶಂಕರ್

ಬೆಂಗಳೂರು: 'ಪಾರಂಪರಿಕ ಮತ್ತು ಐತಿಹಾಸಿಕ ಯಾತ್ರಾ ಸ್ಥಳಗಳನ್ನು ಹೊಂದಿರುವ ಬಸವನಗುಡಿ ವಿಧಾನಸಭೆ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲಾಗುವುದು' ಎಂದು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅರಮನೆ ಶಂಕರ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದಅವರು,'ಚುನಾವಣೆಯಲ್ಲಿ ಆಯ್ಕೆ ಮಾಡಿದರೆ ಕ್ಷೇತ್ರದ ಎಲ್ಲಾ ಪ್ರಮುಖ ಪೂಜಾ ಸ್ಥಳಗಳಲ್ಲೂ ಅದ್ದೂರಿಯಾಗಿ ಹಬ್ಬ ಆಚರಿಸಲು ಕ್ರಮವಹಿಸಲಾಗುವುದು. ಇಲ್ಲಿನ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಖಾಸಗಿ ಶಾಲೆಗಳಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ಆಡಳಿತಕ್ಕೆ ಆದ್ಯತೆ ನೀಡಲಾಗುವುದು. ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುವುದು' ಎಂದರು.

'ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಶಾಲಾ ಪ್ರವೇಶಕ್ಕೆ ಆರ್ಥಿಕ ಸಹಾಯ ನೀಡಲಾಗುವುದು. ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು. ಮಹಿಳೆಯರು, ಯುವಜನರಿಗೆ ಕೌಶಲ ತರಬೇತಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಹೈಟೆಕ್ ಗ್ರಂಥಾಲಯ ನಿರ್ಮಾಣ, ಪೌರಕಾರ್ಮಿಕ ಮಹಿಳೆಯರಿಗೆ ವಿಶ್ರಾಂತಿ ಕೊಠಡಿ ಸೇರಿ ವಿವಿಧ ಯೋಜನೆಗಳನ್ನು ಜಾರಿ ಮಾಡಲಾಗುವುದು' ಎಂದು ಅವರು ತಿಳಿಸಿದರು.

ಕೋವಿಡ್: ಎಕ್ಸ್‌ಬಿಬಿ 1.16 ತಳಿಯ ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದ್ದು, ರೂಪಾಂತರಿ ಎಕ್ಸ್‌ಬಿಬಿ 1.16 ತಳಿಯ 349 ಪ್ರಕರಣಗಳು ದೃಢಪಟ್ಟಿವೆ ಎಂದು ಕೇಂದ್ರ ಸರ್ಕಾರದ ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆಯ (ಐಎನ್‌ಎಸ್‌ಎಸಿಒಜಿ) ಅಂಕಿಅಂಶ ತಿಳಿಸಿದೆ.

ಸಾರ್ವಜನಿಕ ತಿಳುವಳಿಕೆಗಾಗಿ

ಈ ಕೆಳಗೆ ನಮೂದಿಸಿದ ಹಾಗೂ ಪ್ರಕಾರ ವಿವರಿಸಲಾದ ಆಸ್ತಿಯನ್ನು ಸರಿಯಾದ ನ್ಯಾಯ ತಪಾಸಣೆ ನಡೆಯುತ್ತಿದೆ. ಯಾವುದೇ ವ್ಯಕ್ತಿ/ಗಳು, ಕಾನೂನು ಘಟಕ, ಸಂಸ್ಥೆ, ಸಂಸ್ಥೆ (ಕಾರ್ಪೊರೇಟ್ /ಬ್ಯಾಂಕ್/ ಹಣಕಾಸು ಸಂಸ್ಥೆ/ಎನ್‌ಬಿಎಫ್‌ಸಿ ಅಥವಾ ಇತರೆ) ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ, ಶುಲ್ಕ, ಬಾಕಿ ಇರುವ ದಾವೆ, ಯಾವುದೇ ನ್ಯಾಯಾಲಯದ ಆದೇಶ ಸೇರಿದಂತೆ ಆದರೆ ಸೀಮಿತವಾಗಿರದೆ ಯಾವುದೇ ಪ್ರಕೃತಿಯ ಯಾವುದೇ ಹಕ್ಕು ಹೊಂದಿರುವ, ನ್ಯಾಯಾಲಯದಿಂದ ನೀಡಲಾದ ಆಸ್ತಿಯ ಲಗತ್ತಿಸುವಿಕೆ, ಆಸ್ತಿಯ ಮೇಲೆ ಪರಿಣಾಮ ಬೀರುವ ಮರಣದಂಡನೆ ಪ್ರಕ್ರಿಯೆಗಳು, ಭದ್ರತಾ ಆಸಕ್ತಿ, ಭೂಸ್ವಾಧೀನ ಪ್ರಕ್ರಿಯೆಗಳು ಯಾವುದಾದರೂ ಅಥವಾ ಹಿಂದೆ ಮಾಡಿದ್ದರೆ ಅಥವಾ ಪ್ರಸ್ತುತ ಮಾಡಲಾದ ಬೇಡಿಕೆ ಮತ್ತು ಕೆಳಗೆ ತಿಳಿಸಲಾದ ಶೆಡ್ಯೂಲ್ ಆಸ್ತಿಯ ವಿರುದ್ಧ/ ಮೇಲೆ ಭವಿಷ್ಯದಲ್ಲಿ ಮಾಡಬಹುದಾದ ಬೇಡಿಕೆ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳ ಅವಧಿಯೊಳಗೆ ಅಂತಹ ಹಕ್ಕು/ಗಳ ಎಲ್ಲಾ ವಸ್ತು ವಿವರಗಳೊಂದಿಗೆ ಕೆಳಗೆ ಒದಗಿಸಲಾದ ಯಾವುದೇ ಸಂಪರ್ಕ ವಿವರಗಳ ಮೂಲಕ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಈ ಮೂಲಕ ಕರೆ ನೀಡಲಾಗಿದೆ. ವಿಫಲವಾದರೆ, ಯಾವುದೇ ಕ್ಲೈಮ್‌ಗಳು ಪರಿಣಾಮ ಬೀರುವುದಿಲ್ಲ.

ಆಸ್ತಿಯ ವಿವರ

ಮುನ್ಸಿಪಲ್ ಸಂಖ್ಯೆ. 414 ರಲ್ಲಿರುವ ಎಲ್ಲಾ ಮನೆ ಆಸ್ತಿ, ಕೋರಮಂಗಲ ಮೂರನೇ ಬ್ಲಾಕ್, ಮುನ್ಸಿಪಲ್ ವಾರ್ಡ್ ನಂ. 68–ಈಜಿಪುರ, ಬೆಂಗಳೂರು ಮತ್ತು ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 80 ಅಡಿ (24.38 ಮೀಟರ್) ಮತ್ತು ಉತ್ತರದಿಂದ ದಕ್ಷಿಣಕ್ಕೆ: 118 ಅಡಿ ಮತ್ತು 6 ಇಂಚುಗಳು (36.12 ಮೀಟರ್) ಮತ್ತು ಸಂಪೂರ್ಣವಾಗಿ 9480 ಚದರ ಅಳತೆ ಅಡಿ, ಖಾತಾ PID ಸಂಖ್ಯೆ. 68–2–414 ಅನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಹೊರಡಿಸಿದೆ ಮತ್ತು

ಪೂರ್ವ: ಆಸ್ತಿ ಹೊಂದಿರುವ ಸಂಖ್ಯೆ 413 **ಪಶ್ಚಿಮ**: ಆಸ್ತಿ ಹೊಂದಿರುವ ಸಂಖ್ಯೆ 415
ಉತ್ತರ: ಆಸ್ತಿ ಹೊಂದಿರುವ ಸಂಖ್ಯೆ 437 **ದಕ್ಷಿಣ**: ರಸ್ತೆ

ಆಸ್ತಿಯಲ್ಲಿ 1183 ಚದರ ಅಡಿ ಅಳತೆಯ ವಸತಿ ಗೃಹವನ್ನು ಹೊಂದಿದೆ.

Nayana Tara B. G., BA LLB, BCL (Oxon), Advocate
No. 27, Serpentine Road, Kumara Park West, Bangalore 560020
Nayanatara.bg@nbgchambers.com, Ph: 080-23348096

G20 · Azadi Ka Amrit Mahotsav

ಭಾರತ ಸರ್ಕಾರದ ಸಂವಹನ ಮಂತ್ರಾಲಯ, ದೂರಸಂಪರ್ಕಗಳ ಇಲಾಖೆ
ಕಛೇರಿ ವಿಳಾಸ: ಸಲಹೆಗಾರರು, ಕರ್ನಾಟಕ ಪರವಾನಗಿ ಸೇವಾ ಪ್ರದೇಶ,
ಕೊಠಡಿ ಸಂಖ್ಯೆ 102, ಮೊದಲನೇ ಮಹಡಿ, ಸಿಟಿಓ ಕಟ್ಟಡ, ರಾಜಭವನ ರಸ್ತೆ, ಬೆಂಗಳೂರು, ಕರ್ನಾಟಕ–560001.

ಭಾರತ ಸರ್ಕಾರವು
"ಪಿಎಂ ವಾಣಿ ಯೋಜನೆಯನ್ನು"
ಪರಿಚಯಿಸುತ್ತಿದೆ ಸಾರ್ವಜನಿಕ ದತ್ತಾಂಶ ಕಛೇರಿ ಸಂಗ್ರಾಹಕ (ಪಿಡಿಒಎ) ರಾಗಿ ನೋಂದಾಯಿಸುವ ಮೂಲಕ ಸಾರ್ವಜನಿಕ ವೈ–ಫೈ ನೆಟ್‌ವರ್ಕ್‌ನ್ನು ಸ್ಥಾಪಿಸುವುದಕ್ಕೆ ಆಹ್ವಾನ

ನೋಂದಣಿ ಪ್ರಮಾಣ ಪತ್ರವನ್ನು 7 ದಿನಗಳೊಳಗೆ ನೀಡಲಾಗುವುದು
ಯಾವುದೇ ಅಂತರ್ಜಾಲ ಪರವಾನಗಿ ಇಲ್ಲ
ಪರವಾನಗಿ ಶುಲ್ಕವಿಲ್ಲ ನೋಂದಣಿ ಶುಲ್ಕವಿಲ್ಲ
ಭಾರತದ ಯಾವುದೇ ಪ್ರದೇಶದಲ್ಲಿ ಕಾರ್ಯನಿರ್ವಹಿಸುವುದಕ್ಕೆ ಅನುಮತಿಸಿದೆ.

ಸಾರ್ವಜನಿಕ ವೈ–ಫೈ ನೆಟ್‌ವರ್ಕ್ ಅನ್ನು ಸ್ಥಾಪಿಸುವುದಕ್ಕೆ ಆಸಕ್ತಿ ಇರುವ ಕಂಪನಿಗಳನ್ನು ದೂರಸಂಪರ್ಕ ಇಲಾಖೆ (ಡಿಒಟಿ)ಯ ಆನ್‌ಲೈನ್ ಪೋರ್ಟಲ್ **https://saralsanchar.gov.in** ನಲ್ಲಿ ಸಾರ್ವಜನಿಕ ದತ್ತಾಂಶ ಕಛೇರಿ ಸಂಗ್ರಹಕರಾಗಿ (ಪಿಡಿಒಎ) ನೋಂದಾಯಿಸುವುದಕ್ಕೆ ಈ ಮೂಲಕ ಆಹ್ವಾನಿಸಲಾಗಿದೆ.

ಸಾರ್ವಜನಿಕ ದತ್ತಾಂಶ ಕಛೇರಿ ಸಂಗ್ರಾಹಕರು (ಪಿಡಿಒಎ) ಪಿಡಿಒಗಳೊಂದಿಗೆ (ಸಾರ್ವಜನಿಕ ದತ್ತಾಂಶ ಕಛೇರಿ) ವೈ–ಫೈ ಸೌಲಭ್ಯ ಕೇಂದ್ರಗಳನ್ನು ಹೆಚ್ಚಿಸುವ "ವಾಣಿ" ಯೋಜನೆಯನ್ನು ನಿರ್ವಹಿಸುವ ಮತ್ತು ಕಾರ್ಯಾಚರಣೆಗೊಳಿಸುವ ವಾಣಿಜ್ಯ ಒಪ್ಪಂದವನ್ನು ಹೊಂದಿರುತ್ತಾರೆ.

ಸಾರ್ವಜನಿಕ ದತ್ತಾಂಶ ಕಛೇರಿ ಸಂಗ್ರಾಹಕರು (ಪಿಡಿಒಎ) ವೈಯಕ್ತಿಕ ಚಂದಾದಾರರ ಬಳಕೆಯ ವಿವರಗಳನ್ನು ನಿರ್ವಹಿಸಬೇಕು ಮತ್ತು ಸುಂಕ ದರಪಟ್ಟಿ ಮುಂತಾದವನ್ನು ಕೂಡ ಘೋಷಿಸಬೇಕು. ದೂರ ಸಂಪರ್ಕ ಇಲಾಖೆಯೊಂದಿಗೆ ಸಾರ್ವಜನಿಕ ಕಚೇರಿ ದತ್ತಾಂಶಕ್ಕೆ ಯಾವುದೇ ನೋಂದಣಿಯ ಅಗತ್ಯವಿಲ್ಲ. ಆದಾಗ್ಯೂ, ಆತನು/ಆಕೆಯು ಪರಸ್ಪರ ಅಂತರ್ ಸಂಪರ್ಕ ಕಲ್ಪಿಸುವುದಕ್ಕಾಗಿ ಯಾವುದೇ ಟಿಎಸ್‌ಪಿ/ಐಎಸ್‌ಪಿಗಳೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವ ಅಗತ್ಯವಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು **https://pmwani.gov.in/wani** ವಿಳಾಸಕ್ಕೆ ಭೇಟಿ ನೀಡಿ.

ಹಿರಿಯ ಉಪ–ಮಹಾ ನಿರ್ದೇಶಕರು, ದೂರಸಂಪರ್ಕ ಇಲಾಖೆ, ಕರ್ನಾಟಕ ಎಲ್‌ಎಸ್‌ಎ

CBC 06229/12/0002/2223

Azadi Ka Amrit Mahotsav · ಟ್ರೈಫೆಡ್ TRIFED

ಟ್ರೈಬಲ್ ಕೋಆಪರೇಟಿವ್ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಫೆಡರೇಶನ್ ಆಫ್ ಇಂಡಿಯಾ ಲಿಮಿಟೆಡ್ (ಟ್ರೈಫೆಡ್)
(ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ)
ಪ್ರಧಾನ ಕಚೇರಿ: ಎನ್‌ಎಸ್‌ಐಸಿ ಬಿಜನೆಸ್ ಪಾರ್ಕ್, ಎನ್‌ಎಸ್‌ಐಸಿ ಎಸ್ಟೇಟ್, ಓಖ್ಲಾ ಫೇಸ್–3, ಓಕ್ಲಾ ಕೈಗಾರಿಕಾ ಪ್ರದೇಶ, ನವದೆಹಲಿ–110020.
ದೂರವಾಣಿ: 011–71600414/415/416

ಖಾಲಿ ಹುದ್ದೆ

ಭಾರತ ಸರ್ಕಾರದ ಟ್ರೈಫೆಡ್ ಸಂಸ್ಥೆಯು 3 ವರ್ಷಗಳ ಅವಧಿಗೆ ಡೆಪ್ಯುಟೇಶನ್ ಆಧಾರದಲ್ಲಿ ಹದಿನೇಳು ಅಸಿಸ್ಟಂಟ್ ಮ್ಯಾನೇಜರ್ ಹುದ್ದೆಗಳಿಗೆ, ವೇತನ ಶ್ರೇಣಿ (ರೂ. 56100–177500) ವೇತನ ಹಂತ–10 ರಲ್ಲಿ ನೇಮಕಾತಿ ಮಾಡಿಕೊಳ್ಳಲು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಜನರಲ್ ಮ್ಯಾನೇಜರ್, ಪರ್ಸನಲ್ ಡಿವಿಜನ್, ಟ್ರೈಫೆಡ್ ಇವರಿಗೆ **17.04.2023** ರೊಳಗೆ ತಲುಪುವಂತೆ ಸೂಕ್ತ ರೀತಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಅರ್ಹತಾ ಮಾನದಂಡ ಹಾಗೂ ಇನ್ನಿತರ ವಿವರಗಳಿಗಾಗಿ ದಯವಿಟ್ಟು ಟ್ರೈಫೆಡ್‌ನ https://trifed.tribal.gov.in ವೆಬ್‌ಸೈಟ್‌ನಲ್ಲಿ ಅಪರ್ಚುನಿಟೀಸ್–ಕರಿಯರ್ ಸೆಕ್ಷನ್ ಪರಿಶೀಲಿಸಿರಿ.

CBC 43104/12/0043/2223 ಜನರಲ್ ಮ್ಯಾನೇಜರ್ (ಪರ್ಸನಲ್)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, (ಕ್ಯೂಎ/ಕ್ಯೂಸಿ) ವಿಭಾಗ, ಪಶ್ಚಿಮ ವಲಯ, ರೂಂ ನಂ.101, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–560 002.

ಸಂಖ್ಯೆ:ಕಾಪಾಅ(ಕ್ಯೂಎ/ಕ್ಯೂಸಿ)/ದಕ್ಷಿಣವ/ಟೆಂಡರ್/02/2022-23 ದಿನಾಂಕ: 23-03-2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೃಬೆಂಮಪಾ, ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ (ದಕ್ಷಿಣ ವಲಯ) ರವರು ಮೇಲ್ವಿಚಾರಣೆ ಗುಣಮಟ್ಟ ನಿಯಂತ್ರಣ ಸೇರಿದಂತೆ ಯೋಜನಾ ನಿರ್ವಹಣೆಗೆ ಸಲಹಾ ಸೇವೆಗಳನ್ನು ಒದಗಿಸುವ ರೀತಿಯ ಕೆಲಸವನ್ನು ಮಾಡಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನೆ ವೆಚ್ಚ (ಲಕ್ಷ ರೂ. ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1.	ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ವಾರ್ಡ್ ನಂ.201, 202, 205 ಮತ್ತು 207 (ಹಳೆಯ ವಾರ್ಡ್ ನಂ.166, 165, 181, 182 ಮತ್ತು 183)ರ ರಸ್ತೆ ಮತ್ತು ಒಳಚರಂಡಿಗಳ ಸಮಗ್ರ ಅಭಿವೃದ್ಧಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ PMC ಸೇವೆಗಳನ್ನು ಒದಗಿಸುವುದು (ಸ.ಆ. ಕ್ರ.ಸಂ. 23, 24, 26, 28, 29 ಮತ್ತು 30 ರಲ್ಲಿನ ಕೆಲಸಗಳನ್ನು ಒಳಗೊಂಡಿದೆ) ಪ್ಯಾಕೇಜ್ ಸಂಖ್ಯೆ CMANY-PN-06.	1000.00	20,000/-
2.	ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ವಾರ್ಡ್ ನಂ.203, 206, 208 ಮತ್ತು 209 (ಹಳೆಯ ವಾರ್ಡ್ ನಂ.180, 182, 183 ಮತ್ತು 161)ರ ರಸ್ತೆ ಮತ್ತು ಒಳಚರಂಡಿಗಳ ಸಮಗ್ರ ಅಭಿವೃದ್ಧಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ PMC ಸೇವೆಗಳನ್ನು ಒದಗಿಸುವುದು (ಸ.ಆ.ಕ್ರ.ಸಂ. 25,27,31,32,33 ಮತ್ತು 34 ರಲ್ಲಿನ ಕೆಲಸಗಳನ್ನು ಒಳಗೊಂಡಿದೆ) ಪ್ಯಾಕೇಜ್ ಸಂಖ್ಯೆ CMANY-PN-07.	1000.00	20,000/-
3.	ಪದ್ಮನಾಭನಗರ ವಿಧಾನಸಭಾ ಕ್ಷೇತ್ರ 181–22–000010ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ PMC ಸೇವೆಗಳನ್ನು ಒದಗಿಸುವುದು.	500.00	12,500/-

ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ದಾಖಲೆಗಳ ದೊರೆಯುವ ದಿನಾಂಕ 27.03.2023ರ ನಂತರ. 2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 30.03.2023 ರಂದು 3.00 ಗಂಟೆಗೆ. 3) ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರರು, ಯೋಜನಾ ಕೇಂದ್ರ, (ಕ್ಯೂಎ/ಕ್ಯೂಸಿ) ರೂಂ ನಂ.101, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–02 ಇಲ್ಲಿ ದಿನಾಂಕ: 30.03.2023ರಂದು ಸಂಜೆ 4:00 ಗಂಟೆಗೆ ನಡೆಸಲಾಗುವುದು. 4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 04.04.2023 ರಂದು 4.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 05.04.2023ರ ಸಂಜೆ 4:45 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ನಲ್ಲಿ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಕ್ಯೂಎ/ಕ್ಯೂಸಿ ವಿಭಾಗ, ದಕ್ಷಿಣ ವಲಯ, ಬೃಬೆಂಮಪಾ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ (ದಕ್ಷಿಣ) ವಿಭಾಗ, ಜಯನಗರ 2ನೇ ಬ್ಲಾಕ್, ಬೆಂಗಳೂರು.

ಸಂಖ್ಯೆ:ಕಾಪಾಅ/ಯೋ/ದ/ಟೆಂ.ಪ್ರ/22/2022–23 ದಿನಾಂಕ:23.03.2023

ಟೆಂಡರ್ ತಿದ್ದುಪಡಿ ಪ್ರಕಟಣೆ

ವಿಷಯ: ಈ ಕಚೇರಿಯ ಇ–ಪ್ರೊಕ್ಯೂರ್‌ಮೆಂಟ್ ಇ–ಹರಾಜು ಮುಖಾಂತರ ಕರೆಯಲಾದ ಟೆಂಡರ್ ಪ್ರಕಟಣೆಯನ್ನು ತಿದ್ದುಪಡಿ ಮಾಡಿರುವ ಬಗ್ಗೆ.

ಉಲ್ಲೇಖ: ಈ ಕಚೇರಿ ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ: ಕಾ.ಪಾ.ಅ.ಯೋ (ದಕ್ಷಿಣ)/ಇ–ಪ್ರೊಕ್/22/2022–23, ದಿನಾಂಕ: 07.03.2023

ಈ ಕಚೇರಿಯಿಂದ ದಿನಾಂಕ: 07.03.2023 ರಂದು ಸಂಖ್ಯೆ: ಕಾ.ಪಾ.ಅ (ಯೋ–ದ/ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್/22/2022–23ರಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಇ–ಹರಾಜು ಮುಖಾಂತರ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಯಿರುವ ಮಳಿಗೆ, ಕಚೇರಿ ಹಾಗೂ ಹೋಟೆಲ್‌ಗಳಿಗೆ ಇ–ಹರಾಜು ಮುಖಾಂತರ ಟೆಂಡರ್ ಆಹ್ವಾನಿಸಲು ಕರೆಯಲಾಗಿದ್ದು, ಇ–ಹರಾಜು ಟೆಂಡರ್‌ನ ಕ್ರಮ ಸಂಖ್ಯೆ 03ರ ಮಳಿಗೆಗೆ (Renting of Third Floor for office space at Sri M.Vishweshwaraiah Shopping Complex Building, (New complex) 4th block, Jayanagara) Area in Sqft Column ನಲ್ಲಿ ನಮೂದಿಸಲಾಗಿದ್ದ 162.60 ಚ.ಅಡಿಗಳ ವಿಸ್ತೀರ್ಣವನ್ನು 4897.62 ಚ.ಅಡಿಗಳ ವಿಸ್ತೀರ್ಣವೆಂದು ತಿದ್ದುಪಡಿ ಮಾಡಿ ಓದಿಕೊಳ್ಳಲು ಕೋರಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ)

Azadi Ka Amrit Mahotsav · icmr · NCDIR · G20

ICMR-NATIONAL CENTRE FOR DISEASE INFORMATICS AND RESEARCH
Department of Health Research, Ministry of Health and Family Welfare, Government of India,
Nirmal Bhawan- ICMR Complex, Poojanahalli Road, Kannamangala Post,
Bengaluru –562 110. Karnataka (India) Email: adm.ncdir@gov.in

Advertisement No. 03/2023

Online applications are invited from interested and eligible candidates for various contractual project posts i.e. Project Scientist – C (Medical), Project Scientist – B (Medical) Research Associate – III, Computer Programmer (Grade B), Computer Programmer (Grade A), Project Technical Officer (Statistics), Project Technical Officer (MSW), Project Assistant, Project Section Officer and Data Entry Operator (Grade B). Last date for submission of online applications: **11.04.2023 upto 05:00 PM.** Detailed advertisement and other terms and conditions can be viewed/downloaded from the websites www.ncdirindia.org/ www.icmr.nic.in

Sd/-
Director

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಇಮೇಲ್: comp.secy@astrazeneca.com ವೆಬ್: www.astrazeneca.com/india
ದೂರವಾಣಿ: 080 67748000, ಫ್ಯಾಕ್ಸ್: 080 6774 8557

ಸೂಚನೆ

ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 201ರ ಅನುಸಾರ ಆಸ್ಟ್ರಾಜೆನಿಕ ಫಾರ್ಮ ಇಂಡಿಯಾ ಲಿಮಿಟೆಡ್‌ನ ("ಕಂಪನಿ") ಸದಸ್ಯರಿಗೆ ಈ ಮೂಲಕ ನೋಟೀಸು ನೀಡಲಾಗುತ್ತಿದೆ, ಏನೆಂದರೆ: ಶ್ರೀ ಸಂಜೀವ್ ಕುಮಾರ್ ಪಂಚಾಲ್ (DIN: 09823879) ಅವರನ್ನು, ಕಂಪನಿಯ ನೇಮಕಾತಿ ಮತ್ತು ಸಂಭಾವನೆ ಸಮಿತಿಯ, ನಿರ್ದೇಶಕ ಮಂಡಲಿಯ ಮತ್ತು ಕಂಪನಿಯ ಸದಸ್ಯರ ಒಪ್ಪಿಗೆಗೆ ಒಳಪಟ್ಟ ನಿಯಮಗಳ ಮತ್ತು ಷರತ್ತುಗಳ ಪ್ರಕಾರ, ಜನವರಿ 1, 2023ರಿಂದ 3 (ಮೂರು) ವರ್ಷಗಳ ಅವಧಿಗೆ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಿಸುವುದಕ್ಕೆ ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ಷೆಡ್ಯೂಲ್ 5ರ ಭಾಗ 1ರ ಜೊತೆಯಲ್ಲಿ ಓದಿಕೊಂಡಂತೆ ಸೆಕ್ಷನ್ 196ರ ಅಡಿಯಲ್ಲಿ, ಹಾಗೂ (ಏನಾದರೂ ಇದಲ್ಲಿ) ಅನ್ವಯಿಸುವ ಇತರ ಪ್ರಾವಿಧಾನಗಳ ಅಡಿಯಲ್ಲಿ ಕೇಂದ್ರ ಸರ್ಕಾರದ ಅನುಮತಿಗಾಗಿ ಕೇಂದ್ರ ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಲು ಕಂಪನಿಯು ಉದ್ದೇಶಿಸಿದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 24.03.2023

ಮಾನಸ. ಆರ್
ಕಂಪನಿ ಸೆಕ್ರಟರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಬೃಬೆಂಮಪಾ/ಆಯುಕ್ತರು/ಪಿಎಸ್‌ಆರ್(ಜಿ)/4419/2022–23 **ನಮೂನೆ –3** ದಿನಾಂಕ: 23.03.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಸ್ಥಳೀಯ ಪ್ರಾಧಿಕಾರಗಳ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು **"ಬೆಂಗಳೂರಿನ ಓಕಳೀಪುರಂ ಜಂಕ್ಷನ್‌ನಲ್ಲಿ ಕೆಳ ಸೇತುವೆ ಮತ್ತು ರಸ್ತೆಯನ್ನು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ (ಮಾಗಡಿ ಡಿವಿಯೇಷನ್ ರಸ್ತೆಯಿಂದ ರಾಜಾಜಿನಗರದವರೆಗೆ ರಸ್ತೆಯನ್ನು ಸೃಜನೆ ಮತ್ತು ನಿರ್ಮಾಣ ಮಾಡುವುದು) ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು–560002** ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: **ಬೆಂಗಳೂರು ನಗರ** ತಾಲ್ಲೂಕಿನ ಹೆಸರು: **ಬೆಂಗಳೂರು ಉತ್ತರ** ಗ್ರಾಮದ ಹೆಸರು: **ಬರೇಗ ಮುದ್ದೇನಹಳ್ಳಿ**

Sy.No/ Khatha No.	Type of Land: Vacant	Type of Land: Built up	Nature of Land: Agriculture	Nature of Land: Converted undeveloped	Nature of Land: Approved Layout / developed Land Building Site	Dimension of the Land/ Plot & Extent in Sq.M: Dimension	Extent	Boundaries of the Land / Plot: North	South	East	West	Building Details: Extent in Sq.M	Type of Construction & No.of Floors	Floor Area Ratio	Present Activity on Land/Building (Specify Specific activity such as Shop, Office, Factory, Apartment, Individual house etc.,	Market (guide -lines) value of the land Per Sq.M (in Rs.)	Name and address of the owner of the plot/Land for Which DRC is to be issued
CTS No-2, Khatha No: 19/2, PID No: 25-69-19/2	Vacant portion of Developed Site		Developed Land Building Site			1410.00 Sqm		Road	Remaining Portion of City Sy No:02	City Sy No:04	Remaining Portion of City Sy No:02	Nill	Nill	Nill	Nill	1,79,100/-	Sri. D.K. Shivakumar and D.K. Suresh, Kenkeri No: 252, 18th Cross, Upper Palace Orchards, Sadashivanagar, Bengaluru - 560 080

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ಧಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ.107, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ನರಸಿಂಹ ರಾಜ ಚೌಕ–1, ಬೆಂಗಳೂರು–560 002.

ಸಂಖ್ಯೆ: ಬೃಬೆಂಮಪಾ/ಆಯುಕ್ತರು/ಪಿಎಸ್‌ಆರ್(ಜಿ)/4299/2022–23 **ನಮೂನೆ-3** ದಿನಾಂಕ: 20.03.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, 45.00 ಮೀಟರ್‌ಗಳ ಅಗಲದಂತೆ, ಅನುಮೋದಿತ ಮಹಾಯೋಜನೆ 2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ವರ್ತೂರು, ಗುಂಜೂರುಪಾಳ್ಯ ಮಾರ್ಗವಾಗಿ ಗೇರ್ ಶಾಲೆ ರಸ್ತೆಯಿಂದ ಫೆರಿಫೆರಲ್ ವರ್ತುಲ ರಸ್ತೆಯವರೆಗೆ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ, ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ / ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: ಬೆಂಗಳೂರು ನಗರ ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ ಗ್ರಾಮದ ಹೆಸರು: ಬೋಗನಹಳ್ಳಿ

Sy.No/ Khatha No.	Type of Land: Vacant	Type of Land: Built up	Nature of Land: Agriculture	Nature of Land: Converted undeveloped	Nature of Land: Approved Layout/ Developed Land Building Site	Dimension of the land/ plot and Extent in Sq.m: Dimension	Extent	Boundaries of the Land/ Plot: North	South	East	West	Building Details: Extent in Sq.m	Type of Construction and No. of Floors	Floor Area Ratio	Present Activity on Land/Building (Specify Specific activity such as Shop, Office, Factory, Apartment, Individual house etc.,	Market (guidel-ines) value of the land per Sq.m.	Name and address of the owner of the plot/Land for which DRC is to be issued
Sy. No:137, BBMP Khata Sl. No.3197	Vacant Land			Converted A Khata Land			1521.00 Sqm	Remaining portion of Sy.No.137	Remaining portion of Sy.No.137	Sy.No.138	Sy.No.136	None	None	None	Vacant	34,515/per.Sqm	M/s. Shreshta Apartments Private Limited, #2/4, Langford Garden, Richmond Town, Bangalore-560 025.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ಧಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ.107, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕ, ಬೆಂಗಳೂರು – 560 002,

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಬೃಬೆಂಮಪಾ/ಆಯುಕ್ತರು/ಪಿಎಸ್‌ಆರ್(ಜಿ)/4372/2022–23 **ನಮೂನೆ –3** ದಿನಾಂಕ: 23.03.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, **"45.00 ಮೀಟರ್‌ಗಳ ಅಗಲದಂತೆ, ಅನುಮೋದಿತ ಮಹಾಯೋಜನೆ 2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಗುಂಜೂರುಪಾಳ್ಯ ವರ್ತೂರು ಮಾರ್ಗವಾಗಿ ಗೇರ್ ಶಾಲೆ ರಸ್ತೆಯಿಂದ ಫೆರಿಫೆರಲ್ ವರ್ತುಲ ರಸ್ತೆಯವರೆಗೆ ರಸ್ತೆ ನಿರ್ಮಾಣ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: **ಬೆಂಗಳೂರು ನಗರ** ತಾಲ್ಲೂಕಿನ ಹೆಸರು: **ಬೆಂಗಳೂರು ಪೂರ್ವ** ಗ್ರಾಮದ ಹೆಸರು: **ಗುಂಜೂರು**

Sy.No/ Khatha No.	Type of Land: Vacant	Type of Land: Built up	Nature of Land: Agriculture	Nature of Land: Converted undeveloped	Nature of Land: Approved Layout / developed Land Building Site	Dimension of the Land/ Plot & Extent in Sq.M: Dimension	Extent	Boundaries of the Land / Plot: North	South	East	West	Building Details: Extent in Sq.M	Type of Construction & No.of Floors	Floor Area Ratio	Present Activity on Land/Building (Specify Specific activity such as Shop, Office, Factory, Apartment, Individual house etc.,	Market (guide -lines) value of the land Per Sq.M (in Rs.)	Name and address of the owner of the plot/Land for Which DRC is to be issued
Sy. No.127/1 BBMP Khatha Sl No: 7701, M.No: 309	Vacant Land			Converted A Khatha Land		1710.92 Sqm		Remaining Portion of Sy .No.127/1	Syy. No: 127/2	Sy .No.127/4	Sy .No.129/3	None	None	None	Vacant	35,000/- Per Sqm	M/s. Akarsha Realty Private Limited, #2/4, Langford Garden, Richmond Town, Bengaluru -560 025

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ಧಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ.107, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೆಂಗಳೂರು ಸಮೀಪ ಜ್ಞಾನ ನಗರ: ಮುಖ್ಯಮಂತ್ರಿ

ಬೆಂಗಳೂರು: 'ನಗರದ ಸಮೀಪವೇ ಎರಡು ಸಾವಿರ ಎಕರೆ ಪ್ರದೇಶದಲ್ಲಿ ಜ್ಞಾನನಗರ ನಿರ್ಮಾಣ ಮಾಡಬೇಕು ಎಂಬುದು ನನ್ನ ಕನಸು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ನವೀಕೃತ ಆವರಣದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, 'ವಿದೇಶಕ್ಕೆ ಹೋಗಿ ಕಲಿಯಲು ಸಾಧ್ಯವಾಗದವರಿಗೆ ಅಷ್ಟೇ ಗುಣಮಟ್ಟದ ಶಿಕ್ಷಣ ಬೆಂಗಳೂರಿನಲ್ಲೇ ದೊರೆಯುವಂತೆ ಮಾಡಬೇಕೆಂಬ ಆಸೆ ಇದೆ' ಎಂದರು.

'ರಾಜ್ಯ, ಹೊರ ರಾಜ್ಯಗಳ ಮತ್ತು ವಿದೇಶದ ಪ್ರಮುಖ ವಿಶ್ವವಿದ್ಯಾಲಯಗಳು, ಐಐಟಿಗಳು, ಶಿಕ್ಷಣ ಸಂಸ್ಥೆಗಳಿಗೆ ಜ್ಞಾನ ನಗರದಲ್ಲಿ ಅವಕಾಶ ನೀಡಲಾಗುವುದು. ಕರ್ನಾಟಕದ ಭವಿಷ್ಯದ ಒಕ್ಕಣೆಯನ್ನು ಕರ್ನಾಟಕದ ವಿದ್ಯಾರ್ಥಿಗಳೇ ಬರೆಯುವಂತೆ ತಯಾರು ಮಾಡುವುದು ಇದರ ಉದ್ದೇಶ' ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಭಾಗದಲ್ಲಿ ಆರು ಶೈಕ್ಷಣಿಕ ಸಂಸ್ಥೆಗಳು, ಡೀಮ್ಡ್ ವಿಶ್ವವಿದ್ಯಾಲಯಗಳಿವೆ. ಅವುಗಳ ಅಭಿವೃದ್ಧಿಗೆ ಹಣ ನೀಡಲಾಗುತ್ತಿದೆ. ಇವೆಲ್ಲವನ್ನೂ ಸೇರಿಸಿ ಬೆಂಗಳೂರು ಶೈಕ್ಷಣಿಕ ಜಿಲ್ಲೆಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದು ಯಶಸ್ವಿಯಾದರೆ ರಾಜ್ಯದ ಬೇರೆ ಭಾಗಗಳಿಗೂ ವಿಸ್ತರಿಸಲಾಗುವುದು ಎಂದರು.

ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಐತಿಹಾಸಿಕ ಹಿನ್ನೆಲೆ ಇರುವ ಬೆಂಗಳೂರು ನಗರ ವಿಶ್ವವಿದ್ಯಾಲಯ ಇಡೀ ದೇಶದಲ್ಲೇ ವಿರಾಜಿಸಬೇಕು. ಕಲಿಕೆಯಲ್ಲಿ ಸೀಮಿತವಾಗದೆ ಸೀಮೋಲ್ಲಂಘನೆ ಮಾಡಬೇಕು. ಶಿಕ್ಷಣ ಮತ್ತು ಉದ್ಯಮಶೀಲತೆ ನಡುವೆ ಇರುವ ಕಂದಕವನ್ನು ಸರಿಪಡಿಸಬೇಕು. ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದೇವೆ' ಎಂದು ಹೇಳಿದರು.

ನಾರಾಯಣಸ್ವಾಮಿ ರಾವ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮ ಸೇವಾ ಮಂಡಳಿಯ ಎಸ್.ವಿ.ನಾರಾಯಣಸ್ವಾಮಿರಾವ್ ರಾಷ್ಟ್ರೀಯ ಪ್ರಶಸ್ತಿಗೆ ಪಿಟೀಲು ವಿದ್ವಾಂಸರಾದ ಎ.ಕನ್ಯಾಕುಮಾರಿ ಮತ್ತು ಮೃದಂಗ ವಿದ್ವಾಂಸ ಯೆಲ್ಲಾ ವೆಂಕಟೇಶ್ವರರಾವರ್ ಅವರನ್ನು ಮಂಡಳಿ ಆಯ್ಕೆ ಮಾಡಿದೆ.

ಪ್ರಶಸ್ತಿಯು ತಲಾ ₹50 ಸಾವಿರ ನಗದು, ಫಲಕಗಳನ್ನು ಒಳಗೊಂಡಿದೆ. ಗಾಯನ ಸಮಾಜದಲ್ಲಿ ಶನಿವಾರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಎಸ್.ವ್ಯಾಸ-ಸ್ವಾಮಿ ವಿವೇಕಾನಂದ ಯೋಗಾ ಅನುಸೂದನ ಸಂಸ್ಥಾನದ ಕುಲಪತಿ ಎಚ್.ಆರ್.ನಾಗೇಂದ್ರ ಅವರು ಪ್ರಶಸ್ತಿ ಪ್ರದಾನ ಮಾಡುವರು.

ಆಟೊ ಚಾಲಕರಾದ ಡಿಕೆಶಿ!

ಪ್ರಜಾವಾಣಿ ವಾರ್ತೆ



ಆಟೊ ಚಲಾಯಿಸಿದ ಡಿ.ಕೆ. ಶಿವಕುಮಾರ್

ಬೆಂಗಳೂರು: ಖಾಕಿ ಸಮವಸ್ತ್ರ ಧರಿಸಿ, ಆಟೊ ಓಡಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನಿಮ್ಮ ಕಷ್ಟ-ಸುಖದ ಜೊತೆ ನಾನೂ ಇದ್ದೇನೆ' ಎಂದು ಆಟೊ ಚಾಲಕರಲ್ಲಿ ವಿಶ್ವಾಸ ತುಂಬಲು ಯತ್ನಿಸಿದರು.

ಬೆಂಗಳೂರು ಅರಮನೆ ಮೈದಾನದಲ್ಲಿ ಆಟೊ ಚಾಲಕರ ಜತೆ ಗುರುವಾರ ಅವರು ಸಂವಾದ ನಡೆಸುವುದಕ್ಕೂ ಮೊದಲು, ಅರಮನೆ ಮೈದಾನದ ಪ್ರವೇಶದ್ವಾರದಿಂದ ಸಂವಾದ ಸ್ಥಳದವರೆಗೂ ಆಟೋ ಚಾಲನೆ ಮಾಡಿದರು.

'ಇಂದು ನನ್ನ ಜೀವನದಲ್ಲಿ ಬಹಳ ನೆನಪಿನಲ್ಲಿ ಉಳಿಯಲಿರುವ ದಿನ. ಕಾರಣ, ನಾನು ಪವಿತ್ರ ಆಟೊ ಚಾಲನೆ ಮಾಡಿದ ದಿನ. ನಿಮ್ಮ ಕುಟುಂಬದ ಸದಸ್ಯನಾಗಿ ನಾನು ಇಲ್ಲಿ ನಿಂತಿದ್ದೇನೆ. ಸ್ವಾಭಿಮಾನದ ಬದುಕು ನಡೆಸುತ್ತಿರುವ ನೀವು, ಮಧ್ಯಮವರ್ಗ ಹಾಗೂ ಜನ ಸಾಮಾನ್ಯರ ಸಾರಥಿಗಳು' ಎಂದು ಆಟೊ ಚಾಲಕರನ್ನು ಬಣ್ಣಿಸಿದರು.

'ಪಕ್ಷದ ನಾಯಕರಾಗಿದ್ದ ಆಸ್ಕರ್ ಫರ್ನಾಂಡೀಸ್ ಅವರು ಪಕ್ಷದಲ್ಲಿ ಚಾಲಕರ ವಿಭಾಗ ಆರಂಭಿಸಬೇಕು ಎಂದು ಸಲಹೆ ನೀಡಿದ್ದರು. ಅವರ ಸಲಹೆಯಂತೆ ಘಟಕ ಆರಂಭಿಸಿದ್ದೇವೆ. ಆ ಮೂಲಕ ನಿಮ್ಮ ಮನೆ ಸದಸ್ಯರಾಗಿದ್ದೇವೆ ಎಂದು ಹೇಳಿದರು.

'ಮುಂದೆ ಕಾಂಗ್ರೆಸ್ ಸರ್ಕಾರ ಬರಲಿದೆ. ಪೊಲೀಸರು ನಿಮಗೆ ನೀಡುತ್ತಿರುವ ಕಿರುಕುಳ ತಪ್ಪಿಸಲು ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗುವುದು. ನಿಮ್ಮ ಹೋರಾಟದ ದಿಕ್ಕು ಮೇ ತಿಂಗಳಲ್ಲಿ ರಾಜ್ಯದಲ್ಲಿ ಬದಲಾವಣೆ ತರುವತ್ತ ಇರಬೇಕು' ಎಂದು ಅವರು ಮನವಿ ಮಾಡಿದರು.

ಶಾಸಕ ರಿಜ್ವಾನ್ ಅರ್ಷದ್, ಸ್ಥಳೀಯ ಮುಖಂಡರು ಇದ್ದರು.

ಸುದ್ದಿ 2 ನಿಮಿಷ

ಬಾಲಭವನಕ್ಕೆ ನಾಳೆ ಚಾಲನೆ

ಬೆಂಗಳೂರು: ನವೀಕರಣಗೊಂಡಿರುವ ಬಾಲಭವನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾರ್ಚ್ 25ರ ಶನಿವಾರದಂದು ಚಾಲನೆ ನೀಡಲಿದ್ದಾರೆ.

ಬಾಲಭವನದಲ್ಲಿ ಪುಟಾಣಿ ರೈಲು, ಬೋಟಿಂಗ್ ಸೇರಿದಂತೆ ಮಕ್ಕಳಿಗೆ ವಿವಿಧ ರೀತಿ ಆಟಿಕೆಗಳು ಸಿದ್ಧಗೊಂಡಿವೆ. ಮಹಿಳಾ ದಿನದಂದು ಸ್ಮಾರ್ಟ್ ಸಿಟಿ ಆಯೋಜಿಸಿದ್ದ 'ಅಮೃತ ಉತ್ಸವ'ದಲ್ಲಿ ಬಿಬಿಎಂಪಿ ಶಾಲೆಯ ವಿದ್ಯಾರ್ಥಿನಿಯರು ಬಾಲಭವನದಲ್ಲಿ ಮರುವಿನ್ಯಾಸಗೊಂಡಿರುವ 'ಪುಟಾಣಿ ರೈಲಿನ' ಮೋಜು ಅನುಭವಿಸಿದರು.

ರಾಜ್ಯ ಶಾಲಾ ಪೂರ್ವ ಶಿಕ್ಷಣ ಪಠ್ಯಕ್ರಮದ ಚೌಕಟ್ಟನ್ನೂ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಡುಗಡೆ ಮಾಡುವರು ಎಂದು ಬಾಲಭವನ ಸೊಸೈಟಿಯ ಕಾರ್ಯದರ್ಶಿ ಎಸ್. ರಾಜಮೂರ್ತಿ ಅವರು ತಿಳಿಸಿದರು.

ಕೊಡಿಗೇಹಳ್ಳಿಯಲ್ಲಿ ವಚನ ಯುಗಾದಿ



ಬೆಂಗಳೂರು: ವಚನಜ್ಯೋತಿ ಬಳಗವು ಕೊಡಿಗೇಹಳ್ಳಿಯ ಐಸಿರಿ ಅಂಗಳದಲ್ಲಿ ವಚನ ಯುಗಾದಿ-ಅಲ್ಲಮಪ್ರಭು ಜಯಂತಿಯನ್ನು ಆಚರಿಸಿತು.

ಮಕ್ಕಳ ವಚನ ಮೇಳದಲ್ಲಿ ಸಾತ್ವಿಕ ಬಾಚಲಾಪುರ, ಶ್ರಾವಣಿ ಹಣ್ಣಿ, ಚಿರಸ್ವಿ, ಸುರಭಿ ಹಣ್ಣಿ, ಗಾಯಕಿಯರಾದ ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಹಿರಿಯ ವಿದ್ವಾಂಸ ಪಂ. ದೇವೇಂದ್ರಕುಮಾರ ಪತ್ತಾರ್ ಅಲ್ಲಮರ ವಚನಗಳನ್ನು ಹಾಡಿದರು. ಬಾಲಪ್ರತಿಭೆ ಸಿದ್ದು ಧವನ್ ಅಲ್ಲಮರ ವೇಷ ಧರಿಸಿ ವಚನಾಮೃತ ನುಡಿದನು. ಕವಿಗಳಾದ ವಿದ್ಯಾಶ್ರೀ ಹಾರಕೂಡೆ, ಗುಂಡೀಗೆರೆ ವಿಶ್ವನಾಥ್, ರಂಗಸ್ವಾಮಿ, ಶೈಲಜ, ಈರಣ್ಣ ಮೂಲಿಮನಿ ಕವನಗಳನ್ನು ವಾಚಿಸಿದರು.

'ಸಾವಿರಾರು ಶರಣರ ನಡುವೆ ಜ್ಞಾನ ಚಂದ್ರಮನಾಗಿ ಬೆಳಗಿ ಮಾಯೆ ಮುಟ್ಟದ ಮೈ, ಮೋಹ ಸೋಂಕದ ಹೃದಯದ ಅಲ್ಲಮ ಪ್ರಭುದೇವರು ವೈಚಾರಿಕತೆಯ ಪ್ರತೀಕವಾಗಿದ್ದಾರೆ' ಎಂದು ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ರಂಗ ನಿರ್ದೇಶಕ ಗಂಗೋತ್ರಿ ಕುಮಾರ ಮಾತನಾಡಿ, 'ಅಲ್ಲಮಪ್ರಭುವಿನಂತ ಮೇರು ಜಿಜ್ಞಾಸುವನ್ನು ನೆನೆಯುತ್ತಿರುವ ಅಪರೂಪದ ಕಾರ್ಯಕ್ರಮ ಇದಾಗಿದ್ದು, ಕನ್ನಡಿಗರು ಹೆಮ್ಮೆ ಪಡಬೇಕಾದ ಅಲ್ಲಮರ ಜಯಂತಿಯನ್ನು ಎಷ್ಟು ಸಂಘ ಸಂಸ್ಥೆಗಳು -ಮಠಮಾನ್ಯಗಳು ಮಾಡುತ್ತಿವೆ' ಎಂದು ಪ್ರಶ್ನಿಸಿದರು.

ಕನ್ನಡ ಸಂಸ್ಕೃತಿ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಬಿ.ಎಸ್, ಸ್ಪಂದನ ಸೊಸೈಟಿಯ ನಿರ್ದೇಶಕ ಚಂದ್ರಣ್ಣ ಕಾಗಿಮಡು, ಜನಪದ ಗಾಯಕಿ ಶಕುಂತಲ ಬಾಗಲಕೋಟ್ ಇದ್ದರು.

ತಮಿಳುನಾಡು: ಆನ್‌ಲೈನ್ ಜೂಜಾಟ ನಿಷೇಧಿಸುವ ಮಸೂದೆಗೆ ಅಂಗೀಕಾರ

ಚೆನ್ನೈ(ಪಿಟಿಐ) : ಆನ್‌ಲೈನ್ ಜೂಜಾಟಕ್ಕೆ ನಿಷೇಧ ಹೇರುವ ಮಸೂದೆಯನ್ನು ತಮಿಳುನಾಡು ವಿಧಾನಸಭೆಯಲ್ಲಿ ಗುರುವಾರ ಮತ್ತೊಮ್ಮೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ರಾಜ್ಯಪಾಲ ಆರ್. ಎನ್. ರವಿ ಅವರು, ಮಸೂದೆಯನ್ನು ಮರುಪರಿಶೀಲಿಸುವಂತೆ ಸರ್ಕಾರಕ್ಕೆ ವಾಪಸ್ ಕಳುಹಿಸಿದ ಹಿನ್ನೆಲೆಯಲ್ಲಿ ಮತ್ತೆ ಅಂಗೀಕರಿಸಲಾಯಿತು.

ಮಸೂದೆಯನ್ನು ಮಂಡಿಸಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ಆನ್‌ಲೈನ್ ಜೂಜಾಟದಿಂದ ಹಣ ಕಳೆದುಕೊಂಡು ಹಲವು ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದೂ ಹೇಳಿದರು.

ಮಸೂದೆಯನ್ನು ಬೆಂಬಲಿಸಿ ಹಾಗೂ ರಾಜ್ಯಪಾಲರ ನಡೆಗೆ ವಿರೋಧ ವ್ಯಕ್ತಪಡಿಸಿ ಹಲವು ಮಂದಿ ಸದಸ್ಯರು ಮಾತನಾಡಿದರು.

ಬಳಿಕ ಸಭಾಧ್ಯಕ್ಷ ಎಂ.ಅಪ್ಪಾವು ಅವರು ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿರುವುದಾಗಿ ಘೋಷಿಸಿದರು.

ವಿರೋಧ ಪಕ್ಷ ಎಐಎಡಿಎಂಕೆ ನಾಯಕತ್ವದ ಒಡಕು ಇದೇ ವೇಳೆ ಸದನದಲ್ಲಿ ಬಹಿರಂಗಗೊಂಡಿತು. ಉಚ್ಚಾಟಿತ ಮುಖಂಡ ಒ. ಪನ್ನೀರ್‌ಸೆಲ್ವಂ ಅವರಿಗೆ ಸಭಾಧ್ಯಕ್ಷರು ಮಾತನಾಡಲು ಅನುಮತಿ ನೀಡಿದ್ದಕ್ಕೆ ವಿರೋಧ ಪಕ್ಷದ ನಾಯಕ ಕೆ.ಪಳನಿಸ್ವಾಮಿ ಮತ್ತು ಎಐಎಡಿಎಂಕೆಯ ಕೆಲವು ಶಾಸಕರು ವಿರೋಧ ವ್ಯಕ್ತಪಡಿಸಿದರು.

ಯಲಹಂಕ ಬಳಿ ಕಬ್ಬನ್ ಮಾದರಿ ಉದ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದ ಮಾದರಿಯಲ್ಲಿ ಯಲಹಂಕದ ಬಳಿ ಕೆಂಪೇಗೌಡ ಉದ್ಯಾನ ನಿರ್ಮಾಣ ಮಾಡಲು 184.09 ಭೂಮಿಯನ್ನು ತೋಟಗಾರಿಕಾ ಇಲಾಖೆಗೆ ಹಸ್ತಾಂತರಿಸುವ ಕಡತಕ್ಕೆ ಕಂದಾಯ ಸಚಿವ ಆರ್.ಅಶೋಕ ಗುರುವಾರ ಸಹಿ ಹಾಕಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಆರ್.ಅಶೋಕ, ತೋಟಗಾರಿಕಾ ಸಚಿವ ಮುನಿರತ್ನ, 'ಯಲಹಂಕದಿಂದ 7 ಕಿ.ಮೀ, ವಿಮಾನ ನಿಲ್ದಾಣದಿಂದ 10 ಕಿ.ಮೀ ಹಂತದಲ್ಲಿರುವ ದೊಡ್ಡಬಳ್ಳಾಪುರ-ಹಿಂದೂಪುರ ಹೆದ್ದಾರಿಗೆ ಹೊಂದಿಕೊಂಡಿರುವ ಬೆಟ್ಟಹಲಸೂರು, ಸೊಂಡೆಪ್ಪನಹಳ್ಳಿ, ಕಾಡಿಗಾನಹಳ್ಳಿ ವ್ಯಾಪ್ತಿಯ 184.09 ಎಕರೆಯಲ್ಲಿ ಉದ್ಯಾನ ತಲೆ ಎತ್ತಲಿದೆ.

ತೋಟಗಾರಿಕೆ ಇಲಾಖೆಯ ನೇತೃತ್ವದಲ್ಲಿ ಅಧಿಕಾರಿಗಳನ್ನು ಒಳಗೊಂಡ ಉದ್ಯಾನ ಸಂಘ ಅಭಿವೃದ್ಧಿ ಕಾರ್ಯಗಳ ನಿರ್ವಹಣೆ ಮಾಡಲಿದೆ. ಬೆಟ್ಟಹಲಸೂರು ಬಂಡೆಯಲ್ಲಿ ಕೆಂಪೇಗೌಡರ 100 ಅಡಿಯ ಏಕಶಿಲಾ ಮೂರ್ತಿ ಕೆತ್ತಿಸಲಾಗುವುದು. ಶ್ರವಣಬೆಳಗೊಳದ ಗೋಮಟೇಶ್ವರನಿಗಿಂತಲೂ ದೊಡ್ಡದಾದ ಕೆಂಪೇಗೌಡರ ಏಕಶಿಲಾ ಪ್ರತಿಮೆ ನಿರ್ಮಿಸುವುದು ಸರ್ಕಾರದ ಕನಸು. ಅಲ್ಲಲ್ಲಿ ಕೆರೆ, ಸರೋವರಗಳ ನಿರ್ಮಾಣ, ಆಂಫಿಥಿಯೇಟರ್, ಹಕ್ಕಿಗಳ ಆವಾಸಸ್ಥಾನ ನಿರ್ಮಿಸಲಾಗುವುದು' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

240 ವರ್ಷಗಳ ಇತಿಹಾಸ ಇರುವ ಕಬ್ಬನ್ ಉದ್ಯಾನದ ಮಾದರಿಯಲ್ಲಿ ಮತ್ತೊಂದು ಉದ್ಯಾನ ನಿರ್ಮಿಸಲು ಯಾವ ಸರ್ಕಾರಗಳಿಗೂ ಸಾಧ್ಯವಾಗಿಲ್ಲ. ಎಲ್ಲ ಕಾನೂನು ತೊಡಕುಗಳಿಂದ ಭೂಮಿ ಮುಕ್ತವಾಗಿದೆ. ವಿಮಾನ ನಿಲ್ದಾಣದ ಹೆದ್ದಾರಿಗೆ ಹೊಂದಿಕೊಂಡಿರುವ ₹ 800 ಕೋಟಿ ಮೌಲ್ಯದ ಆಸ್ತಿ ಸಂರಕ್ಷಿಸಲಾಗಿದೆ. ಕಂದಾಯ ಇಲಾಖೆಯಿಂದ ಭೂಮಿಯನ್ನು ಈಗಾಗಲೇ ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಜಮೀನು ಬಂಡೆ, ಬೆಟ್ಟ, ಗುಡ್ಡಗಳನ್ನು ಹಾಗೆ ಉಳಿಸಿಕೊಂಡು ನಿಸರ್ಗದತ್ತವಾದ ಉದ್ಯಾನ ನಿರ್ಮಿಸಲು ಮಲೇಶಿಯಾ, ಸಿಂಗಾಪುರ ಕಂಪನಿಗಳು ರೂಪರೇಷೆ ಸಿದ್ಧಪಡಿಸಲು ಮುಂದೆ ಬಂದಿವೆ ಎಂದು ವಿವರ ನೀಡಿದರು.

ಜಾರಕಬಂಡೆ ಕಾವಲು ಬಳಿ ಅರಣ್ಯ ಇಲಾಖೆ ಸಹಯೋಗದಲ್ಲಿ 320 ಎಕರೆ ಜಾಗದಲ್ಲಿ ಅಟಲ್ ಬಿಹಾರಿ ವಾಜಪೇಯಿ ಬಹೂಪಯೋಗಿ ಉದ್ಯಾನ ನಿರ್ಮಿಸಲು ಬಜೆಟ್‌ನಲ್ಲಿ ₹ 100 ಕೋಟಿ ಹಣ ಮೀಸಲಿಡಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ದಯಾನಂದ್ ಇದ್ದರು.

ನಂದಿಗಿರಿಧಾಮ: ಇಂದು, ನಾಳೆ ಪ್ರವೇಶ ಇಲ್ಲ

ಚಿಕ್ಕಬಳ್ಳಾಪುರ: ನಂದಿಗಿರಿಧಾಮದಲ್ಲಿ ರಸ್ತೆ ನಿರ್ವಹಣೆ ಕಾಮಗಾರಿ ನಡೆಯುತ್ತಿರುವ ಕಾರಣ ಗಿರಿಧಾಮಕ್ಕೆ ಎರಡು ದಿನ ಪ್ರವಾಸಿಗರು ಹಾಗೂ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ.

ಮಾರ್ಚ್24ರ ಬೆಳಿಗ್ಗೆ 10ರಿಂದ ಮಾರ್ಚ್ 25ರ ಮಧ್ಯಾಹ್ನ 2 ಗಂಟೆಯ ವರೆಗೆ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಆದೇಶದಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಬಿ.ಎಲ್.ಶಂಕರ್ ಹೇಳಿಕೆ

'ಸಮೀಕ್ಷೆ ಆಧರಿಸಿ ಕ್ಷೇತ್ರ ಆಯ್ಕೆ ಸರಿಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸಮೀಕ್ಷೆ ಆಧರಿಸಿ ಕ್ಷೇತ್ರ ಆಯ್ಕೆ ಬಗ್ಗೆ ತೀರ್ಮಾನಿಸಬಾರದು ಎಂದು ಕಾಂಗ್ರೆಸ್ ಮುಖಂಡ ಬಿ.ಎಲ್.ಶಂಕರ್ ಹೇಳಿದರು.

ಡಾ . ರಾ ಮ ಮ ನೋ ೀ ಹ ರ ಲೋಹಿಯಾ ಸಮತಾ ವಿದ್ಯಾಲಯ ಮತ್ತು ಭಾರತ ಯಾತ್ರಾ ಕೇಂದ್ರ ಆಯೋಜಿಸಿದ್ದ ಲೋಹಿಯಾ ದಿನಾಚರಣೆ, ಪುಸ್ತಕ ಬಿಡುಗಡೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಿದ್ದರಾಮಯ್ಯ ಅವರು 45 ವರ್ಷಗಳಿಂದ ರಾಜಕಾರಣದಲ್ಲಿ ಇದ್ದಾರೆ. ಹಾದಿ ಬೀದಿಯಲ್ಲಿ ಜನರನ್ನು ಮಾತನಾಡಿಸಿ ಕೊಟ್ಟ ವರದಿಯನ್ನು ನೋಡಿ ಸಿದ್ದರಾಮಯ್ಯ ಅವರಂತ ರಾಜಕಾರಣಿಗಳ ಬಗ್ಗೆ ತೀರ್ಮಾನಕ್ಕೆ ಬರಬಾರದು. ಚುನಾವಣಾ ತಂತ್ರಗಾರಿಕೆ ಅಧಿಕವಾಗುತ್ತಿದೆ. ಆದರ್ಶ ವ್ಯಕ್ತಿಗಳನ್ನು ಕರೆಸಿ ಚುನಾವಣಾ ಭಾಷಣ ಮಾಡಿಸುತ್ತಿದ್ದ ಕಾಲವಿತ್ತು. ಈಗ ತಂತ್ರಗಾರಿಕೆಗೆ ಬೇಡಿಕೆ ಬಂದಿರುವ ಕಾಲದಲ್ಲಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ವೈ.ಎಸ್.ವಿ.ದತ್ತ ಮಾತನಾಡಿ, 'ಒಂದೇ ದೇಶ, ಒಂದೇ ತೆರಿಗೆ, ಒಂದೇ ಭಾಷೆ, ಒಂದೇ ಕಾನೂನು ಅತ್ಯಂತ ಅಪಾಯಕಾರಿ. ಇದು ಮುಂದುವರಿದರೆ ಒಂದೇ ದೇಶ, ಒಂದೇ ಪಕ್ಷ, ಒಬ್ಬನೇ ವ್ಯಕ್ತಿ ಆಡಳಿತ ನಡೆಸುವ ಅಪಾಯವಿದೆ. ಇದರ ವಿರುದ್ಧ ಜನ ಧೈರ್ಯವಾಗಿ ಮಾತನಾಡಬೇಕು' ಎಂದರು.



ಲೇಖಕ ನಟರಾಜ ಹುಳಿಯಾರ್ ಅವರಿಗೆ ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಕೀಲ ರವಿವರ್ಮ ಕುಮಾರ್, ವಿಮರ್ಶಕಿ ಎಂ.ಎಸ್. ಆಶಾದೇವಿ, ಭಾರತ ಯಾತ್ರಾ ಕೇಂದ್ರದ ಕೆ.ವಿ.ನಾಗರಾಜಮೂರ್ತಿ, ಬಿ.ಎಲ್. ಶಂಕರ್, ಬಿ.ಆರ್.ಪಾಟೀಲ, ವೈ.ಎಸ್.ವಿ.ದತ್ತ ಇದ್ದರು —ಪ್ರಜಾವಾಣಿ ಚಿತ್ರ

ನಿಯಮಗಳಲ್ಲಿ ಸರಳೀಕರಣ: ಎಂ ಸ್ಯಾಂಡ್ ಪೂರೈಕೆ ಸುಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮರಳಿನ ಅಭಾವ ನೀಗಿಸಲು ಹಾಗೂ ಜನ ಸಾಮಾನ್ಯರಿಗೆ ಸುಲಭ ಮತ್ತು ಕೈಗೆಟುಕುವ ದರದಲ್ಲಿ ಎಂ ಸ್ಯಾಂಡ್ ಪೂರೈಸಲು ರಾಜ್ಯ ಸರ್ಕಾರ ಕಲ್ಲು ಗಣಿಗಾರಿಕೆ ನಿಯಮಗಳನ್ನು ಸರಳೀಕರಣ ಮಾಡಿದೆ. ಇದರಿಂದ ನಿರ್ಮಾಣ ಕಾಮಗಾರಿಗಳಿಗೆ ಎಂ ಸ್ಯಾಂಡ್ ಪೂರೈಕೆ ಸುಗಮವಾಗಿದೆ' ಎಂದು ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಆ್ಯಂಡ್ ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಮತ್ತು ಬೆಂಗಳೂರಿನ ಫೆಡರೇಷನ್ ಆಫ್ ಕರ್ನಾಟಕ ಗ್ರಾನೈಟ್ ಆ್ಯಂಡ್ ಸ್ಟೋನ್ ಇಂಡಸ್ಟ್ರಿ ಹೇಳಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ರವೀಂದ್ರ ಶೆಟ್ಟಿ ಬಜಗೋಳಿ, '2016 ಕ್ಕಿಂತ ಮುಂಚೆ ಗಣಿಗುತ್ತಿಗೆಗೆ ಅರ್ಜಿ ಸಲ್ಲಿಸಿ, ಬಾಕಿ ಇದ್ದ 5 ಸಾವಿರ ಅರ್ಜಿಗಳಿಗೆ ಕಾನೂನು ಪ್ರಕಾರ ಗಣಿಗುತ್ತಿಗೆ ಅವಕಾಶ ಕಲ್ಪಿಸಲಾಗಿದೆ. ಎಂ ಸ್ಯಾಂಡ್ ಕ್ರಷರ್ ಘಟಕ ಪ್ರಾರಂಭಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮೋದನೆ ನೀಡಲಾಗಿದೆ. ಎಂ-ಸ್ಯಾಂಡ್ ಕ್ರಷರ್ ಘಟಕ ಹೊಂದಿರುವವರು 30 ಕಿ.ಮೀ. ವ್ಯಾಪ್ತಿಯೊಳಗೆ ಎಂ ಸ್ಯಾಂಡ್ ಉತ್ಪಾದಿಸುವುದಕ್ಕೆ ಹೊಸದಾಗಿ ಗಣಿಗುತ್ತಿಗೆ ಪಡೆಯಲು ಅವಕಾಶ ಕಲ್ಪಿಸಿರುವುದರಿಂದ ಎಂ.ಸ್ಯಾಂಡ್ ಸುಗಮವಾಗಿ ದೊರೆಯಲಿದೆ. ಸಾಮಾನ್ಯ ಕಟ್ಟಡಕಲ್ಲು ಗಣಿಗುತ್ತಿಗೆ ಅವಧಿಯನ್ನು 20 ರಿಂದ 30 ವರ್ಷಗಳಿಗೆ ಹಾಗೂ ಅಲಂಕಾರಿಕ ಕಲ್ಲಿನ ಗಣಿ ಗುತ್ತಿಗೆಯನ್ನು 30 ವರ್ಷಗಳಿಂದ 50 ವರ್ಷಗಳಿಗೆ ವಿಸ್ತರಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ' ಎಂದು ತಿಳಿಸಿದರು.

ಬೆಂಗಳೂರಿನ ಫೆಡರೇಷನ್ ಆಫ್ ಕರ್ನಾಟಕ ಗ್ರಾನೈಟ್ ಆ್ಯಂಡ್ ಸ್ಟೋನ್ ಇಂಡಸ್ಟ್ರಿ ಅಧ್ಯಕ್ಷ ಬಿ. ಉಮಾಶಂಕರ್, 'ಕಳೆದ 40 ವರ್ಷಗಳಿಂದ ಬಾಕಿ ಉಳಿದಿದ್ದ ಶೇ 80 ರಷ್ಟು ಬೇಡಿಕೆಗಳನ್ನು ಸರ್ಕಾರ ಈಡೇರಿಸಿದೆ. ಬಾಕಿ ಬೇಡಿಕೆಗಳಿಗಾಗಿ ಮುಂಬರುವ ದಿನಗಳಲ್ಲಿ ಹೋರಾಟ ನಡೆಸುತ್ತೇವೆ' ಎಂದು ಹೇಳಿದರು.

ಬಡವರ ಪರ ಪ್ರಣಾಳಿಕೆ: ಎಎಪಿ

ಪ್ರಜಾವಾಣಿ ವಾರ್ತೆ



ಸುದ್ದಿಗೋಷ್ಠಿಯಲ್ಲಿ (ಎಡದಿಂದ ಬಲಕ್ಕೆ) ಪಕ್ಷದ ಮುಖಂಡ ವರುಣ್ ಕುಮಾರ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಸಂಜೀವ್ ಸಾಲಂಕೆ, ರಾಜ್ಯ ಪ್ರಧಾನ ಕಾರ್ಯದರ್ಶಿ ಸೌಂದರ್ಯ ಪಿ ಮಂಜಪ್ಪ, ಅಭ್ಯರ್ಥಿ ಎಂ ಕೀರ್ತನ್ ಕುಮಾರ್, ಕ್ಷೇತ್ರದ ಮಹಿಳಾ ಘಟಕದ ಅಧ್ಯಕ್ಷೆ ಭವ್ಯ ವೆಂಕಟೇಶ್ ಇದ್ದರು.

ಪೀಣ್ಯ ದಾಸರಹಳ್ಳಿ: ಆಮ್ ಆದ್ಮಿ ಪಕ್ಷದ ಪ್ರಣಾಳಿಕೆ ಯಾವಾಗಲೂ ಬಡವರ, ಕಾರ್ಮಿಕರ ಹಾಗೂ ಜನಸಾಮಾನ್ಯರ ಪರವಾಗಿ ಇರುತ್ತದೆ. ರೋಸಿಹೋದ ಜನರು ಆಶಾವಾದದಿಂದ ಒಲವು ತೋರುತ್ತಿದ್ದಾರೆ' ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸೌಂದರ್ಯ ಪಿ. ಮಂಜಪ್ಪ ಹೇಳಿದರು.

'ವಿರೋಧ ಪಕ್ಷಗಳು ಭ್ರಷ್ಟಾಚಾರ ನಿರ್ಮೂಲನೆ ಮಾಡ್ತೀವಿ ಎನ್ನುತ್ತ ಅಧಿಕಾರಕ್ಕೆ ಬಂದು ರಾಜ್ಯವನ್ನು ಲೂಟಿ ಮಾಡುತ್ತಿದ್ದಾರೆ. ಅದಕ್ಕಾಗಿ ಜನರಿಗೆ ಪೂರಕವೆಯ ಆಯ್ಕೆ ಆಮ್ ಆದ್ಮಿ ಎಂದು ಮನದಟ್ಟಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಉತ್ತಮ ಗುಣಮಟ್ಟದ ಶಿಕ್ಷಣ, ಉತ್ತಮ ಆರೋಗ್ಯ, ಕುಡಿಯುವ ನೀರು, ಉದ್ಯೋಗ ಸೇರಿದಂತೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಆಮ್ ಆದ್ಮಿ ಪಕ್ಷ ಬೆಂಬಲಿಸಿ' ಎಂದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಎಂ. ಕೀರ್ತನ್ ಕುಮಾರ್ ಮಾತನಾಡಿ, 'ದೆಹಲಿ ಮಾದರಿ ಆಡಳಿತ, ಒಳ್ಳೆಯ ಸಮಾಜ ನಿರ್ಮಿಸಲು ರಾಜ್ಯದಲ್ಲಿ ಈಗಾಗಲೇ ಮೊದಲನೇ ಪಟ್ಟಿಯಲ್ಲಿ 80 ಅಭ್ಯರ್ಥಿಗಳ ಘೋಷಣೆಯಾಗಿದೆ. ಅದರಲ್ಲಿ ಡಾಕ್ಟರ್, ಲಾಯರ್, ಶಿಕ್ಷಣ ತಜ್ಞರು, ಯುವಕರು ಇದ್ದಾರೆ. ಭ್ರಷ್ಟಾಚಾರವನ್ನು ತೊಲಗಿಸಲು ಈ ಬಾರಿ ಒಂದು ಅವಕಾಶ ಕಲ್ಪಿಸಿ' ಎಂದು ಮನವಿ ಮಾಡಿದರು.

ಪಕ್ಷದ ಮುಖಂಡ ವರುಣ್ ಕುಮಾರ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಸಂಜೀವ್ ಸಾಲಂಕೆ, ರಾಜ್ಯ ಪ್ರಧಾನ ಕಾರ್ಯದರ್ಶಿ ಸೌಂದರ್ಯ ಪಿ. ಮಂಜಪ್ಪ, ಅಭ್ಯರ್ಥಿ ಎಂ ಕೀರ್ತನ್ ಕುಮಾರ್, ಕ್ಷೇತ್ರದ ಮಹಿಳಾ ಘಟಕದ ಅಧ್ಯಕ್ಷೆ ಭವ್ಯ ವೆಂಕಟೇಶ್ ಇದ್ದರು.

ನಿರುದ್ಯೋಗ: ಶೇ 11.73ಕ್ಕೆ ಏರಿಕೆ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯೋಗ ಸೃಷ್ಟಿಸುವುದರ ಬದಲು ನಿರುದ್ಯೋಗವನ್ನು ಸೃಷ್ಟಿಸುವ ಬಿಜೆಪಿ ಸರ್ಕಾರ, ಸುಳ್ಳು ಜಾಹೀರಾತುಗಳ ಮೂಲಕ ಸುಳ್ಳು ಪ್ರಕಟಣೆಗಳನ್ನು ನಿರುದ್ಯೋಗಿ ಯುವಜನರಿಗೆ ಅವಮಾನ ಮಾಡುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಜಾಹೀರಾತುಗಳನ್ನು ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ, ಜನರ ತೆರಿಗೆ ಹಣವನ್ನು ಬಳಸಿ ಜಾಹೀರಾತುಗಳ ಮೂಲಕ ಸುಳ್ಳುಗಳನ್ನು ಮಾರಾಟ ಮಾಡುವ ಹೀನಾತಿಹೀನ ರಾಜಕೀಯವನ್ನು ರಾಜ್ಯ– ಕೇಂದ್ರದ ಬಿಜೆಪಿ ಸರ್ಕಾರಗಳು ಮಾಡುತ್ತಿವೆ' ಎಂದು ಆರೋಪಿಸಿದ್ದಾರೆ.

'ಯುಗಾದಿಯ ದಿನ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಜಾಹೀರಾತಿನಲ್ಲಿ 68.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ ಎಂದು ಹೇಳಿಕೊಂಡಿದೆ. ಹೀಗೆ ಹೇಳಿಕೆ ನೀಡುವವರು ಯಾವ ಯಾವ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿ ಮಾಡಿದ್ದೇವೆ ಎಂದೂ ಹೇಳಬೇಕಲ್ಲವೇ? ಉದ್ಯೋಗವೇ ಸಿಗುತ್ತಿಲ್ಲವೆಂದು ಉದ್ಯೋಗಕ್ಕಾಗಿ ಹುಡುಕಾಟ ನಿಲ್ಲಿಸಿರುವವರ ಸಂಖ್ಯೆ 23.71 ಲಕ್ಷ. ಉದ್ಯೋಗ ಸಿಗುತ್ತದೆ ಎಂಬ ಭರವಸೆಯನ್ನು ಕಳೆದುಕೊಂಡಿರುವ ಯುವಶಕ್ತಿಗೆ ಬಿಜೆಪಿ ಸರ್ಕಾರಗಳು ಏನು ಮಾಡಿವೆ' ಎಂದು ಅವರು ಪ್ರಶ್ನಿಸಿದ್ದಾರೆ.

'ಉದ್ಯೋಗಕ್ಕಾಗಿ ಹುಡುಕಾಟ ಮಾಡುತ್ತಿರುವವರು, ಉದ್ಯೋಗವನ್ನು ಹುಡುಕಿ ಬೇಸತ್ತು ಹುಡುಕಾಟ ನಿಲ್ಲಿಸಿರುವವರನ್ನು ಒಟ್ಟಾಗಿ ಸೇರಿಸಿದರೆ ಅದನ್ನು ಗ್ರೇಟರ್ ಅನ್‌ಎಂಪ್ಲಾಯ್‌ಮೆಂಟ್ ರೇಟ್ ಎಂದು ಕರೆಯುತ್ತಾರೆ. 2018ರಲ್ಲಿ ಗ್ರೇಟರ್ ಅನ್‌ಎಂಪ್ಲಾಯ್‌ಮೆಂಟ್ ದರವು ಶೇ 4.42ರಷ್ಟಿತ್ತು, ಅದು 2022ರಲ್ಲಿ ಶೇ 11.73 ರಷ್ಟಿದೆ. ನಮ್ಮ ಸರ್ಕಾರದ ಅವಧಿಗೆ ಹೋಲಿಸಿದರೆ ಶೇ 7.3ರಷ್ಟು ನಿರುದ್ಯೋಗ ಹೆಚ್ಚಾಗಿದೆ' ಎಂದರು.

'ಸರ್ಕಾರ ಸ್ಪಷ್ಟವಾದ ದಾಖಲೆಗಳನ್ನು ಬಿಡುಗಡೆ ಮಾಡಬೇಕು. ಈ ಮಹಾ ಸುಳ್ಳಿನ ಕುರಿತು ರಾಜ್ಯದ ಜನರಲ್ಲಿ ಮುಖ್ಯಮಂತ್ರಿ ಕ್ಷಮೆ ಕೇಳಬೇಕು' ಎಂದೂ ಸಿದ್ದರಾಮಯ್ಯ ಆಗ್ರಹಿಸಿದರು.

ಹಕ್ಕುಪತ್ರಕ್ಕೆ ಆಗ್ರಹಿಸಿ ಪ್ರತಿಭಟನೆ



ದಿನ್ನೂರು ಗ್ರಾಮಸ್ಥರು ಡಾ.ಬಿ.ಆರ್‌.ಅಂಬೇಡ್ಕರ್ ಪ್ರತಿಮೆ ಎದುರು ಪ್ರತಿಭಟನಾ ಧರಣಿ ನಡೆಸಿದರು.

ಕೆ.ಆರ್.ಪುರ: ಕಾಡುಗುಡಿ ಪ್ಲಾಂಟೇಷನ್ ದಲಿತ ರೈತ ಕುಟುಂಬಗಳ ಐದು ಅಂಶಗಳ ನ್ಯಾಯಯುತವಾದ ಬೇಡಿಕೆಗಳನ್ನು ರಾಜ್ಯ ಸರ್ಕಾರ ಈಡೇರಿಸುವಂತೆ ಒತ್ತಾಯಿಸಿ ದಿನ್ನೂರು ಗ್ರಾಮಸ್ಥರು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ 355ನೇ ದಿನಕ್ಕೆ ಕಾಲಿಟ್ಟಿದೆ.

ಎಲ್ಲಾ ಮನೆಗಳಿಗೂ ಕಂದಾಯ ಇಲಾಖೆಯಿಂದ ಹಕ್ಕುಪತ್ರ ನೀಡುವಂತೆ ಇಪ್ಪತ್ತೈದು ವರ್ಷಗಳಿಂದ ಹೋರಾಟ ಮಾಡಿದರೂ ಸರ್ಕಾರ ನಿರ್ಲಕ್ಷ್ಯ ತೋರಿದೆ ಎಂದು ಗ್ರಾಮಸ್ಥರು ಆರೋಪಿಸಿದರು.

'ಗ್ರಾಮದ 83 ದಲಿತ ಕುಟುಂಬಗಳು 74 ವರ್ಷಗಳಿಂದ ತಮ್ಮ ಸ್ವಾಧೀನ ಅನುಭವದಲ್ಲಿರುವ ಜಮೀನಿನಲ್ಲಿ ಬೆಳೆಯುತ್ತಿದ್ದಾರೆ. ಈ ಜಮೀನಿನ ಸಾಗುವಳಿದಾರರಿಗೆ ನೀಡುತ್ತಿದ್ದ ಪಹಣಿಯನ್ನು ಮುಂದುವರಿಸಿ ಕಂದಾಯ ವಸೂಲಿ ಮಾಡಬೇಕೆಂದು ಹಲವು ಹೋರಾಟಗಳ ಮೂಲಕ ಮನವಿ ಸಲ್ಲಿಸಿದ್ದೇವೆ. ಆದರೂ, ಸರ್ಕಾರ ಗಮನ ಹರಿಸುತ್ತಿಲ್ಲ. ಬೆಂಗಳೂರು ಮೆಟ್ರೊ ರೈಲ್ವೆ ನಿಗಮ ಸ್ವಾಧೀನ ಪಡಿಸಿಕೊಂಡಿರುವ 49 ಎಕರೆ ದಲಿತ ರೈತ ಕುಟುಂಬಗಳಿಗೆ ಪರಿಹಾರವೂ ನೀಡಿಲ್ಲ' ಎಂದು ಗ್ರಾಮಸ್ಥರು ಅಳಲು ತೋಡಿಕೊಂಡರು.

'ಗ್ರಾಮದ ದಲಿತ ರೈತ ಕುಟುಂಬದವರಾದ ನಾವೆಲ್ಲ ಕೃಷಿ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗಿದ್ದೇವೆ. ರೈತರ ಮಕ್ಕಳು ವಿದ್ಯಾವಂತರಾದರೂ ಕಾಯಂ ಉದ್ಯೋಗವಿಲ್ಲದೆ ನಿರುದ್ಯೋಗ ಸಮಸ್ಯೆಗೆ ಸಿಲುಕಿದ್ದೇವೆ' ಎಂದು ದಿನ್ನೂರು ಗ್ರಾಮದ ಮುಖಂಡ ರಾಜು ಆರೋಪಿಸಿದರು.

ಗ್ರಾಮದ ಮುನೇಂದ್ರ, ಜ್ಞಾನ ಲೋಕ ಬಂತೇಜಿ, ವಕೀಲ ವಿಜಿಯನ್, ದಲಿತ ಮುಖಂಡರಾದ ರಾಜು, ಎಂ.ಆರ್. ವೆಂಕಟೇಶ್, ಬಿ.ಎಂ.ವೆಂಕಟೇಶ್, ಮುನಿರಾಜು, ಗೋವರ್ಧನ್, ಮುನಿಮಾರಪ್ಪ, ಕ್ರಿಸ್ತುರಾಜ್, ಮುನೇಂದ್ರ ಇದ್ದರು.

ಸೈಕಲ್‌ನಲ್ಲಿ ಪರ್ಯಟನೆ



ಸುದೀಪ್ ದಾಸ್

ದಾಬಸ್‌ಪೇಟೆ: ಪಶ್ಚಿಮ ಬಂಗಾಳ ರಾಜ್ಯದ ಕೋಲ್ಕತ್ತ ನಗರದ ಸುದೀಪ್ ದಾಸ್ ಎಂಬುವರು 'ದೇಶವನ್ನು ಮಾಲಿನ್ಯ ಮುಕ್ತವಾಗಿ ಮಾಡಲು ಸೈಕಲ್ ಬಳಸಬೇಕು, ಮರ ಉಳಿಸಬೇಕು' ಎಂದು ಜನರಲ್ಲಿ ಜಾಗೃತಿ ಮೂಡಿಸಲು 28 ರಾಜ್ಯಗಳಲ್ಲಿ ಸೈಕಲ್ ಪರ್ಯಟನೆ ಕೈಗೊಂಡಿದ್ದಾರೆ.

ಅಗತ್ಯ ವಸ್ತುಗಳನ್ನು ಕಟ್ಟಿಕೊಂಡು, ಸಾಮಾನ್ಯ ಸೈಕಲ್ ಒಂದರಲ್ಲಿ ಇಂಗ್ಲಿಷ್‌ನಲ್ಲಿ ಬರೆದ ಸಂದೇಶವನ್ನು ಅಳವಡಿಸಿಕೊಂಡು ಸಂಚರಿಸುತ್ತಿದ್ದಾರೆ.

ಸಣ್ಣಪುಟ್ಟ ಕೆಲಸಗಳಿಗೆಲ್ಲ ಕಾರು, ದ್ವಿಚಕ್ರ ವಾಹನಗಳನ್ನು ಬಳಸುವ ಬದಲು ಸೈಕಲ್ ಬಳಸಿದರೆ ಅವುಗಳಿಂದ ಪರಿಸರಕ್ಕೆ ಆಗುವ ಮಾಲಿನ್ಯವು ತಪ್ಪುತ್ತದೆ. ಆರೋಗ್ಯವು ಸುಧಾರಿಸುತ್ತದೆ ಎಂದು ಸುದೀಪ್ ದಾಸ್ ಹೇಳಿದರು.

ಪರಿಸರದ ಸಮತೋಲನಕ್ಕೆ ಅಗತ್ಯವಾದ ಮರಗಳನ್ನು ಅಭಿವೃದ್ಧಿಯ ಹೆಸರಲ್ಲಿ ಕಡಿಯುವುದು ನಿಲ್ಲಿಸಬೇಕು. ಇದರಿಂದ ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಬಹುದು ಎಂದರು.

ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆಯಲ್ಲಿ ಚಿತ್ರಕಥೆಗಾರ ವಿಜಯೇಂದ್ರ ಪ್ರಸಾದ್ ಅಭಿಮತ

ವಿಶ್ವದ ಗಮನ ಸೆಳೆದ ಕೆಜಿಎಫ್, ಕಾಂತಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಜಿಎಫ್, ಕೆಜಿಎಫ್-2 ಹಾಗೂ ಕಾಂತಾರ ಚಿತ್ರಗಳಿಂದಾಗಿ ವಿಶ್ವ ಚಿತ್ರರಂಗದ ಗಮನವನ್ನು ಕರ್ನಾಟಕ ಸೆಳೆದಿದೆ ಎಂದು ಚಿತ್ರಕಥೆ ರಚನಕಾರ ವಿ.ವಿಜಯೇಂದ್ರ ಪ್ರಸಾದ್ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನಸೌಧದ ಮುಂಭಾಗ ಗುರುವಾರ ಹಮ್ಮಿಕೊಂಡಿದ್ದ 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕನ್ನಡದ ಮೇರುನಟ ರಾಜ್‌ಕುಮಾರ್ ಹೇಳಿದಂತೆ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು. ಮೆಟ್ಟಿದರೆ ಕನ್ನಡ ಮಣ್ಣು ಮೆಟ್ಟಬೇಕು'. ನಾನು ಕನ್ನಡದ ನೆಲದಲ್ಲಿ ಹುಟ್ಟದಿದ್ದರೂ, ಮದುವೆಯಾಗಿರುವುದು ಕನ್ನಡನಾಡಲ್ಲಿ. ಮಗಳು ಜನಿಸಿದ್ದು ಈ ನೆಲದಲ್ಲಿ. ಆ ಮೂಲಕ ಕರ್ನಾಟಕದ ಜತೆಗಿನ ನನ್ನ ಬಾಂಧವ್ಯ ಬೆಸೆದಿದೆ' ಎಂದರು.

ಚಲನಚಿತ್ರೋತ್ಸವ ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ರಾಜ್ಯದಲ್ಲಿ ಅತ್ಯಾಧುನಿಕ ಸೌಲಭ್ಯಗಳಿರುವ ಅಂತರರಾಷ್ಟ್ರೀಯ ತಂತ್ರಜ್ಞಾನ ಒಳಗೊಂಡ 'ಫಿಲ್ಮ್‌ಸಿಟಿ' ನಿರ್ಮಾಣಕ್ಕೆ ತ್ವರಿತ ನಿರ್ಧಾರ ತೆಗೆದುಕೊಳ್ಳಲಾಗುವುದು. ಈಗಾಗಲೇ ಸಣ್ಣ, ನಗರ ಪಟ್ಟಣಗಳಲ್ಲಿ ಕಿರುಚಿತ್ರಮಂದಿರಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿದೆ. 200 ಚಿತ್ರಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ' ಎಂದರು.

ಡಿಜಿಟಲೀಕರಣದ ನಂತರ ಚಿತ್ರಗಳ ನಿರ್ಮಾಣದ ಸ್ವರೂಪವೂ ಬದಲಾಗಿದೆ. ಬದುಕಿನ ವೇಗಕ್ಕೆ ತಕ್ಕಂತೆ ಚಿತ್ರಗಳ ನಿರ್ಮಾಣವಾಗುತ್ತಿವೆ. ಅಂತರರಾಷ್ಟ್ರೀಯ ತಂತ್ರಜ್ಞಾನ ಬಳಕೆ, ವಸ್ತು ನಿಷ್ಠ ಕಥೆಗಳಿಂದಾಗಿ ಕನ್ನಡ ಚಿತ್ರಗಳು ಗಮನ ಸೆಳೆಯುತ್ತಿವೆ. ಸ್ಥಳೀಯ ಆಚರಣೆಗಳ ಕಥೆ ಒಳಗೊಂಡ ಕಾಂತಾರ ವಿದೇಶಗಳಲ್ಲೂ ಸದ್ದು ಮಾಡುತ್ತಿದೆ ಎಂದರು.

ಕಂದಾಯ ಸಚಿವ ಆರ್.ಅಶೋಕ, ನಟ ಅಭಿಷೇಕ್ ಅಂಬರೀಶ್, ನಟಿಯರಾದ ಸಪ್ತಮಿಗೌಡ, ಹರ್ಷಿಕಾ ಪೂಣಚ್ಚ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್, ರಿಜಿಸ್ಟ್ರಾರ್ ಜಿ. ಹಿಮಂತರಾಜು, ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್, ವಾರ್ತಾ ಇಲಾಖೆ ಆಯುಕ್ತ ಪಿ.ಎಸ್.ಹರ್ಷ, ಕಲಾತ್ಮಕ ನಿರ್ದೇಶಕ ಎಚ್.ಎನ್. ನರಹರಿರಾವ್, ಸಂಸದ ಮುನಿಸ್ವಾಮಿ, ಶಾಸಕ ರಾಜುಗೌಡ, ಎಂ.ಕೃಷ್ಣಪ್ಪ ಉಪಸ್ಥಿತರಿದ್ದರು.

ಗಮನ ಸೆಳೆಯುವ ಕನ್ನಡ ಚಿತ್ರಗಳು

'ಭಾರತೀಯ ಸಿನಿಮಾಗಳಲ್ಲಿ ಕನ್ನಡದ ಚಿತ್ರಗಳಿಗೆ ವಿಶೇಷ ಸ್ಥಾನವಿದೆ. ರಾಜ್ಯದ ಹಲವು ನಟರು, ತಂತ್ರಜ್ಞರ ಜತೆ ಕೆಲಸ ಮಾಡಿದ್ದೇನೆ. ರಾಜ್ಯದ ಚಲನಚಿತ್ರೋತ್ಸವದಲ್ಲಿ ಭಾಗವಹಿಸಲು ಸಂತಸವಾಗಿದೆ' ಎಂದು ಹಿಂದಿ ಸಿನಿಮಾ ನಿರ್ದೇಶಕ ಗೋವಿಂದ ನಿಹಲಾನಿ ಹೇಳಿದರು.



ವಿಧಾನಸೌಧದ ಮುಂಭಾಗ ಗುರುವಾರ ಹಮ್ಮಿಕೊಂಡಿದ್ದ 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿತ್ರಕಥೆ ರಚನಕಾರ ವಿ.ವಿಜಯೇಂದ್ರ ಪ್ರಸಾದ್ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಸಚಿವ ಆರ್.ಅಶೋಕ, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಬಾ.ಮ.ಹರೀಶ್, ನಟಿ ಸಪ್ತಮಿಗೌಡ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್ ಇದ್ದಾರೆ –ಪ್ರಜಾವಾಣಿ ಚಿತ್ರ.

ರಸಪ್ರಶ್ನೆ ಸ್ಪರ್ಧೆ: ಫಲಿತಾಂಶ ಪ್ರಕಟ



ಲೇಖನ್ ಗೌಡ ಟಿ.ಎಲ್.



ಲಿಖಿತ್ ಗೌಡ ಟಿ.ಎಲ್.



ಚಿರಂತ್ ಎಂ.ಎಸ್.

ಬೆಂಗಳೂರು: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಆನ್‌ಲೈನ್‌ನಲ್ಲಿ ನಡೆದಿದ್ದ ನೀರು-ನೈರ್ಮಲ್ಯ-ಆರೋಗ್ಯ ಕುರಿತ ರಸಪ್ರಶ್ನೆ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದೆ.

ಹಾಸನ ಜಿಲ್ಲೆಯ ಹೊಳೆನರಸೀಪುರದ ಪ್ರಿಯದರ್ಶಿನಿ ಶಾಲೆಯ 9ನೇ ತರಗತಿಯ ಲಿಖಿತ್ ಗೌಡ ಟಿ.ಎಲ್ (ಪ್ರಥಮ ₹5 ಸಾವಿರ ನಗದು), ಅದೇ ಶಾಲೆಯ 9ನೇ ತರಗತಿಯ ಲೇಖನ್ ಗೌಡ ಟಿ.ಎಲ್ (ದ್ವಿತೀಯ, ₹4 ಸಾವಿರ) ಮತ್ತು ಹಾಸನದ ವಿಜಯ ಶಾಲೆಯ 9ನೇ ತರಗತಿಯ ಚಿರಂತ್ ಎಸ್., ಮತ್ತು 8ನೇ ತರಗತಿ ಬಿ.ರಾಘವ್ (ತೃತೀಯ, ₹ 3 ಸಾವಿರ) ಅವರು ವಿಜೇತರಾಗಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳ ಶಾಲೆಯ 15 ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನಕ್ಕೆ (₹1 ಸಾವಿರ ಬಹುಮಾನ ಮತ್ತು ಪುಸ್ತಕ) ಆಯ್ಕೆಯಾಗಿದ್ದಾರೆ. ಇದೇ ತಿಂಗಳು ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ವಸತಿ ಸಮುಚ್ಚಯವನ್ನು ಸಚಿವರಾದ ವಿ. ಸೋಮಣ್ಣ, ಬೈರತಿ ಬಸವರಾಜ ಅವರು ಲೋಕಾರ್ಪಣೆ ಮಾಡಿದರು. ವ್ಯವಸ್ಥಾಪಕ ನಿರ್ದೇಶಕರಾದ ಶಿವಶಂಕರ್, ಸಂಚಿತಯ್ಯ, ಮುಖಂಡರಾದ ನಾಗೇನಹಳ್ಳಿ ನಾಗೇಶ್, ಅಭಯ್ ಶ್ರೀನಿವಾಸ್ ಇದ್ದರು

ಕೆ.ಆರ್.ಪುರ: ಕೆ.ನಾರಾಯಣಪುರದಲ್ಲಿ ವಸತಿ ಸಮುಚ್ಚಯ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಸ್ವಂತ ಸೂರು ಒದಗಿಸುವುದು ಸರ್ಕಾರದ ಬಹುದೊಡ್ಡ ಕನಸು ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಕೆ.ಆರ್.ಪುರ ಸಮೀಪದ ಕೆ.ನಾರಾಯಣಪುರದಲ್ಲಿ ನಿರ್ಮಿಸಲಾಗಿರುವ ವಸತಿ ಸಮುಚ್ಚಯಗಳ ಲೋಕಾರ್ಪಣೆ ಮತ್ತು ವಸತಿಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಹುಮಹಡಿ ಬೆಂಗಳೂರು ವಸತಿ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕೇಂದ್ರ ಸರ್ಕಾರವು ₹600 ಕೋಟಿ ಅನುದಾನ ನೀಡಿದ್ದು, ಆರ್ಥಿಕವಾಗಿ ಹಿಂದುಳಿದವರಿಗೆ ಸೂರು ಕಲ್ಪಿಸುವುದು ಸರ್ಕಾರದ ಕನಸಾಗಿದೆ ಎಂದು ತಿಳಿಸಿದರು.

ಬೆಂಗಳೂರು ಹೊರವಲಯದ ಎಂಟು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 78 ಸ್ಥಳಗಳಲ್ಲಿ ವಾಸ ಮಾಡಲು ಯೋಗ್ಯವಿರುವ 493 ಎಕರೆ ಸರ್ಕಾರಿ ಜಮೀನನ್ನು ಬಳಸಿಕೊಂಡು 59,476 ಬಹುಮಹಡಿ ಮನೆಗಳನ್ನು ಮೂಲ ಸೌಕರ್ಯಗಳೊಂದಿಗೆ ನಿರ್ಮಿಸಲಾಗುತ್ತಿದೆ. ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದಲ್ಲಿ 160, ತೋಟಗೆರೆಯಲ್ಲಿ 260, ಕುಕ್ಕರಹಳ್ಳಿಯಲ್ಲಿ 512 ಗೂಳಿಮಂಗಲದಲ್ಲಿ 144 ಮತ್ತು ಜೆ. ಭಂಗಿಪುರದಲ್ಲಿ 96; ಒಟ್ಟು 1,172 ಮನೆಗಳನ್ನು ಲೋಕಾರ್ಪಣೆ ಮಾಡಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು ಎಂದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಮಾತನಾಡಿ, 'ಕಂದಾಯ ಮತ್ತು ವಸತಿ ಇಲಾಖೆಯು ನಗರದ ಎಲ್ಲಾ ಬಡ ವರ್ಗದವರಿಗೂ ವಾಸಿಸಲು ಸ್ವಂತ ಸೂರು ಮಾಡಿ ಕೊಟ್ಟಿದೆ. ಇದರಿಂದ ಒಂದು ಬಿ.ಎಚ್.ಕೆ ಮನೆಯನ್ನು ₹ 6 ಲಕ್ಷಕ್ಕೆ ಮತ್ತು 2 ಬಿ.ಎಚ್.ಕೆ ಮನೆಯನ್ನು 14 ಲಕ್ಷಕ್ಕೆ ಫಲಾನುಭವಿಗಳು ಪಡೆಯಬಹುದು. ಫಲಾನುಭವಿಗಳು ಯಾರು ಕೂಡ ಯಾವುದೇ ಕಾರಣಕ್ಕೂ ಈ ಮನೆಗಳನ್ನು ಮಾರಾಟ ಮಾಡಬಾರದು' ಎಂದು ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕ ಶಿವ ಶಂಕರ್, ಸಂಚಿತಯ್ಯ, ಮುಖಂಡರಾದ ನಾಗೇನಹಳ್ಳಿ ಲೋಕೇಶ್, ಅಭಯ್ ಶ್ರೀನಿವಾಸ್ ಇದ್ದರು.

ಕಾರ್ಮಿಕರಿಬ್ಬರ ಸಾವು: ಪಿಡಿಒ ಅಮಾನತು

ಪ್ರಜಾವಾಣಿ ವಾರ್ತೆ

ಜಗಳೂರು: ತಾಲ್ಲೂಕಿನ ಬಸವನಕೋಟೆಯಲ್ಲಿ ಸೋಮವಾರ ಚರಂಡಿ ಸ್ವಚ್ಛಗೊಳಿಸುವಾಗ ದಿನಗೂಲಿ ಕಾರ್ಮಿಕರಿಬ್ಬರು ಸಾವಿಗೀಡಾದ ಘಟನೆಗೆ ಸಂಬಂಧಿಸಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಶಶಿಧರ್ ಪಾಟೀಲ್ ಅವರನ್ನು ಗುರುವಾರ ಸೇವೆಯಿಂದ ಅಮಾನತು ಮಾಡಲಾಗಿದೆ.

'ಮುಂಜಾಗ್ರತೆ ಕೈಗೊಳ್ಳದೆ ಕಾರ್ಮಿಕರಾದ ಡಿ.ಸತ್ಯಪ್ಪ ಮತ್ತು ಎನ್.ಮೈಲಪ್ಪ ಅವರ ಸಾವಿಗೆ ಕಾರಣವಾಗಿದ್ದಾರೆ' ಎಂದು ಸ್ಥಳ ಪರಿಶೀಲಿಸಿದ್ದ ಅಧಿಕಾರಿಗಳ ವರದಿ ಆಧರಿಸಿ ಜಿಲ್ಲಾ ಪಂಚಾಯಿತಿ ಸಿಇಒ ಅಮಾನತು ಆದೇಶ ಹೊರಡಿಸಿದ್ದಾರೆ.

ಬೆಂಗಳೂರು ರೇಸ್

ಆಸ್ಪೀಸಿಯಸ್ ಕ್ವೀನ್ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಸ್ಪೀಸಿಯಸ್ ಕ್ವೀನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್ ಮ್ಯಾಕ್ರಾನ್ 2, ಟಾಪ್ ಡ್ಯಾನ್ಸರ್ 1, ಸೇಕ್ರೆಡ್ ಕ್ರಿಯೇಟರ್ 5
2ನೇ ರೇಸ್: ಸೀ ಬ್ಲಶ್ 4, ಜಾರೆವಿಕ್ 3, ಮೈ ವಿಶನ್ 5
3ನೇ ರೇಸ್: ಫಾಯ್ 3, ಅಕ್ಯುಮಲೇಟ್ 6, ಸ್ಪೀಕಿಂಗ್ ಆಫ್ ಸ್ಟಾರ್ಸ್ 4
4ನೇ ರೇಸ್: ಕಿಂಗ್ ಆಫ್ ವಾರ್ 3, ಮಸ್ಟೀರಿಯನ್ 5, ಅಕ್ವಮೇಟಿವ್ 10
5ನೇ ರೇಸ್: ಲಾಟರ್‌ಬ್ರನೆನ್ 8, ಮಿಸ್ಟಿಕ್ ಐ 5, ಸ್ಟಾರಿ ವಿಂಡ್ 3
6ನೇ ರೇಸ್: ಲಾಸ್ಟ್ ವಿಶ್ 4, ಶುಭಂಕರ್ 5, ಲಿಸರ್ಗಸ್ 9
7ನೇ ರೇಸ್: ಆಸ್ಪೀಸಿಯಸ್ ಕ್ವೀನ್ 5, ಗ್ರಾನ್‌ಪರ್ 2, ಮಿರಾಕಲ್ ಮೇರಿ 6
8ನೇ ರೇಸ್: ಸೀಝ್ ಕರೇಜಿಯಸ್ 6, ಆಚ್‌ವೇರ್ 5, ಅನಾಕಿನ್ 3
9ನೇ ರೇಸ್: ಆಂಟಲೋಪ್ 1, ಅಲ್ಟಿಮೇಟ್ ಚಾನ್ಸ್ 3, ಮೆಗಾ ಸಕ್ಸಸ್ 5

ಉತ್ತಮ ಬೆಟ್: ಲಾಸ್ಟ್ ವಿಶ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಜಯಲಲಿತಾಗೆ ಸೌಲಭ್ಯ: ನಿವೃತ್ತ ಡಿಜಿಪಿ ಸತ್ಯನಾರಾಣ ರಾವ್ ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜಯಲಲಿತಾ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ ಶಶಿಕಲಾ ಅವರಿಗೆ ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಸೌಲಭ್ಯ ಕಲ್ಪಿಸಲು ₹ 2 ಕೋಟಿ ಲಂಚ ಪಡೆದ ಆರೋಪದ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ನಿವೃತ್ತ ಡಿಜಿಪಿ ಸತ್ಯನಾರಾಯಣ ರಾವ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಸಂಬಂಧ ಸತ್ಯನಾರಾಯಣ ರಾವ್ 2018ರಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ರವಿ ವಿ. ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ 2021ರ ಡಿಸೆಂಬರ್ 30ರಂದು ಹೊರಡಿಸಿದ ಆದೇಶದಲ್ಲಿ ಅರ್ಜಿದಾರರನ್ನು ನಿರಪರಾಧಿ ಎಂಬುದಾಗಿ ಹೇಳಲಾಗಿದೆ. ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿಯೂ ಅರ್ಜಿದಾರರ ಹೆಸರಿಲ್ಲ. ಇತರೆ ಇಬ್ಬರ ವಿರುದ್ಧ ಮಾತ್ರ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಆದ್ದರಿಂದ, ಈ ಅರ್ಜಿಯ ವಿಚಾರಣೆ ಅಗತ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ ವಿಲೇವಾರಿ ಮಾಡಿತು.

'ಒಂದು ವೇಳೆ ಸರ್ಕಾರ ಯಾವುದಾದರೂ ಕ್ರಮ ಜರುಗಿಸಿದ ಪಕ್ಷದಲ್ಲಿ ಅರ್ಜಿದಾರರು ನ್ಯಾಯಾಲಯದ ಮೊರೆ ಹೋಗಲು ಸ್ವತಂತ್ರರಿದ್ದಾರೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?

ಶಶಿಕಲಾಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಐಷಾರಾಮಿ ಸೌಲಭ್ಯ ಒದಗಿಸಲು ಎರಡು ಕೋಟಿ ಲಂಚ ಪಡೆಯಲಾಗಿದೆ ಎಂದು 2017ರಲ್ಲಿ ಅಂದಿನ ರಾಜ್ಯ ಬಂದೀಖಾನೆ ಇಲಾಖೆ ಡಿಐಜಿಯಾಗಿದ್ದ ಡಾ.ಡಿ. ರೂಪ ಆರೋಪಿಸಿದ್ದರು. ಈ ಸಂಬಂಧ ವಿಚಾರಣೆ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ವಿನಯ್ ಕುಮಾರ್ ಅವರನ್ನು ಸರ್ಕಾರ ನೇಮಿಸಿತ್ತು. ವಿಚಾರಣೆ ಪೂರ್ಣಗೊಳಿಸಿದ್ದ ವಿನಯ್ ಕುಮಾರ್, 2017ರ ಅಕ್ಟೋಬರ್ 21ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ವರದಿ ಸಲ್ಲಿಸಿದ್ದರು.

ಆ ವರದಿಯನ್ನು 2018ರ ಫೆ.26ರಂದು ಸಮ್ಮತಿಸಿದ್ದ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಕರಣ ಕುರಿತು ತನಿಖೆ ನಡೆಸುವಂತೆ ಎಸಿಬಿಗೆ ನಿರ್ದೇಶಿಸಿದ್ದರು. ಅದರಂತೆ ಎಸಿಬಿ ಪೊಲೀಸರು ಮಾ.3ರಂದು ಎಫ್‌ಐಆರ್ ದಾಖಲಿಸಿದ್ದರು. ಅದನ್ನು ರದ್ದುಪಡಿಸುವಂತೆ ಕೋರಿ 2018ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದ ಸತ್ಯನಾರಾಯಣ ರಾವ್, ಶಶಿಕಲಾಗೆ ಜೈಲಿನಲ್ಲಿ ವಿಶೇಷ ಸೌಲಭ್ಯ ಕಲ್ಪಿಸಲು ತಾನು ಯಾವುದೇ ಲಂಚ ಪಡೆದಿಲ್ಲ ಎಂದು ಸಮರ್ಥಿಸಿಕೊಂಡಿದ್ದರು.



ಪ್ರತಿಭಟನೆ 'ಮಹಿಳಾ ಕಾರ್ಮಿಕರಿಗೆ ದಿನದಲ್ಲಿ 12 ಗಂಟೆ ಕೆಲಸ ಹಾಗೂ ರಾತ್ರಿ ಪಾಳಿ ಕೆಲಸ ನಿಗದಿಪಡಿಸಿರುವುದನ್ನು ರದ್ದುಪಡಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ವರ್ಕರ್ಸ್ ಯೂನಿಯನ್ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಯುಯುಸಿಎಂಎಸ್: 4 ಹೊಸ ಘಟಕ ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯಡಿ (ಯುಯುಸಿಎಂಎಸ್) ನಾಲ್ಕು ಹೊಸ ಘಟಕಗಳಿಗೆ (ಮಾಡ್ಯೂಲ್) ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಗುರುವಾರ ಚಾಲನೆ ನೀಡಿದರು.

ಹಣಕಾಸು ಯೋಜನೆ ಮತ್ತು ಉಸ್ತುವಾರಿ, ಮಾನ್ಯತೆ, ಮಾನವ ಸಂಪನ್ಮೂಲ ಹಾಗೂ ವಿದ್ಯಾರ್ಥಿಗಳಿಗೆ ನೆರವು ನೀಡುವ ವಿದ್ಯಾರ್ಥಿ ಬೆಂಬಲಿತ ಘಟಕಗಳು ಅಸ್ತಿತ್ವಕ್ಕೆ ಬಂದಿವೆ. ಮೊದಲಿದ್ದ ಶೈಕ್ಷಣಿಕ, ಪ್ರವೇಶ ಮತ್ತು ಪರೀಕ್ಷಾ ಘಟಕಗಳು ಸೇರಿ ಈ ವ್ಯವಸ್ಥೆಯಡಿ ರೂಪಿಸಿರುವ ಘಟಕಗಳ ಸಂಖ್ಯೆ ಏಳಕ್ಕೇರಿದೆ. ಇನ್ನೂ ಮೂರು ಘಟಕಗಳನ್ನು ಶೀಘ್ರ ರೂಪಿಸಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು.

ಸರ್ಕಾರಿ ವಿಶ್ವವಿದ್ಯಾಲಯದ ಎಲ್ಲ ಆದಾಯ, ವೆಚ್ಚಗಳ ಲೆಕ್ಕ ನಿಖರವಾಗಿ ಸಿಗಲಿದೆ. ಇದರಿಂದ ಯಾವುದೇ ಅಕ್ರಮಕ್ಕೆ ಇಲ್ಲಿ ಆಸ್ಪದ ಇರುವುದಿಲ್ಲ. ವಿದ್ಯಾರ್ಥಿಗಳು ಹಾಸ್ಟೆಲ್ ಸೀಟು, ವಿದ್ಯಾರ್ಥಿವೇತನ, ಸಾಂಸ್ಕೃತಿಕ ಚಟುವಟಿಕೆಗಳ ಮಾಹಿತಿ ಪಡೆದುಕೊಳ್ಳಬಹುದು. ಉದ್ಯೋಗಗಳಿಗೆ ಅರ್ಜಿ ಹಾಕುವ ಸಮಯದಲ್ಲೂ ಉಪಯೋಗವಾಗಲಿದೆ ಎಂದರು.

ವಿಟಿಯು ಕುಲಪತಿ ಡಾ. ವಿದ್ಯಾಶಂಕರ್, ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ಪೊನ್ನುರಾಜ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ಉಪ ಕಾರ್ಯದರ್ಶಿ ಸ್ನೇಹಲ್ ಲೋಖಂಡೆ ಇದ್ದರು.

ಕಾನ್‌ಸ್ಟೆಬಲ್ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ



ಜಾಫರ್

ಬಳ್ಳಾರಿ: ಇಲ್ಲಿನ ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಡಿಎಆರ್) ಪೊಲೀಸ್ ಕಾನ್‌ಸ್ಟೆಬಲ್ ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದು, ರಾಡ್‌ನಿಂದ ಹಲ್ಲೆ ನಡೆಸಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಜಾಫರ್ ಮೃತ ಕಾನ್‌ಸ್ಟೆಬಲ್. ಪೊಲೀಸ್ ವಸತಿ ಗೃಹದಲ್ಲಿ ಬುಧವಾರ ರಾತ್ರಿ ಇವರು ಪ್ರಜ್ಞೆ ತಪ್ಪಿ ಬಿದ್ದಿದ್ದರು. ಕಿವಿಯಲ್ಲಿ ರಕ್ತಸ್ರಾವವಾಗಿ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಗಾಂಧಿನಗರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

2009 ರಲ್ಲಿ ಡಿಎಆರ್ ಪೊಲೀಸ್ ಕಾನ್‌ಸ್ಟೆಬಲ್ ಆಗಿ ನೇಮಕವಾಗಿದ್ದ ಜಾಫರ್, 2ನೇ ಮದುವೆಯಾಗಿದ್ದರು. 2ನೇ ಪತ್ನಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಇವರ ಮೊದಲ ಹೆಂಡತಿ ಮುಸ್ಲಿಂ, ಎರಡನೇ ಹೆಂಡತಿ ಹಿಂದೂ ಎಂಬ ಮಾಹಿತಿ ಲಭ್ಯವಾಗಿದೆ. ಮೊದಲ ಹೆಂಡತಿಯನ್ನು ತವರು ಮನೆಯಲ್ಲಿ ಬಿಟ್ಟಿದ್ದ ಇವರು ಕಳೆದ ಕೆಲವು ದಿನಗಳ ಹಿಂದೆ 2ನೇ ಪತ್ನಿ ಜತೆಗೂ ಮನಸ್ತಾಪ ಮಾಡಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

ಮಾರಾಮಾರಿ: ಸ್ನೇಹಿತನ ಕೊಲೆ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿ ಸ್ನೇಹಿತರ ನಡುವೆ ಗುರುವಾರ ರಾತ್ರಿ ಮಾರಾಮಾರಿ ನಡೆದಿದ್ದು, ಮಲ್ಲಿನಾಥ ಬಿರಾದಾರ (36) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

'ಕಲಬುರಗಿಯ ಮಲ್ಲಿನಾಥ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಸಿಗರೇಟ್ ವಿಚಾರವಾಗಿ ನಡೆದ ಗಲಾಟೆಯಲ್ಲಿ ಮಲ್ಲಿನಾಥ್ ಕೊಲೆಯಾಗಿದೆ. ಆರೋಪಿ ಗಣೇಶ್ ಎಂಬಾತನಿಗೂ ಗಾಯವಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ' ಎಂದು ಉಪ್ಪಾರಪೇಟೆ ಠಾಣೆ ಪೊಲೀಸರು ಹೇಳಿದರು.

'ಮಲ್ಲಿನಾಥ್ ಹಾಗೂ ಚಿಕ್ಕಮಗಳೂರಿನ ಗಣೇಶ್, ಸ್ನೇಹಿತರು. ನಗರದ ಹೋಟೆಲ್‌ಗಳಲ್ಲಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ಸ್ವಚ್ಛತೆ ಕೆಲಸ ಮಾಡುತ್ತಿದ್ದರು. ರಾತ್ರಿ ಒಟ್ಟಿಗೆ ಮದ್ಯ ಕುಡಿದು, ಮೆಜೆಸ್ಟಿಕ್ ಸುತ್ತಮುತ್ತ ಮಲಗುತ್ತಿದ್ದರು. ಬೆಳಿಗ್ಗೆ ಪುನಃ ಕೆಲಸಕ್ಕೆ ಹೋಗುತ್ತಿದ್ದರು' ಎಂದರು.

'ಬುಧವಾರ ರಾತ್ರಿ ಸಿಗರೇಟ್ ಸೇದುವ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ನಡೆದಿತ್ತು. ಪರಸ್ಪರ ಕೈ ಕೈ ಮಿಲಾಯಿಸಿದ್ದರು. ಇನ್ನೊಬ್ಬ ಸ್ನೇಹಿತ ಮಂಜುನಾಥ್, ಜಗಳ ಬಿಡಿಸಿದ್ದರು. ಗುರುವಾರ ಬೆಳಿಗ್ಗೆ ಇಬ್ಬರೂ ಎಂದಿನಂತೆ ಕೆಲಸಕ್ಕೆ ಹೋಗಿ ರಾತ್ರಿ ಮೆಜೆಸ್ಟಿಕ್ ಬಳಿ ಬಂದಿದ್ದರು. ಪುನಃ ಜಗಳ ಶುರುವಾಗಿತ್ತು. ಇದೇ ವೇಳೆ ಆರೋಪಿ ಗಣೇಶ್, ಚಾಕುವಿನಿಂದ ಮಲ್ಲಿನಾಥ್ ಅವರಿಗೆ ಇರಿದು ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಅಕ್ರಮ ನಿಯಂತ್ರಣಕ್ಕೆ ಎಡಿಜಿಪಿ ಸೂಚನೆ



ನೆಲಮಂಗಲ: ಪಟ್ಟಣದ ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವಂತೆ ಎಡಿಜಿಪಿ ಅಲೋಕ್‌ಕುಮಾರ್ ಪೊಲೀಸರಿಗೆ ಸೂಚಿಸಿದರು.

ಪಟ್ಟಣದ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ಅವರು ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಪರಿಹಾರ ಒದಗಿಸಲು ಸೂಚಿಸಿದರು.

ಕೆಲಸವಿಲ್ಲದ ಯುವಕರು ದುಶ್ಚಟಗಳಿಗೆ ಬಲಿಯಾಗಿ, ರಿಯಲ್ ಎಸ್ಟೇಟ್, ರೌಡಿ ಹಾಗೂ ಅಕ್ರಮ ಚಟುವಟಿಕೆಗಳಲ್ಲಿ ತೊಡಗುತ್ತಿದ್ದಾರೆ. ಬೀಟ್ ಪೊಲೀಸರು ಎಲ್ಲರ ಮೇಲೆ ಕಣ್ಣಿಟ್ಟು ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು. ನೆಲಮಂಗಲದಲ್ಲಿ ಹೆಚ್ಚಿನ ವೇಳೆ ಪೊಲೀಸರು ಬಂದೋಬಸ್ತ್ ಒದಗಿಸುವುದರಲ್ಲೇ ನಿರತರಾಗಿರುತ್ತಾರೆ. ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂಬ ಸಾರ್ವಜನಿಕರ ಪ್ರಶ್ನೆಗೆ, ರಾಜ್ಯದ ಎಲ್ಲ ಕಡೆ ಸಿಬ್ಬಂದಿ ಕೊರತೆ ಇದ್ದು, ಗಮನಹರಿಸುವುದಾಗಿ ತಿಳಿಸಿದರು.

ಸಾರ್ವಜನಿಕರ ಕುಂದು ಕೊರತೆ ಆಲಿಸಿದರು. ಅಪರಾಧ ಪ್ರಕರಣಗಳ ತನಿಖೆಯ ಪ್ರಗತಿಯನ್ನು ಪರಿಶೀಲಿಸಿದರು. ರೌಡಿ ಪರೇಡ್ ಮಾಡಿಸಿ ಎಚ್ಚರಿಕೆ ನೀಡಿದರು.

ಬಿಬಿಎಂಪಿ ಕೆಲಸಗಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ವಿಚಾರವಾಗಿ ಜಗಳ ತೆಗೆದು ಸ್ನೇಹಿತೆಗೆ ಬೈದನೆಂಬ ಕಾರಣಕ್ಕೆ ರೌಡಿಯೊಬ್ಬನ ಮೇಲೆ ಕಾರು ಹರಿಸಿ ಕೊಲೆಗೆ ಯತ್ನಿಸಿದ ಆರೋಪದಡಿ ಸುನೀಲ್‌ಕುಮಾರ್ (35) ಎಂಬುವವರನ್ನು ಜೆ.ಸಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಸಂತನಗರ ನಿವಾಸಿ ಸುನೀಲ್‌ಕುಮಾರ್, ಬಿಬಿಎಂಪಿಯಲ್ಲಿ ತೆರಿಗೆ ಸಂಗ್ರಹ ಕೆಲಸ ಮಾಡುತ್ತಿದ್ದ. ರೌಡಿ ಗಗನ್ ಕೊಲೆಗೆ ಯತ್ನಿಸಿದ್ದ ಆರೋಪದಡಿ ಈತನ ವಿರುದ್ಧ ದೂರು ದಾಖಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುನೀಲ್‌ಕುಮಾರ್ ಹಾಗೂ ಗಗನ್ ಇಬ್ಬರೂ ಸ್ನೇಹಿತರು. ಮಾರ್ಚ್ 21ರಂದು ಹೋಟೆಲೊಂದರಲ್ಲಿ ಪಾರ್ಟಿ ಮಾಡಿದ್ದರು. ಮದ್ಯದ ಅಮಲಿನಲ್ಲಿ ಆಸ್ತಿ ವಿಚಾರವಾಗಿ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಸುನೀಲ್‌ನ ಸ್ನೇಹಿತೆ ಹೆಸರು ಪ್ರಸ್ತಾಪಿಸಿದ್ದ ಗಗನ್, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಸಿಟ್ಟಾದ ಸುನೀಲ್, ಗಗನ್‌ನನ್ನು ಹೋಟೆಲ್‌ನಿಂದ ಹೊರಗೆ ಎಳೆದು ತಂದು ಹಲ್ಲೆ ಮಾಡಿದ್ದ. ರಸ್ತೆಯಲ್ಲಿ ಬಿದ್ದಿದ್ದ ಗಗನ್ ಮೇಲೆ ಕಾರು ಹತ್ತಿಸಿ ಕೊಲೆಗೆ ಯತ್ನಿಸಿದ್ದ. ಕೃತ್ಯಕ್ಕೆ ಸ್ನೇಹಿತರಿಬ್ಬರು ಸಹಕಾರ ನೀಡಿದ್ದರು' ಎಂದು ತಿಳಿಸಿವೆ.

ಸಂಸತ್‌ಗೆ ಉತ್ತರ ನೀಡದ 'ಮೌನಿ ಮೋದಿ': ಬಿ.ಕೆ.ಸಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ಮೋದಿ ಅವರು ಅದಾನಿ ಪ್ರಕರಣ ಹಾಗೂ ಗುಜರಾತ್ ಗಲಭೆ ಕುರಿತ ಬಿಬಿಸಿ ಸಾಕ್ಷ್ಯಚಿತ್ರ ಕುರಿತು ಯಾವುದೇ ಪ್ರತಿಕ್ರಿಯೆ ನೀಡದೆ ಮೌನವಾಗಿದ್ದಾರೆ. ಅವರನ್ನು 'ಮೌನಿ ಮೋದಿ' ಎನ್ನಬಹುದೇ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ.ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

ತಮ್ಮ ತಣ್ಣನೆ ಕೆಲಸದ ಮೂಲಕ ದೇಶವನ್ನು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕವಾಗಿ ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗಿದ್ದ ಹಿಂದಿನ ಪ್ರದಾನಿ ಮನಮೋಹನ್ ಸಿಂಗ್ ಅವರನ್ನು 'ಮೌನಿ ಸಿಂಗ್' ಎಂದು ಟೀಕಿಸುತ್ತಿದ್ದ ಮೋದಿ ಈಗ ಏಕೆ ಮೌನಕ್ಕೆ ಜಾರಿದ್ದಾರೆ. ದೇಶದಲ್ಲಿ ಸೃಷ್ಟಿಯಾಗಿರುವ ಎರಡು ಪ್ರಮುಖ ವಿವಾದಗಳ ಬಗ್ಗೆ ಅಧಿವೇಶನದಲ್ಲೂ ಸ್ಪಷ್ಟ ನಿಲುವು ವ್ಯಕ್ತಪಡಿಸಿಲ್ಲ ಎಂದು ಅವರು ಟೀಕಿಸಿದ್ದಾರೆ.

ಈ ಎರಡು ವಿಷಯಗಳು ಜಾಗತಿಕ ಮಟ್ಟದಲ್ಲಿ ಬಹು ಚರ್ಚೆಗೆ ಒಳಪಟ್ಟಿವೆ. ಈ ವಿಷಯಗಳ ಕುರಿತು ವಿರೋಧ ಪಕ್ಷಗಳು ಸಂಸತ್‌ನಲ್ಲಿ ಸರ್ಕಾರದಿಂದ ಸ್ಪಷ್ಟನೆಗೆ ಒತ್ತಾಯಿಸಿದ್ದವು. ಸಂಸತ್ತಿನಲ್ಲಿ ಸತ್ಯ ಹೊರಬರುವುದನ್ನು ತಪ್ಪಿಸಲೆಂದೇ ಸರ್ಕಾರ ಈ ಕುರಿತು ಚಕಾರವೆತ್ತಲಿಲ್ಲ. ಇಂತಹ ವಿವಾದಾತ್ಮಕ ವಿಷಯಗಳ ಪರಿಶೀಲನೆಗೆ ರಚಿಸುವ ಜಂಟಿ ಸದನ ಸಮಿತಿ ರಚನೆಗೂ ಒಪ್ಪಿಗೆ ಕೊಡಲಿಲ್ಲ ಎಂದು ದೂರಿದ್ದಾರೆ.

ನಗರದಲ್ಲಿ ಇಂದು



ಅರಳುಮಲ್ಲಿಗೆ ಪಾರ್ಥಸಾರಥಿ

ಬ್ರಹ್ಮರಥೋತ್ಸವ: ಉಪನ್ಯಾಸ: ಅರಳುಮಲ್ಲಿಗೆ ಪಾರ್ಥಸಾರಥಿ, ಆಯೋಜನೆ: ಕಾಕೋಳು ವೇಣು ಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ರಾಜಾನುಕುಂಟೆ ಸಮೀಪದ ಕಾಕೋಳು, ಯಲಹಂಕ, ಬೆಳಿಗ್ಗೆ 7.30ರಿಂದ


ಕರವೇ ಬೆಳ್ಳಿಹಬ್ಬ ಸಂಭ್ರಮ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, 'ಮಹಾ ಸಾಧಕರು' ಪುಸ್ತಕ ಬಿಡುಗಡೆ: ಪ್ರಲ್ಹಾದ ಜೋಶಿ, 'ಕರವೇ ನಲ್ನುಡಿ' ವಿಶೇಷ ಸಂಚಿಕೆ ಬಿಡುಗಡೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಟಿ.ಎ. ನಾರಾಯಣಗೌಡ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಗಾಯತ್ರಿ ವಿಹಾರ, ಅರಮನೆ ರಸ್ತೆ, ಬೆಳಿಗ್ಗೆ 10

ಬಾನ್ಸಿಯಾ ಭವನ ನೂತನ ಕಟ್ಟಡ ಉದ್ಘಾಟನೆ: ವಿ. ಸೋಮಣ್ಣ, ವಿಶೇಷ ಅತಿಥಿ: ಕೆ.ಎನ್. ನರಸಿಂಹಮೂರ್ತಿ, ಅಧ್ಯಕ್ಷತೆ: ಬೋರೇಗೌಡ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಉತ್ತರ ಸಣ್ಣ ಕೈಗಾರಿಕೆಗಳ ಸಂಘ, 2ನೇ ಮುಖ್ಯ ರಸ್ತೆ, ಕಾಮಾಕ್ಷಿಪಾಳ್ಯ, ಮಧ್ಯಾಹ್ನ 11

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ 11: ಡಾ. ಸರೋಜಿನಿ ಮಹಿಷಿ, ಉಪನ್ಯಾಸ: ವಸುಂಧರಾ ಭೂಪತಿ, ಆಶಯ ನುಡಿ: ಬಾ.ಹ. ಉಪೇಂದ್ರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ. ಶ್ರೀ. ಪ್ರತಿಮೆ ಎದುರು, ನ್ಯಾಷನಲ್ ಹೈಸ್ಕೂಲ್ ವೃತ್ತ, ಬಸವನಗುಡಿ, ಬೆಳಿಗ್ಗೆ 11

'ಕಲಾಕೃತಿ' ಕಲಾ ಪ್ರದರ್ಶನ: ಮುಖ್ಯ ಅತಿಥಿ: ಎಚ್.ಎನ್. ಸುರೇಶ್, ಗೌರವ ಅತಿಥಿ: ಗೋಮತಿ ಗೌಡ, ಆಯೋಜನೆ: ಸ್ಟಾಸ್ಟಿಕ್ಸ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಗಾಂಧಿ ಗ್ರಾಮ ಪುರಸ್ಕಾರ ಮತ್ತು ಮಹಾತ್ಮ ಗಾಂಧಿ ನರೇಗಾ ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಡಾ. ಸಿ.ಎನ್.ಅಶ್ವತ್ಥ ನಾರಾಯಣ, ಆಯೋಜನೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11



ಎಚ್.ಎನ್. ನಾಗಮೋಹನದಾಸ್

'ಅಮೃತಮತಿ' ಚಿತ್ರಯಾತ್ರೆ: ಚಲನಚಿತ್ರ ವಿಶೇಷ ಪ್ರದರ್ಶನ, ಚಿತ್ರಯಾತ್ರೆಗೆ ಚಾಲನೆ: ನ್ಯಾ.ಎಚ್. ಎನ್. ನಾಗಮೋಹನದಾಸ್, ಆಯೋಜನೆ: ಅಮೃತಮತಿ ಚಿತ್ರತಂಡ, ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೊ, ಕನಿಂಗ್‌ಹ್ಯಾಮ್ ರಸ್ತೆ, ಸಂಜೆ 5

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶ ಉದ್ಘಾಟನೆ: ಅಮಿತ್ ಶಾ, ಬಸವರಾಜ ಬೊಮ್ಮಾಯಿ, ಸ್ವಸಹಾಯ ಗುಂಪುಗಳಿಗೆ ಚೆಕ್ ವಿತರಣೆ: ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಪೊಲೀಸ್ ಠಾಣೆ ಉದ್ಘಾಟನೆ: ಆರಗ ಜ್ಞಾನೇಂದ್ರ, ಆಯೋಜನೆ: ಸಹಕಾರ ಇಲಾಖೆ, ಸ್ಥಳ : ಕೊಮ್ಮಘಟ್ಟ ಮೈದಾನ, ಕೆಂಗೇರಿ ಉಪನಗರ, ಮಧ್ಯಾಹ್ನ 12

ವಿದ್ಯುತ್ ಮಗ್ಗ ಸೇವಾ ಕೇಂದ್ರ ಕಚೇರಿ ಸಂಕೀರ್ಣ ಕಟ್ಟಡದ ಅಡಿಗಲ್ಲು ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಶಂಕರ ಪಾಟೀಲ್ ಮುನೇನಕೊಪ್ಪ, ಅಧ್ಯಕ್ಷತೆ: ವಿ. ಸೋಮಣ್ಣ, ಆಯೋಜನೆ: ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ, ಸ್ಥಳ: ರಾಜಾಜಿನಗರ ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಧ್ಯಾಹ್ನ 12.30

ರಾಜ್ಯ ಮಟ್ಟದ ವಿಶ್ವಕರ್ಮ ಸಮಾಜದ ಬೃಹತ್ ಜನಜಾಗೃತಿ ಸಮಾವೇಶ: ಸಾನ್ನಿಧ್ಯ: ಶಿವಸುಜ್ಞಾನತೀರ್ಥ ಸ್ವಾಮೀಜಿ, ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಧರ್ಮ ಜಾಗೃತಿ ಗ್ರಂಥ ಬಿಡುಗಡೆ: ಎಚ್.ಡಿ. ರೇವಣ್ಣ, ಜನತಾ ಸೇವಕ ಪುಸ್ತಕ ಬಿಡುಗಡೆ: ಸಿ.ಎಂ. ಇಬ್ರಾಹಿಂ, ವಿರಾಟ್ ವಿಶ್ವಕರ್ಮ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ: ಟಿ.ಎ. ಶರವಣ, ವಿರಾಟ್ ವಿಶ್ವಕರ್ಮ ಮಹೋತ್ಸವ ಸಂಚಿಕೆ ಬಿಡುಗಡೆ: ಕೆ.ವಿ. ಶಂಕರ್, ಆಯೋಜನೆ: ವಿಶ್ವಕರ್ಮ ಸೇವಾ ಪ್ರತಿಷ್ಠಾನ, ಸ್ಥಳ: ನಂದಿ ಲಿಂಕ್ ಗ್ರೌಂಡ್ಸ್, ನಾಯಂಡಹಳ್ಳಿ, ಮಧ್ಯಾಹ್ನ 12.30

ರಾಮಾಯಣ ಸಪ್ತಾಹ: ಪ್ರವಚನ: ಜಿ.ಎಸ್. ಶ್ರೀರಂಗರಾಜನ್, ಆಯೋಜನೆ: ಶ್ರೀ ಸತ್ಯ ಸಾಯಿ ಆರ್ಗನೈಸೇಶನ್ ಕರ್ನಾಟಕ ಸೌತ್, ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಸಂಜೆ 5

ಶರಣ ದಾಸಿಮಯ್ಯ ಜಯಂತಿ: ಅಧ್ಯಕ್ಷತೆ: ದಿಬ್ಬೂರು ಗಿರೀಶ್, ಉಪನ್ಯಾಸ: ರೇಣುಕಾ ಶಂಕರ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಮಂಜುಳಾ ಶಿವಾನಂದ್, ವೀರಮ್ಮ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜ್ ಸಭಾಂಗಣ, ಜಯನಗರ, ಸಂಜೆ 5.30



ಸಾಲುಮರದ ತಿಮ್ಮಕ್ಕ

ಮಹಿಳಾ ದಿನಾಚರಣೆ: ಉದ್ಘಾಟನೆ: ಸಾಲುಮರದ ತಿಮ್ಮಕ್ಕ, ವಿಶೇಷ ಅತಿಥಿ: ಜಾವೇದ್ ಅಖ್ತರ್, ಮುಖ್ಯ ಅತಿಥಿಗಳು: ರಾಜ್ ಕಿಶೋರ್ ಸಿಂಗ್, ಸುದರ್ಶನ್ ಜಿ.ಎ., ಮೀನಾಕ್ಷಿ ನೇಗಿ, ಕುಮಾರ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ವನವಿಕಾಸ ಕಟ್ಟಡ ಸಂಕೀರ್ಣ, ಮಲ್ಲೇಶ್ವರ, ಬೆಳಿಗ್ಗೆ 10.30

'ಚೆಲ್ಲಿದರೂ ಮಲ್ಲಿಗೆಯಾ' 500 ಗಾಯಕರಿಂದ ಸಮೂಹ ಗಾಯನ ಹಾಗೂ ಪುಸ್ತಕ ಬಿಡುಗಡೆ: ಉದ್ಘಾಟನೆ: ಜಯರಾಮ ರಾಯ್‌ಪುರ, 'ಜನಪದ ಗೀತೆಗಳ ಚಲನಶೀಲತೆ' ಪುಸ್ತಕ ಬಿಡುಗಡೆ: ಟಿ. ತಿಮ್ಮೇಗೌಡ, ಅರ್ಹತಾ ಪತ್ರಗಳ ವಿತರಣೆ: ರೇವಣ್ಣ ಕಲ್ಕೆರೆ, ಮುಖ್ಯ ಅತಿಥಿ: ಎಂ.ಎಸ್. ದುರ್ಗಾಪ್ರವೀಣ್, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.45

'ಶ್ರೀರಾಮೋತ್ಸವ' ಸಂಗೀತ ಕಾರ್ಯಕ್ರಮ: ದೇವರನಾಮ: ಭೂಮಿಕಾ ಎಸ್., ದೀಪಿಕಾ ಎಸ್., ಅನ್ವಿತಾ ಸಾವಿತ್ರಿ, ಅನುಷಾ ಸಾವಿತ್ರಿ, ಭರತನಾಟ್ಯ: ವಿದ್ಯಾ, ನಂದನಾ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 6.15

ಪ್ರವಚನ ವಾಹಿನಿ: 'ಚಿರಂಜೀವಿ ಚಿಂತನೆ' ಕುರಿತು ಪ್ರವಚನ: ಎಚ್. ಸತ್ಯನಾರಾಯಣಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಶ್ರೀರಾಮ ನವಮಿ ಉತ್ಸವ: ಗಾಯನ: ಆರ್.ಸಿಂಧು, ಪಿಟೀಲು: ಹರ್ಷಿತಾ ಕೇದಗೆ, ಮೃದಂಗ: ಅದಮ್ಯ ರಮಾನಂದ, ಘಟ: ಉತ್ತಮ್ ಎಸ್., ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ರಾಮನವಮಿ ಕಾರ್ಯಕ್ರಮ: ವೀಣಾ ವಾದನ: ಮೈಸೂರು ರಾಜೇಶ್, ಮೃದಂಗ, ಎಸ್. ಅನಂತಪದ್ಮನಾಭ, ಖಂಜಿರ ಎಂ.ಶಿವಶಂಕರ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ನೃತ್ಯ ಪ್ರದರ್ಶನ: ದಿ ನಾಟ್ಯ ಸ್ಟೆಮ್ ಡ್ಯಾನ್ಸ್ ಕಂಪನಿ, ಸ್ಥಳ: ಬಿಐಸಿ, ದೊಮ್ಮಲೂರು, ಸಂಜೆ 7

25ರಂದು ಚಾಲನೆ, 26ರಿಂದ ವಾಣಿಜ್ಯ ಕಾರ್ಯಾಚರಣೆ • ಜೂನ್‌ನಲ್ಲಿ ಬೈಯಪ್ಪನಹಳ್ಳಿ ಸಂಪರ್ಕ

ಮೆಟ್ರೊಗೆ ಹಸಿರು ನಿಶಾನೆ: ತಗ್ಗೀತೆ ವೈಟ್‌ಫೀಲ್ಡ್ ದಟ್ಟಣೆ?

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬಹುನಿರೀಕ್ಷಿತ ವೈಟ್‌ಫೀಲ್ಡ್ ಮಾರ್ಗದಲ್ಲಿ ಮೆಟ್ರೊ ರೈಲುಗಳ ಕಾರ್ಯಾಚರಣೆಗೆ ಕಾಲ ಕೂಡಿಬಂದಿದೆ. ಮಾರ್ಚ್ 25ರಂದು ಪ್ರಧಾನಿಯಿಂದ ಚಾಲನೆ ದೊರಕಲಿದ್ದು, 26ರಿಂದ ವಾಣಿಜ್ಯ ಕಾರ್ಯಾಚರಣೆ ಆರಂಭವಾಗಲಿದೆ. ರಕ್ಕಸ ರೂಪದಲ್ಲಿ ಕಾಡುತ್ತಿರುವ ವಾಹನ ದಟ್ಟಣೆ ಸಮಸ್ಯೆಯನ್ನು ಸೀಳಲು ಮೆಟ್ರೊ ರೈಲುಗಳು ಸಜ್ಜಾಗಿವೆ.

ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದ ಕಂಪನಿಗಳು ಬೆಳೆದಂತೆ ಬೆಂಗಳೂರಿನ ಹೊರ ವಲಯ, ಅದರಲ್ಲೂ ಮಹಾದೇವಪುರ, ವೈಟ್‌ಫೀಲ್ಡ್ ಸುತ್ತಮುತ್ತಲ ಪ್ರದೇಶ ಅಂಕೆಗೆ ಸಿಗದೆ ಬೆಳೆಯುತ್ತಿದೆ. ಆದರೆ, ಅಲ್ಲಿನ ಮೂಲಸೌಕರ್ಯ ಮಾತ್ರ ಇದ್ದಂತೆಯೇ ಇದೆ. ಈ ಅಸಮತೋಲನದಿಂದಾಗಿ ಈ ಪ್ರದೇಶದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಐ.ಟಿ ಕಂಪನಿಗಳ ಉದ್ಯೋಗಿಗಳ ಜತೆಗೆ ಸ್ಥಳೀಯರೂ ದಟ್ಟಣೆಯಲ್ಲಿ ಸಿಲುಕಿ ನಲುಗುತ್ತಿದ್ದಾರೆ.

ಈ ಸಮಸ್ಯೆಗೆ ಪರಿಹಾರವಾಗಿ ಮೆಟ್ರೊ ರೈಲು ಯೋಜನೆಯನ್ನು ವೈಟ್‌ಫೀಲ್ಡ್ ತನಕ ವಿಸ್ತರಣೆ ಮಾಡಲು ಸರ್ಕಾರ ಮುಂದಾಯಿತು. ಸಮಗ್ರ ಯೋಜನಾ ವರದಿಯನ್ನು 2011ರಲ್ಲಿ ಸಿದ್ಧಪಡಿಸಿತು. ಯೋಜನೆಗೆ ಅನುಮೋದನೆ ದೊರೆತು, ಕಾಮಗಾರಿ ಆರಂಭವಾಗಿ ಪೂರ್ಣಗೊಳ್ಳಲು 12 ವರ್ಷ ಬೇಕಾಯಿತು.

ಎಲ್ಲವೂ ಅಂದುಕೊಂಡಂತೆಯೇ ಆಗಿದ್ದರೆ 2020ರಲ್ಲೇ ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಪರ್ಕ ದೊರಕಬೇಕಿತ್ತು. ಕೋವಿಡ್ ಕಾರಣದಿಂದ ವಿಳಂಬವಾಗಿದ್ದರಿಂದ ಕಾಮಗಾರಿ ಪೂರ್ಣಗೊಳಿಸುವ ದಿನಾಂಕವನ್ನು 2021ರ ಆಗಸ್ಟ್‌ಗೆ ವಿಸ್ತರಿಸಲಾಗಿತ್ತು. ಬಳಿಕ 2022ರ ಜೂನ್‌ಗೆ ಮುಂದೂಡಲಾಯಿತು. ಅದು ಕೂಡ ಸಾಧ್ಯವಾಗದೆ, 2022ರ ಡಿಸೆಂಬರ್‌ಗೆ ಗಡುವು ನೀಡಲಾಗಿತ್ತು. ಈ ಗಡುವುಗಳೆಲ್ಲವನ್ನೂ ಮೀರಿ ಈಗ 2023ರ ಮಾರ್ಚ್ 25ರಂದು ಚಾಲನೆ ದೊರಕುತ್ತಿದೆ.

ನೇರಳೆ ಮಾರ್ಗದ ವಿಸ್ತರಿತ ಮಾರ್ಗ ಇದಾಗಿದ್ದು, ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ 15 ಕಿಲೋ ಮೀಟರ್ ಮೆಟ್ರೊ ಮಾರ್ಗ ನಿರ್ಮಾಣವಾಗಿದೆ. ಕೆ.ಆರ್.ಪುರ, ಮಹದೇವಪುರ, ಕುಂದಲಹಳ್ಳಿ, ಐಟಿಪಿಎಲ್ ಮೂಲಕ ವೈಟ್‌ಫೀಲ್ಡ್‌ಗೆ ಸಂಪರ್ಕ ಕಲ್ಪಿಸಲಿದೆ. ಈ ಮಾರ್ಗ ಪರಿಪೂರ್ಣವಾಗಿ ಕಾರ್ಯಾಚರಣೆಗೊಂಡರೆ ಪ್ರತಿನಿತ್ಯ 2.50 ಲಕ್ಷದಿಂದ 3 ಲಕ್ಷ ಮಂದಿ ಪ್ರಯಾಣ ಮಾಡಬಹುದು ಎಂದು ಬಿಎಂಆರ್‌ಸಿಎಲ್ ಅಂದಾಜಿಸಿದೆ.

ಸದ್ಯ ಕೆ.ಆರ್.ಪುರದಿಂದ ವೈಟ್‌ಫೀಲ್ಡ್ ತನಕ 13 ಕಿಲೋ ಮೀಟರ್‌ನಲ್ಲಿ ರೈಲುಗಳು ಸಂಚರಿಸಲಿದ್ದು, ಬೈಯಪ್ಪಹಳ್ಳಿಯಿಂದ ಕೆ.ಆರ್.ಪುರ ನಡುವಿನ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಆದ್ದರಿಂದ ಪ್ರತಿನಿತ್ಯ 1.50 ಲಕ್ಷ ಜನ ಮೆಟ್ರೊ ರೈಲುಗಳನ್ನು ಬಳಕೆ ಮಾಡಿಕೊಳ್ಳುವ ಅಂದಾಜಿದೆ. ಜೂನ್ ಅಥವಾ ಜುಲೈ ವೇಳೆಗೆ ಬಾಕಿ ಕಾಮಗಾರಿಯೂ ಪೂರ್ಣಗೊಳ್ಳಲಿದ್ದು, ಪ್ರಯಾಣಿಕರ ಸಂಖ್ಯೆ ಹೆಚ್ಚಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಕೆ.ಆರ್.ಪುರದಿಂದ ವೈಟ್‌ಫೀಲ್ಡ್ ತನಕ ಬಸ್‌ನಲ್ಲಿ ಪ್ರಯಾಣ ಮಾಡಲು ಕನಿಷ್ಠ 40 ನಿಮಿಷ ಬೇಕಾಗುತ್ತದೆ. ವಾಹನ ದಟ್ಟಣೆ ಇದ್ದರೆ ಒಂದು ತಾಸನ್ನೂ ಮೀರಲಿದೆ. 'ಈ ನಿಲ್ದಾಣಗಳ ನಡುವೆ ಮೆಟ್ರೊ ರೈಲು ಪ್ರಯಾಣಕ್ಕೆ 23 ನಿಮಿಷ ಬೇಕಾಗಲಿದ್ದು, ಮೊದಲಿಗೆ ಪ್ರತಿ 10 ನಿಮಿಷಕ್ಕೊಂದು ರೈಲು ಸಂಚರಿಸಲಿವೆ' ಎಂದು ಅಧಿಕಾರಿಗಳು ವಿವರಿಸುತ್ತಾರೆ.

ಚಾಲನೆ ನೀಡುವ ಮೊದಲ ಪ್ರಧಾನಿ

ಮಾರ್ಚ್ 25ರಂದು ಪ್ರಧಾನಿ ನರೇಂದ್ರ ಮೋದಿ ಅವರು ರೈಲುಗಳ ಕಾರ್ಯಾಚರಣೆಗೆ ಚಾಲನೆ ನೀಡುವರು. ಮೆಟ್ರೊ ರೈಲು ಸಂಚಾರಕ್ಕೆ ಚಾಲನೆ ನೀಡುವ ಮೊದಲ ಪ್ರಧಾನಿ ಇವರು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಮನಮೋಹನ ಸಿಂಗ್ ಪ್ರಧಾನಿ ಆಗಿದ್ದಾಗ 2006ರಲ್ಲಿ ಮೊದಲ ಹಂತದ ಮೆಟ್ರೊ ರೈಲು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಮೊದಲ ಹಂತದ ಮೆಟ್ರೊ ಸುರಂಗ ಮಾರ್ಗವನ್ನು 2017ರಲ್ಲಿ ಅಂದಿನ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಉದ್ಘಾಟಿಸಿದ್ದರು.



ಕಾರ್ಪೊರೇಟ್ ಬಲ: ಹೆಚ್ಚಿದ ಮೆರುಗು

ವೈಟ್‌ಫೀಲ್ಡ್ ಮಾರ್ಗದ ವಿಶೇಷ ಎಂದರೆ ಮೆಟ್ರೊ ರೈಲು ಮಾರ್ಗದ ಕಂಬಗಳಿಗೂ ಬಣ್ಣ ಬಳಿಯಲಾಗುತ್ತಿದೆ. ಕಂಬಗಳು ಬಗೆ ಬಗೆಯ ಚಿತ್ತಾರಗಳಿಂದ ಮಿನುಗುತ್ತಿವೆ.

ಈ ಮಾರ್ಗದಲ್ಲಿ ಮೆಟ್ರೊ ರೈಲು ಕಾರ್ಯಾಚರಣೆ ಆರಂಭವಾಗುತ್ತಿರುವುದರಿಂದ ಐ.ಟಿ ಕಂಪನಿಗಳಿಗೆ ಹೊಸ ಉತ್ಸಾಹ ತಂದಿದೆ. ಇಲ್ಲಿರುವ ಐ.ಟಿ ಕಂಪನಿಗಳು ಸ್ವಯಂ ಪ್ರೇರಿತವಾಗಿ ಮುಂದೆ ಬಂದು ಮೆಟ್ರೊ ಮಾರ್ಗದ ಮೆರುಗು ಹೆಚ್ಚಿಸುವ ಕೆಲಸ ಮಾಡುತ್ತಿವೆ. ಸಾಮಾಜಿಕ ಹೊಣೆಗಾರಿಕೆ ನಿಧಿ(ಸಿಎಸ್‌ಆರ್) ಬಳಸಿ ಈ ಕಾರ್ಯವನ್ನು ಕಂಪನಿಗಳು ಮಾಡುತ್ತಿವೆ. ಈ ರೀತಿಯ ಕಾರ್ಯಕ್ಕೆ ಮುಂದೆ ಬರುವ ಕಂಪನಿಗಳಿಗೆ ಅನುಮತಿ ನೀಡಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.


ಕೆಲವು ಕಂಪನಿಗಳು ತಮ್ಮ ಕ್ಯಾಂಪಸ್‌ಗಳಿಗೆ ಪಾದಚಾರಿ ಮೇಲ್ಸೇತುವೆಗಳನ್ನು ನಿರ್ಮಿಸಿಕೊಳ್ಳುತ್ತಿವೆ. ಮೆಟ್ರೊ ಕಂಬಗಳ ನಡುವಿನ ರಸ್ತೆ ವಿಭಜಕಗಳ ಮೇಲೆ ಸಸಿ ನೆಡುವ ಜತೆಗೆ ನಿರ್ವಹಣೆ ಒಪ್ಪಂದವನ್ನು ಮಾಡಿಕೊಂಡಿವೆ.

'ಇನ್ಫೊಸಿಸ್ ಫೌಂಡೇಶನ್, ಬಯೋಕಾನ್ ಫೌಂಡೇಶನ್, ಇಂಟೆಲ್ ಟೆಕ್ನಾಲಜಿ, ಪ್ರೆಸ್ಟೀಜ್, ಬಾಗ್ಮನೆ, ಬಾಷ್, 'ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸೇರಿ ಹಲವು ಕಂಪನಿಗಳು ಮುಂದೆ ಬಂದಿವೆ' ಎಂದು ಅವರು ವಿವರಿಸುತ್ತಾರೆ.



12 ಮೆಟ್ರೊ ನಿಲ್ದಾಣ

- ಕೆ.ಆರ್.ಪುರ
- ಮಹದೇವಪುರ
- ಗರುಡಾಚಾರ್‌ಪಾಳ್ಯ
- ಹೂಡಿ ಜಂಕ್ಷನ್
- ಸೀತಾರಾಮಪಾಳ್ಯ
- ಕುಂದಲಹಳ್ಳಿ
- ನಲ್ಲೂರಹಳ್ಳಿ
- ಶ್ರೀಸತ್ಯಸಾಯಿ ಆಸ್ಪತ್ರೆ
- ಪಟ್ಟಂದೂರು ಅಗ್ರಹಾರ
- ಕಾಡುಗೋಡಿ
- ಚನ್ನಸಂದ್ರ
- ವೈಟ್‌ಫೀಲ್ಡ್



ವೈಟ್‌ಫೀಲ್ಡ್ ಮೆಟ್ರೊ ರೈಲು ನಿಲ್ದಾಣ

ಕಾಣೆಯಾಗಿದ್ದ ಪತ್ನಿ ಸಿಗುತ್ತಿದ್ದಂತೆ ಪತಿ ನಾಪತ್ತೆ

ಬೆಂಗಳೂರು: ಪತ್ನಿ ಕಾಣೆಯಾಗಿರುವ ಬಗ್ಗೆ ಕೋಣನಕುಂಟೆ ಠಾಣೆಗೆ ದೂರು ನೀಡಿದ್ದ ವ್ಯಕ್ತಿಯೊಬ್ಬರು, ಪತ್ನಿ ಸಿಗುತ್ತಿದ್ದಂತೆ ತಾವೇ ನಾಪತ್ತೆಯಾಗಿದ್ದಾರೆ. ಪತಿಯನ್ನು ಹುಡುಕಿಕೊಡುವಂತೆ ಪತ್ನಿ ಪ್ರತ್ಯೇಕ ದೂರು ದಾಖಲಿಸಿದ್ದು, ದಂಪತಿಯ ಈ ಪ್ರಕರಣ ಪೊಲೀಸರನ್ನು ಹೈರಾಣು ಮಾಡಿದೆ.

'ಠಾಣೆ ವ್ಯಾಪ್ತಿಯಲ್ಲಿ ಇಬ್ಬರು ಮಕ್ಕಳ ಜೊತೆ ದಂಪತಿ ವಾಸವಿದ್ದರು. ಪತ್ನಿ ಮೊಬೈಲ್‌ನಲ್ಲಿ ಹೆಚ್ಚು ಮಾತನಾಡುತ್ತಿದ್ದರು. ಅದನ್ನು ಪ್ರಶ್ನಿಸಿದ್ದ ಪತಿ, ಬುದ್ಧಿವಾದ ಹೇಳಿದ್ದರು. ಕೋಪಗೊಂಡಿದ್ದ ಪತ್ನಿ, 'ನನ್ನನ್ನು ಹುಡುಕಬೇಡಿ' ಎಂಬ ಸಂದೇಶ ಕಳುಹಿಸಿ ಮನೆ ಬಿಟ್ಟು ಹೋಗಿದ್ದರು. ಗಾಬರಿಗೊಂಡಿದ್ದ ಪತಿ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ತನಿಖೆ ಕೈಗೊಂಡಾಗ ಶಿರಸಿಯಲ್ಲಿ ಪತ್ನಿ ಪತ್ತೆಯಾಗಿದ್ದರು. ಅವರನ್ನು ಠಾಣೆಗೆ ಕರೆತರಲಾಗಿತ್ತು. ಈ ಬಗ್ಗೆ ಮಾಹಿತಿ ನೀಡಲು ಯತ್ನಿಸಿದಾಗ ಪತಿಯೇ ನಾಪತ್ತೆಯಾಗಿದ್ದಾರೆ. ಇದೀಗ, ಪತ್ನಿಯಿಂದ ದೂರು ಪಡೆದು ಪತಿಯನ್ನು ಹುಡುಕುತ್ತಿದ್ದೇವೆ' ಎಂದು ತಿಳಿಸಿದರು.

ಹುಲಿ ಚರ್ಮ ಮಾರಾಟ ಪ್ರಕರಣ: ಮಾರತ್ತಹಳ್ಳಿ ಪಿಎಸ್‌ಐ – ಕಾನ್‌ಸ್ಟೆಬಲ್‌ಗಳ ಪತ್ತೆಗೆ ತನಿಖೆ

₹40 ಲಕ್ಷಕ್ಕೆ ಬೇಡಿಕೆ: ಹೆಡ್ ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲಿ ಚರ್ಮ ಹಾಗೂ ಉಗುರು ಮಾರಾಟ ಪ್ರಕರಣದಲ್ಲಿ ಜೈಲಿಗೆ ಕಳುಹಿಸುವುದಾಗಿ ಬೆದರಿಸಿ ₹ 40 ಲಕ್ಷಕ್ಕೆ ಬೇಡಿಕೆ ಇರಿಸಿದ್ದ ಆರೋಪದಡಿ ಹೆಡ್ ಕಾನ್‌ಸ್ಟೆಬಲ್ ಸೇರಿದಂತೆ ಮೂವರನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಾರತ್ತಹಳ್ಳಿ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಹರೀಶ್, ಸ್ಥಳೀಯ ನಿವಾಸಿ ಶಬ್ಬೀರ್ (32) ಮತ್ತು ಜಾಕೀರ್ (30) ಬಂಧಿತರು. ಪ್ರಕರಣದ ಪ್ರಮುಖ ಆರೋಪಿಗಳಾದ ಪಿಎಸ್‌ಐ ರಂಗೇಶ್, ಕಾನ್‌ಸ್ಟೆಬಲ್‌ಗಳಾದ ಮಹದೇವಸ್ವಾಮಿ, ಮಹೇಶ್ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ತನಿಖೆ ಮುಂದುವರಿಸಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬಾಗಲೂರು ಠಾಣೆ ವ್ಯಾಪ್ತಿಯ ನಿವಾಸಿ ರಾಮಾಂಜನಿ ಅವರನ್ನು ಅಕ್ರಮವಾಗಿ ಎಳೆದೊಯ್ದಿದ್ದ ಪಿಎಸ್‌ಐ ರಂಗೇಶ್ ಹಾಗೂ ಇತರರು, ಸುಳ್ಳು ಪ್ರಕರಣ ದಾಖಲಿಸುವುದಾಗಿ ಬೆದರಿಸಿದ್ದರು. ಪ್ರಕರಣ ದಾಖಲಿಸದಿರಲು ₹ 40 ಲಕ್ಷ ಕೇಳಿದ್ದರು. ಈ ಸಂಬಂಧ ರಾಮಾಂಜನಿ ತಂದೆ ಶಿವರಾಮಯ್ಯ ದೂರು ನೀಡಿದ್ದರು' ಎಂದು ತಿಳಿಸಿದರು.

ಹುಲಿ ಚರ್ಮ, ಉಗುರು ಮಾರಾಟ ನೆಪ: 'ಪೊಲೀಸ್ ಮಾಹಿತಿದಾರರೆಂದು ಹೇಳಿಕೊಳ್ಳುತ್ತಿದ್ದ ಆರೋಪಿ ಶಬ್ಬೀರ್ ಹಾಗೂ ಜಾಕೀರ್, ಪಿಎಸ್‌ಐ ರಂಗೇಶ್‌ಗೆ ಕರೆ ಮಾಡಿದ್ದರು. 'ರಾಮಾಂಜನಿ ಹಾಗೂ ಸಿದ್ದಮಲ್ಲಪ್ಪ ಎಂಬುವರು ಹುಲಿ ಚರ್ಮ, ಉಗುರು ಮಾರುತ್ತಿದ್ದಾರೆ' ಎಂದು ಹೇಳಿದ್ದರು. ಅದನ್ನು ನಂಬಿದ್ದ ಪಿಎಸ್‌ಐ, ಸಿಬ್ಬಂದಿ ಜೊತೆಗೆ ಸ್ಥಳಕ್ಕೆ ಹೋಗಿದ್ದರು. ರಾಮಾಂಜನಿ ಅವರನ್ನು ಬ್ಯಾಗ್ ಸಮೇತ ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಬ್ಯಾಗ್‌ನಲ್ಲಿ ಚರ್ಮ ಹಾಗೂ ಉಗುರು ಇತ್ತು. ಅವುಗಳನ್ನು ಪರಿಶೀಲಿಸಿದಾಗ, ನಕಲಿ ಎಂಬುದು ಗೊತ್ತಾಗಿತ್ತು. ಪ್ರಕರಣ ದಾಖಲಿಸಲು ಸಾಧ್ಯವಿಲ್ಲವೆಂಬುದು ತಿಳಿಯುತ್ತಿದ್ದಂತೆ ಪಿಎಸ್‌ಐ, ವರಸೆ ಬದಲಿಸಿದ್ದ. ನಕಲಿ ಚರ್ಮ ಹಾಗೂ ಉಗುರುಗಳನ್ನು ಅಸಲಿ ಎಂಬುದಾಗಿ ಬಿಂಬಿಸಿ ಪ್ರಕರಣ ದಾಖಲಿಸುವುದಾಗಿ ಹಣ ಪಡೆಯಲು ಸಂಚು ರೂಪಿಸಿದ್ದ' ಎಂದು ತಿಳಿಸಿದರು.

'ರಾಮಾಂಜನಿ ಅವರ ಹಣೆಗೆ ಪಿಸ್ತೂಲ್ ಹಿಡಿದಿದ್ದ ಪಿಎಸ್‌ಐ, 'ವನ್ಯಜೀವಿಗಳನ್ನು ಸಾಯಿಸಿ ಚರ್ಮ–ಉಗುರು ಮಾರುತ್ತಿದ್ದೀಯಾ. ₹ 40 ಲಕ್ಷ ನೀಡದಿದ್ದರೆ, ನಿನ್ನನ್ನು ಜೀವನ ಪರ್ಯಂತ ಜೈಲಿನಲ್ಲಿರುವಂತೆ ಮಾಡುತ್ತೇನೆ' ಎಂದು ಬೆದರಿಸಿದ್ದ. ರಾಮಾಂಜನಿ ತಂದೆ ಶಿವರಾಮಯ್ಯಗೆ ಕರೆ ಮಾಡಿದ್ದ ಪಿಎಸ್‌ಐ, 'ನಿಮ್ಮ ಮಗ ನನ್ನ ಬಳಿ ಇದ್ದಾನೆ. ₹ 40 ಲಕ್ಷ ನೀಡಿದರೆ ಬಿಟ್ಟು ಕಳುಹಿಸುತ್ತೇನೆ' ಎಂದಿದ್ದ. ಗಾಬರಿಗೊಂಡಿದ್ದ ತಂದೆ, ಮಗನನ್ನು ಯಾರೂ ಅಪಹರಣ ಮಾಡಿದ್ದಾರೆಂದು ಬಾಗಲೂರು ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ತನಿಖೆ ಕೈಗೊಂಡಾಗ ಮಾರತ್ತಹಳ್ಳಿ ಠಾಣೆ ಪಿಎಸ್‌ಐ ಹಾಗೂ ಸಿಬ್ಬಂದಿ, ರಾಮಾಂಜನಿ ಅವರನ್ನು ಅಪಹರಿಸಿ ಅಕ್ರಮ ಬಂಧನದಲ್ಲಿಟ್ಟಿದ್ದು ಗೊತ್ತಾಗಿತ್ತು. ಅಷ್ಟರಲ್ಲೇ, ಪಿಎಸ್‌ಐ ರಂಗೇಶ್ ಹಾಗೂ ಕಾನ್‌ಸ್ಟೆಬಲ್‌ಗಳು ಪರಾರಿಯಾಗಿದ್ದಾರೆ. ಹೆಡ್ ಕಾನ್‌ಸ್ಟೆಬಲ್ ಮಾತ್ರ ಸಿಕ್ಕಿಬಿದ್ದರು' ಎಂದು ತಿಳಿಸಿದರು.

ನಕಲಿ ಬಗ್ಗೆ ಲಭ್ಯವಾಗದ ಮಾಹಿತಿ: 'ಕಟ್ಟಡ ನಿರ್ಮಾಣ ಮೇಸ್ತ್ರಿ ಆಗಿರುವ ಸಿದ್ದಮಲ್ಲಪ್ಪ ಬಳಿ ನಕಲಿ ಚರ್ಮ ಹಾಗೂ ಉಗುರುಗಳಿದ್ದವು. ಅವುಗಳನ್ನು ಸಿನಿಮಾದವರು ಬಳಸಬಹುದೆಂದು ತಿಳಿದಿದ್ದ ಸಿದ್ದಮಲ್ಲಪ್ಪ, ಮಾರಾಟ ಮಾಡಲು ಮುಂದಾಗಿದ್ದರು. ಗ್ರಾಹಕರನ್ನು ಹುಡುಕಿಕೊಡುವಂತೆ ಶಬ್ಬೀರ್‌ಗೆ ತಿಳಿಸಿದ್ದರು. ಆದರೆ, ಆತ ಪೊಲೀಸರಿಗೆ ಮಾಹಿತಿ ನೀಡಿದ್ದ' ಎಂದು ಅಧಿಕಾರಿ ವಿವರಿಸಿದರು. 'ತಂದೆ ಹೇಳಿದರೆಂಬ ಕಾರಣಕ್ಕೆ ರಾಮಾಂಜನಿ, ಸಿದ್ದಮಲ್ಲಪ್ಪ ಜೊತೆಗೆ ಹೊರಟಿದ್ದ. ಬ್ಯಾಗ್‌ನಲ್ಲಿ ಏನಿದೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ಸಿದ್ದಮಲ್ಲಪ್ಪ ವಿಚಾರಣೆ ಮುಂದುವರಿದಿದೆ. ನಕಲಿ ಚರ್ಮ ಹಾಗೂ ಉಗುರು ಎಲ್ಲಿಂದ ತಂದಿದ್ದರೆಂಬ ಮಾಹಿತಿ ಸದ್ಯಕ್ಕೆ ಲಭ್ಯವಾಗಿಲ್ಲ' ಎಂದರು.

'ತನಿಖೆ ವರದಿ ಆಧರಿಸಿ ವಜಾ'

ಪಿಎಸ್‌ಐ ರಂಗೇಶ್, ಹೆಡ್ ಕಾನ್‌ಸ್ಟೆಬಲ್ ಹರೀಶ್, ಕಾನ್‌ಸ್ಟೆಬಲ್‌ಗಳಾದ ಮಹದೇವಸ್ವಾಮಿ, ಮಹೇಶ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಕಮಿಷನರ್ ಪ್ರತಾಪ್ ರೆಡ್ಡಿ ಆದೇಶ ಹೊರಡಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಪ್ರತಾಪ್ ರೆಡ್ಡಿ, 'ಪಿಎಸ್‌ಐ–ಸಿಬ್ಬಂದಿ ವಿರುದ್ಧದ ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ವೈಟ್‌ಫೀಲ್ಡ್ ಹಾಗೂ ಈಶಾನ್ಯ ವಿಭಾಗದ ಡಿಸಿಪಿಗಳಿಗೆ ಸೂಚಿಸಲಾಗಿದೆ. ಇಲಾಖೆ ವಿಚಾರಣೆಯೂ ಆರಂಭವಾಗಿದೆ. ಆರೋಪ ಸಾಬೀತಾದರೆ, ನಾಲ್ವರನ್ನೂ ವಜಾ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಅವ್ಯವಹಾರದಲ್ಲಿ ತೊಡಗಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದು ಎಚ್ಚರಿಸಿದರು.

ಅಪರಾಧ ಸುದ್ದಿ

'ಚೇತನ್ ಬಂಧನ: ಪ್ರಜಾಪ್ರಭುತ್ವದ ಕಗ್ಗೊಲೆ'

ಬೆಂಗಳೂರು: 'ನಟ ಚೇತನ್ ಕುಮಾರ್ ಅವರನ್ನು ಬಂಧಿಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ' ಎಂದು ಜಾಗೃತ ನಾಗರಿಕರು ಕರ್ನಾಟಕ ಹೇಳಿದೆ.

ಚೇತನ್ ಅವರ ಬಂಧನ ವಿರೋಧಿಸಿ, ಕೆ. ಮರುಳಸಿದ್ದಪ್ಪ, ಎಸ್.ಜಿ. ಸಿದ್ಧರಾಮಯ್ಯ, ಜಿ.ರಾಮಕೃಷ್ಣ, ವಿಜಯಾ, ರಾಜೇಂದ್ರ ಚೆನ್ನಿ, ಬಂಜಗೆರೆ ಜಯಪ್ರಕಾಶ್, ಡಾ. ವಸುಂಧರಾ ಭೂಪತಿ, ವಿಮಲಾ.ಕೆ.ಎಸ್., ಬಿ.ಶ್ರೀಪಾದ ಭಟ್, ರುದ್ರಪ್ಪ ಹನಗವಾಡಿ, ಶಶಿಧರ್ ಜೆ.ಸಿ., ಮೀನಾಕ್ಷಿ ಬಾಳಿ, ನಿರಂಜನಾರಾಧ್ಯ, ಟಿ.ಸುರೇಂದ್ರ ರಾವ್, ವಿಶುಕುಮಾರ್ ಎನ್.ಆರ್., ಬಿ.ಎನ್. ಯೋಗಾನಂದ ಹಾಗೂ ವಾಸುದೇವ ಉಚ್ಚಿಲ ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ದೇಶವೊಂದು ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಸರ್ವಾಧಿಕಾರಕ್ಕೆ ಹೊರಳುತ್ತಿರುವುದರ ಉದಾಹರಣೆ ಕರ್ನಾಟಕದಲ್ಲಿ ಪ್ರತಿನಿತ್ಯ ಕಾಣಸಿಗುತ್ತಿದೆ. ಇಲ್ಲಸಲ್ಲದ ಕಾಲ್ಪನಿಕ ಸಂಗತಿಗಳನ್ನು ಹುಟ್ಟುಹಾಕಿ, ಸಮುದಾಯಗಳ ಮಧ್ಯದಲ್ಲಿನ ಸಾಮರಸ್ಯವನ್ನು ಹಾಳುಗೆಡಹಲಾಗುತ್ತಿದೆ. ಉರಿಗೌಡ, ನಂಜೇಗೌಡ ಪ್ರಹಸನ ಎಬ್ಬಿಸಿ, ಒಂದು ಸಮುದಾಯದ ಜನರನ್ನು ಕೊಲೆಗಡುಕರೆಂದು ಬಿಂಬಿಸಲಾಯಿತು. ಇಂತಹ ನಡಾವಳಿಗೆ ಸಹಜವಾಗಿಯೇ ಇದಕ್ಕೆ ಪ್ರತಿರೋಧ ಬರುತ್ತದೆ. ಪ್ರತಿರೋಧ ಸಂವಿಧಾನದತ್ತ ಹಕ್ಕು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ ನಡೆಸುವುದು ಎಂದರೆ ಸಂವಿಧಾನದ ಮೇಲೆ ದಾಳಿ ನಡೆಸುವುದೆಂದೇ ಅರ್ಥ' ಎಂದು ಹೇಳಿದ್ದಾರೆ.

'ಸಾರ್ವಜನಿಕ ವೇದಿಕೆಗಳಲ್ಲಿ ಜನಪ್ರತಿನಿಧಿಗಳು ಎನಿಸಿಕೊಂಡ ಈಶ್ವರಪ್ಪ, ಬಸನಗೌಡ ಪಾಟೀಲ್ ಯತ್ನಾಳ್, ಡಾ.ಸಿ.ಎನ್. ಅಶ್ವತ್ಥನಾರಾಯಣ ಮೊದಲಾದವರು ದ್ವೇಷ ಭಾಷಣಗಳನ್ನು ಮಾಡಿದ್ದಾರೆ. ಅವರ ವಿರುದ್ಧ ಎಫ್.ಐ.ಆರ್ ದಾಖಲಿಸದ ಬಿಜೆಪಿ ಸರ್ಕಾರ, ಚೇತನ್ ಟ್ವೀಟ್ ಅನ್ನು ನೆಪಮಾಡಿಕೊಂಡು ಬಂಧನಕ್ಕೆ ಒಳಪಡಿಸಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಚುನಾವಣೆಯ ಹೊಸ್ತಿಲಲ್ಲಿ ಬೇರೆ ಬೇರೆ ಹೆಸರಿನಲ್ಲಿ ದೂರು ದಾಖಲಿಸುವುದು, ಕಿರುಕುಳ ನೀಡುವುದು ಹಾಗೂ ಭಯ ಹುಟ್ಟಿಸುವ ವರ್ತನೆಗಳನ್ನು ನಿಲ್ಲಿಸಬೇಕು. ಹಿಂದುತ್ವ ಎನ್ನುವ ಅಧಿಕೃತ ಧರ್ಮವೇ ಇಲ್ಲದಿರುವಾಗ, ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡುವ ಎಂಬ ಕಾನೂನನ್ನು ಸರ್ಕಾರ ಹೇಗೆ ಬಳಸಲು ಸಾಧ್ಯ? ನ್ಯಾಯಾಲಯ ಈ ಅಂಶವನ್ನು ಪರಿಶೀಲಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಣ ಸಾಗಿಸುತ್ತಿದ್ದ ವಾಹನಕ್ಕೆ ಕಾರು ಗುದ್ದಿಸಿ ₹ 97.59 ಲಕ್ಷ ದರೋಡೆ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯಲ್ಲಿ ಹಣ ಸಾಗಿಸುತ್ತಿದ್ದ ವಾಹನಕ್ಕೆ ಕಾರು ಗುದ್ದಿಸಿ ಅಪಘಾತದ ನಾಟಕವಾಡಿ ₹ 97.59 ಲಕ್ಷ ದರೋಡೆ ಮಾಡಿದ್ದ ಎಂಟು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಎಸ್. ಮೊಹಮ್ಮದ್ ಜಮಾಲ್ (39), ಕೊಡಗಿನ ಪಿ.ಐ. ಮೊಹಮ್ಮದ್ ಶಫಿ (32), ಕೇರಳದ ಸುಜೀಸ್ (43), ವಿ.ಪಿ. ಅತುಲ್ (29), ಕೆ.ಪಿ. ಜಮೀರ್ (36), ಎಂ. ಶಮೀಲ್ (25), ಕೆ.ವಿ. ಶಿಜಿಲ್ (30) ಹಾಗೂ ವಿ.ಕೆ. ಶರತ್ (26) ಬಂಧಿತರು.

'ಫೆ. 27ರಂದು ನಡೆದಿದ್ದ ದರೋಡೆ ಸಂಬಂಧ ಸಿಎಂಎಸ್ ಇನ್ಫೊ ಸಿಸ್ಟಮ್ ಕಂಪನಿ ವ್ಯವಸ್ಥಾಪಕ ಎಚ್.ಜಿ. ಶಾಂತ ಕುಮಾರ್ ದೂರು ನೀಡಿದ್ದರು. ಸದ್ಯ ಎಂಟು ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ ₹ 37 ಲಕ್ಷ ನಗದು, ದರೋಡೆ ಮಾಡಿದ್ದ ಹಣದಿಂದ ಖರೀದಿಸಿದ್ದ 45 ಗ್ರಾಂ ಚಿನ್ನಾಭರಣ ಹಾಗೂ ನಾಲ್ಕು ಕಾರು ಜಪ್ತಿ ಮಾಡಲಾಗಿದೆ. ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಮಹದೇವಪುರ ಪೊಲೀಸರು ಹೇಳಿದರು.

'ಆರ್‌ಸಿಎಂ ಘಟಕಗಳಿಂದ ಹಣ ಸಂಗ್ರಹಿಸಿ ಬ್ಯಾಂಕ್‌ಗೆ ಪಾವತಿಸುವ ಕೆಲಸವನ್ನು ಕಂಪನಿ ವಹಿಸಿಕೊಂಡಿತ್ತು. ಕಂಪನಿಯ ಐವರು ಸಿಬ್ಬಂದಿ ಫೆ. 27ರಂದು ಹಣ ಸಂಗ್ರಹಿಸಿಕೊಂಡು ವಾಹನದಲ್ಲಿ ಹೊರಟಿದ್ದಾಗ ದರೋಡೆ ನಡೆದಿತ್ತು' ಎಂದು ತಿಳಿಸಿದರು.

ವ್ಯವಸ್ಥಿತ ಸಂಚು: 'ಆರೋಪಿಗಳ ಪೈಕಿ ಒಬ್ಬಾತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆ ಜೊತೆ ಗುರುತಿಸಿಕೊಂಡಿದ್ದ. ಅಪರಾಧ ಪ್ರಕರಣವೊಂದರ ಆರೋಪಿಗೆ ತನ್ನ ಮನೆಯಲ್ಲಿ ಆಶ್ರಯ ನೀಡಿ ವಿಚಾರಣೆ ಎದುರಿಸಿದ್ದ. ಈತನೇ ತಂಡ ಕಟ್ಟಿಕೊಂಡು ದರೋಡೆ ಮಾಡಲು ವ್ಯವಸ್ಥಿತ ಸಂಚು ರೂಪಿಸಿದ್ದ. ಈತನ ಬಗ್ಗೆ ಮತ್ತಷ್ಟು ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಕಂಪನಿ ವಾಹನಕ್ಕೆ ಕಾರು ಗುದ್ದಿಸಿದ್ದ ಆರೋಪಿಗಳು, ಅಪಘಾತ ಮಾಡಿರುವುದಾಗಿ ಸಿಬ್ಬಂದಿ ಜೊತೆ ಜಗಳ ತೆಗೆದಿದ್ದರು' ಎಂದು ತಿಳಿಸಿವೆ.

ಆರ್‌ಬಿಐ ನಕಲಿ ದಾಖಲೆ: ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಹೂಡಿಕೆ ನೆಪದಲ್ಲಿ ಜನರನ್ನು ವಂಚಿಸುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್. ಪುರದ ಅಶೋಕಕುಮಾರ್ (42), ರಾಮನಗರ ಅವರಗೆರೆಯ ಎ.ಎನ್. ರಮೇಶ್‌ಕುಮಾರ್ (36), ಗಾಣಕಲ್ಲಿನ ಜಿ.ಸಿ. ಮಂಜುನಾಥ್ (34), ಮಂಚನದೊಡ್ಡಿಯ ಸಿದ್ದರಾಜು ನಾಯ್ಕ (23), ಗಂಗರಾಜು (32), ವಲಗೇರಹಳ್ಳಿಯ ಎನ್. ರಾಜ್‌ಕುಮಾರ್ (51), ಮೈಸೂರು ವಿಜಯನಗರದ ಕುಮರೇಶ್ (44) ಹಾಗೂ ಬಳ್ಳಾರಿ ಬಂಡೆ ಬಸಾಪುರದ ವಿ.ಸಿ. ಮೂರ್ತಿ ನಾಯ್ಕ (27) ಬಂಧಿತರು.

'ರಾಜರಾಜೇಶ್ವರಿನಗರದ ನಿವಾಸಿಯೊಬ್ಬರಿಂದ ₹ 40 ಲಕ್ಷ ಪಡೆದು ವಂಚಿಸಿದ್ದ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ₹ 11.50 ಲಕ್ಷ ನಗದು, ಆರ್‌ಬಿಐ ಬ್ಯಾಂಕ್ ಹೆಸರಿನ ದಾಖಲೆಗಳು ಹಾಗೂ ಕಾರು ಜಪ್ತಿ ಮಾಡಲಾಗಿದೆ. ₹ 16.35 ಲಕ್ಷ ಹಣವಿರುವ ಆರೋಪಿಗಳ ವಿವಿಧ ಬ್ಯಾಂಕ್ ಖಾತೆಗಳ ವ್ಯವಹಾರವನ್ನು ತಡೆಹಿಡಿಯಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಪ್ರಮುಖ ಆರೋಪಿಗಳಾದ ವೆಂಕಟೇಶ್ ಬಾಬು, ಶಂಕರ್ ನಾರಾಯಣ್ ಹಾಗೂ ವಿನೋದ್ ಕುಮಾರ್ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ' ಎಂದರು.

ಪರಮಾಣು ಶಕ್ತಿ ಕಂಪನಿ ಸೋಗು: 'ಆರ್‌ಬಿಐ ಲಾಂಛನವಿರುವ ನಕಲಿ ಲೆಟರ್ ಹೆಡ್ ಹಾಗೂ ನಕಲಿ ಹಣ ಮಂಜೂರಾತಿ ದಾಖಲೆಗಳನ್ನು ಆರೋಪಿಗಳು ಸೃಷ್ಟಿಸಿದ್ದರು. ಪರಮಾಣು ಶಕ್ತಿ ಕಂಪನಿ ನಡೆಸುತ್ತಿರುವುದಾಗಿ ಹೇಳುತ್ತಿದ್ದ ಆರೋಪಿಗಳು, ತಮ್ಮ ಯೋಜನೆ ಜಾರಿಗಾಗಿ ಆರ್‌ಬಿಐನಿಂದ ₹ 75,000 ಕೋಟಿ ಮಂಜೂರಾಗಿರುವುದಾಗಿ ಜಾಹೀರಾತು ನೀಡುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಮಂಜೂರಾದ ಹಣ ಪಡೆಯಲು ₹ 150 ಕೋಟಿ ಶುಲ್ಕ ಪಾವತಿ ಮಾಡಬೇಕಿದೆ. ಆದರೆ, ನಮ್ಮ ಬಳಿ ಹೆಚ್ಚು ಹಣವಿಲ್ಲ. ಯಾರಾದರೂ ತಲಾ ₹ 25 ಲಕ್ಷ ಹೂಡಿಕೆ ಮಾಡಿದರೆ, ಅಂಥವರಿಗೆ ಕೆಲವೇ ದಿನಗಳಲ್ಲಿ ₹ 7.50 ಕೋಟಿ ವಾಪಸು ನೀಡುತ್ತೇವೆ' ಎಂಬುದಾಗಿ ಆರೋಪಿಗಳು ಹೇಳುತ್ತಿದ್ದರು. ಅದನ್ನು ನಂಬಿದ್ದ ದೂರುದಾರ, ₹ 40 ಲಕ್ಷ ಹೂಡಿಕೆ ಮಾಡಿದ್ದರು. ಅವರಿಗೆ ಯಾವುದೇ ಹಣ ವಾಪಸು ಕೊಟ್ಟಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ಜನರನ್ನು ವಂಚಿಸುವುದನ್ನೇ ಆರೋಪಿಗಳು ವೃತ್ತಿ ಮಾಡಿಕೊಂಡಿದ್ದರು. ಕೃತ್ಯದಿಂದ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು. ಸುಬ್ರಮಣ್ಯಪುರ ಠಾಣೆಯಲ್ಲೂ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ತಿಳಿಸಿದರು.

ಪ್ರತ್ಯೇಕ ಪ್ರಕರಣ: 25 ಕೆ.ಜಿ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿರುವ ಮಹದೇವಪುರ ಪೊಲೀಸರು, 25 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ.

'ಪಶ್ಚಿಮ ಬಂಗಾಳದ ರಾಜಿಬ್ ಸರ್ಕಾರ್, ಒಡಿಶಾದ ದುಕ್ಷಿಶ್ಯಾಮ್ ಪಟ್ನಾಯಕ್ ಹಾಗೂ ಅಸ್ಸಾಂನ ಬಹರೂಲ್ ಇಸ್ಲಾಂ ಬಂಧಿತರು. ಇವರಿಂದ ಜಪ್ತಿ ಮಾಡಿರುವ ಗಾಂಜಾ ಮೌಲ್ಯ ₹ 2.40 ಲಕ್ಷ' ಎಂದು ಪೊಲೀಸರು ಹೇಳಿದರು.

'ತಮ್ಮ ರಾಜ್ಯದಿಂದ ಗಾಂಜಾವನ್ನು ಅಕ್ರಮವಾಗಿ ಸಾಗಿಸಿ ತರುತ್ತಿದ್ದ ಆರೋಪಿಗಳು, ನಗರದಲ್ಲಿ ಮಾರುತ್ತಿದ್ದರು. ಕೆಲ ಕಂಪನಿಗಳ ನೌಕರರು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಾರ್ಮಿಕರು ಆರೋಪಿಗಳ ಬಳಿ ಗಾಂಜಾ ಖರೀದಿಸುತ್ತಿದ್ದರು' ಎಂದು ತಿಳಿಸಿದರು.

'ಬಡ್ತಿ: ಲಂಚ ಕೇಳಿದರೆ ದೂರು ದಾಖಲಿಸಿ'

ಬೆಂಗಳೂರು: ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ಮೋಜಣಿದಾರರ ವೃಂದದಿಂದ ವಲಯ ಅರಣ್ಯಾಧಿಕಾರಿ ವೃಂದಕ್ಕೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ಅನುಕೂಲ ಮಾಡಿಕೊಡುವ ಆಮಿಷ ಒಡ್ಡಿ ಯಾರಾದರೂ ಲಂಚಕ್ಕೆ ಬೇಡಿಕೆ ಇಟ್ಟರೆ ಅಧಿಕೃತವಾಗಿ ದೂರು ದಾಖಲಿಸುವಂತೆ ಸಿಬ್ಬಂದಿ ಮತ್ತು ನೇಮಕಾತಿ ವಿಭಾಗದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಅನಿಲ್ ಕುಮಾರ್ ರತನ್ ಸುತ್ತೋಲೆ ಹೊರಡಿಸಿದ್ದಾರೆ.

ಅರಣ್ಯಾಧಿಕಾರಿಗಳ ಬಡ್ತಿ ಪ್ರಕ್ರಿಯೆ ಆರಂಭವಾಗಿದ್ದು, ಅಧಿಕಾರಿಗಳ ಮಾಹಿತಿ ಸಂಗ್ರಹಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಕೆಲವು ವ್ಯಕ್ತಿಗಳು ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ಮೋಜಣಿದಾರರನ್ನು ಸಂಪರ್ಕಿಸಿ ಬಡ್ತಿಯ ಭರವಸೆ ನೀಡಿ, ಹಣ ವಸೂಲಿಗೆ ಪ್ರಯತ್ನಿಸುತ್ತಿರುವ ಕುರಿತು ಮಾರ್ಚ್ 20ರಂದು ಅನಾಮಧೇಯ ವ್ಯಕ್ತಿಯೊಬ್ಬರು ರತನ್ ಅವರ ಕಚೇರಿಗೆ ದೂರವಾಣಿ ಕರೆಮಾಡಿ ದೂರಿದ್ದರು. ಈ ಕಾರಣದಿಂದ ಮಂಗಳವಾರ ಸುತ್ತೋಲೆ ಹೊರಡಿಸಲಾಗಿದೆ.

ನಿಯಮಾನುಸಾರ ಲಭ್ಯವಿರುವ ಖಾಲಿ ಹುದ್ದೆಗಳನ್ನು ಆಧರಿಸಿ ಬಡ್ತಿ ನೀಡಲಾಗುವುದು. ಅರ್ಹ ಅಭ್ಯರ್ಥಿಗಳ ಮಾಹಿತಿಯನ್ನು ಪರಿಶೀಲಿಸಿ, ಸೂಕ್ತ ಶಿಫಾರಸು ಮಾಡಿದ ಬಳಿಕವೇ ಬಡ್ತಿ ನೀಡಲಾಗುತ್ತದೆ. ಆದರೆ, ಕೆಲವರು ಸ್ವಾರ್ಥ ಹಿತಾಸಕ್ತಿಗಾಗಿ ಈ ಪ್ರಕ್ರಿಯೆಗೆ ಧಕ್ಕೆ ತರಲು ಯತ್ನಿಸುತ್ತಿದ್ದಾರೆ. ಬಡ್ತಿಯ ಭರವಸೆ ನೀಡಿ, ಹಣಕ್ಕೆ ಬೇಡಿಕೆ ಇಡುವವರು ಸರ್ಕಾರಿ ನೌಕರರಾಗಿದ್ದರೆ ಅವರ ವಿರುದ್ಧ ತಮ್ಮ ಕಚೇರಿ ಅಥವಾ ಜಾಗೃತ ವಿಭಾಗದ ಎಪಿಸಿಸಿಎಫ್ ಕಚೇರಿ ಅಥವಾ ಲೋಕಾಯುಕ್ತಕ್ಕೆ ದೂರು ನೀಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ. ಈ ರೀತಿ ಹಣ ವಸೂಲಿಗೆ ಪ್ರಯತ್ನಿಸುವರು ಖಾಸಗಿ ವ್ಯಕ್ತಿಯಾಗಿದ್ದಲ್ಲಿ ಆ ಪ್ರದೇಶದ ವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡಬೇಕು ಎಂದಿದ್ದಾರೆ.

ಬಿಎಂಟಿಸಿ ಬಸ್ ಬೆಂಕಿ ಅವಘಡ • ಆತ್ಮಹತ್ಯೆ ಶಂಕೆ ವ್ಯಕ್ತಪಡಿಸಿದ ಪೊಲೀಸರು

ಸಜೀವ ದಹನ: ಪೆಟ್ರೋಲ್, ಡೀಸೆಲ್ ಖರೀದಿಸಿದ್ದ ನಿರ್ವಾಹಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ನಲ್ಲಿ ನಿರ್ವಾಹಕ ಮುತ್ತಯ್ಯ ಸ್ವಾಮಿ (43) ಸಜೀವ ದಹನವಾಗಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಬ್ಯಾಡರಹಳ್ಳಿ ಪೊಲೀಸರು, ಇದೊಂದು ಆತ್ಮಹತ್ಯೆ ಇರಬಹುದೆಂಬ ಶಂಕೆ ವ್ಯಕ್ತಪಡಿಸಿದ್ದಾರೆ.

'ಮುತ್ತಯ್ಯ ಸ್ವಾಮಿ ಅವಘಡಕ್ಕೂ ಮುನ್ನ ಸಮೀಪದ ಬಂಕ್‌ನಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಖರೀದಿಸಿದ್ದರು. ಇದಕ್ಕಾಗಿ ತಮ್ಮ ಫೋನ್ ಪೇ ಮೂಲಕ ₹ 700 ಪಾವತಿಸಿದ್ದರು' ಎಂಬ ಸಂಗತಿಯನ್ನು ಪತ್ತೆ ಮಾಡಿರುವ ಪೊಲೀಸರು, ಸ್ಥಳ ಪರಿಶೀಲನೆ ನಡೆಸಿದ್ದ ವಿಧಿವಿಜ್ಞಾನ ಪ್ರಯೋಗಾಲಯದ ಅಂತಿಮ ವರದಿಗಾಗಿ ಕಾಯುತ್ತಿದ್ದಾರೆ.

ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ 'ಡಿ' ಗ್ರೂಪ್ ನೌಕರರ ಬಡಾವಣೆ ನಿಲ್ದಾಣದಲ್ಲಿ ನಿಲ್ಲಿಸಿದ್ದ ಸುಮನಹಳ್ಳಿ ಡಿಪೊ-31ಕ್ಕೆ ಸೇರಿದ್ದ ಬಿಎಂಟಿಸಿ ಬಸ್ (ಮೆಜೆಸ್ಟಿಕ್– ಬ್ಯಾಡರಹಳ್ಳಿ ಮಾರ್ಗ) ಮಾರ್ಚ್ 10 ರಂದು ಬೆಂಕಿಗೆ ಆಹುತಿಯಾಗಿತ್ತು. ಬಸ್ಸಿನೊಳಗೆ ಮಲಗಿದ್ದ ನಿರ್ವಾಹಕ ಮುತ್ತಯ್ಯ ಸ್ವಾಮಿ ಸಜೀವ ದಹನವಾಗಿದ್ದರು. 'ನಿರ್ವಾಹಕ ಸಾವು ಪ್ರಕರಣ ಗಂಭೀರವಾದದ್ದು. ಮೊದಲ ದಿನದಿಂದ ತನಿಖೆಗೆ ಒತ್ತು ನೀಡಲಾಗಿದೆ. ಘಟನಾ ಸ್ಥಳ ಹಾಗೂ ಸುತ್ತಮುತ್ತ ಪರಿಶೀಲನೆ ನಡೆಸಿ, ಕೆಲ ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಇದೊಂದು ಆತ್ಮಹತ್ಯೆ ಇರಬಹುದೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ಇದೇ ಅಂತಿಮವಲ್ಲ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬರಬೇಕಿದೆ. ನಂತರವೇ ಸಾವಿನ ಬಗ್ಗೆ ವೈಜ್ಞಾನಿಕ ಕಾರಣಗಳು ತಿಳಿಯಲಿವೆ' ಎಂದರು.

ತಡರಾತ್ರಿವರೆಗೂ ಮೊಬೈಲ್‌ನಲ್ಲಿ ಮಾತು: 'ಮಾರ್ಚ್ 9ರಂದು ಕರ್ತವ್ಯ ಮುಗಿಸಿದ್ದ ಮುತ್ತಯ್ಯಸ್ವಾಮಿ ಹಾಗೂ ಚಾಲಕ ಪ್ರಕಾಶ್, ರಾತ್ರಿ ನಿಲ್ದಾಣಕ್ಕೆ ಬಂದು ಬಸ್ ನಿಲ್ಲಿಸಿದ್ದರು. ಶುಕ್ರವಾರ ಬೆಳಿಗ್ಗೆ ಅಲ್ಲಿಂದಲೇ ಕರ್ತವ್ಯ ಶುರುವಾಗಬೇಕಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.


'ಕರ್ತವ್ಯದ ವೇಳೆ ಸಂಗ್ರಹವಾಗಿದ್ದ ಹಣವನ್ನು ಚಾಲಕ ಪ್ರಕಾಶ್ ಅವರಿಗೆ ನೀಡಿದ್ದ ಮುತ್ತಯ್ಯ, ಕೊಠಡಿಗೆ ಹೋಗಿ ಮಲಗುವಂತೆ ಹೇಳಿದ್ದರು. ತಾವೊಬ್ಬರೇ ಬಸ್‌ನಲ್ಲಿ ಮಲಗುವುದಾಗಿ ತಿಳಿಸಿದ್ದರು. ತಡರಾತ್ರಿ 1 ಗಂಟೆಯಲ್ಲೂ ಮುತ್ತಯ್ಯ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದರು. ಈ ಬಗ್ಗೆ ಪ್ರಕಾಶ್ ಹೇಳಿಕೆ ನೀಡಿದ್ದಾರೆ' ಎಂದು ತಿಳಿಸಿವೆ.

'ನಿಲ್ದಾಣದ ಸಮೀಪದಲ್ಲಿರುವ ಬಂಕ್‌ನಲ್ಲಿ ತಡರಾತ್ರಿ ಐದು ಲೀಟರ್ ಪೆಟ್ರೋಲ್ ಹಾಗೂ ಎರಡು ಲೀಟರ್ ಡೀಸೆಲ್ ಖರೀದಿಸಲಾಗಿದೆ. ಇದಕ್ಕಾಗಿ ಮುತ್ತಯ್ಯ ಅವರ ಮೊಬೈಲ್‌ನಿಂದ ಫೋನ್‌ಪೇ ಮೂಲಕ ಹಣ ಪಾವತಿ ಮಾಡಲಾಗಿದೆ. ಇದಾಗಿ ಕೆಲ ಗಂಟೆಗಳ ನಂತರ, ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಮುತ್ತಯ್ಯ ಸ್ವಾಮಿ ಅವರೇ ಬಂಕ್‌ಗೆ ಹೋಗಿದ್ದ ಬಗ್ಗೆ ಕೆಲ ಪುರಾವೆಗಳನ್ನು ಸಂಗ್ರಹಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಬಾಗಿಲು, ಕಿಟಕಿ ಮುಚ್ಚಿದ್ದಕ್ಕೆ ಸ್ಫೋಟ: 'ಬಸ್‌ನ ಬಾಗಿಲು ಹಾಗೂ ಎಲ್ಲ ಕಿಟಕಿಗಳನ್ನು ಬಂದ್ ಮಾಡಲಾಗಿತ್ತು. ಒಳಗೆ ಬೆಂಕಿ ಹೊತ್ತಿಕೊಂಡಿತ್ತು. ಮುತ್ತಯ್ಯ ಸ್ವಾಮಿ ಸಜೀವ ದಹನವಾಗಿದ್ದರು. ಬೆಂಕಿ ಕೆನ್ನಾಲಗೆ ಹಾಗೂ ಹೊಗೆಯ ಒತ್ತಡದಿಂದ ಸ್ಫೋಟ ಸಂಭವಿಸಿ ಬಾಗಿಲು ಹಾಗೂ ಕಿಟಕಿಗಳು ಸ್ಫೋಟಿಸಿವೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು ಸಂಸ್ಥಾಪಕರ ದಿನಾಚರಣೆ ಮತ್ತು ಡಾ.ಕೆ.ಎನ್.ವಿ.ಶಾಸ್ತ್ರಿಯವರ 128 ನೇ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥನಾರಾಯಣ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಟ್ರಸ್ಟಿ ಡಾ. ಗೀತಾ ನಾರಾಯಣ್, ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಉಮಾ ಮಹಾದೇವನ್, ಎಂಲ್ಯಾಕ್ ಟ್ರಸ್ಟ್ ಅಧ್ಯಕ್ಷ ನಾಗಾನಂದ್ ಮತ್ತು ಖಜಾಂಚಿ ವಿನೋದ್ ಡಿ. ಶಾ ಇದ್ದಾರೆ.



ಸುಭಾಷಿತ

ನೀವು ನಂಬುವಂತಹ ಸಂಗತಿಗಳನ್ನು ವಿಮರ್ಶಿಸಿ ಮತ್ತು ಪರಾಮರ್ಶಿಸಿ. - ಅರಿಸ್ಟಾಟಲ್

ವಿಶ್ವವಿದ್ಯಾಲಯ: ಗುಣಮಟ್ಟ ಹೆಚ್ಚಳಕ್ಕೆ ಸಿಗಲಿ ಆದ್ಯತೆ

ರಾಜ್ಯದ ಎಲ್ಲ ನೂತನ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಿಸಿರುವ ರಾಜ್ಯ ಸರ್ಕಾರದ ನಿರ್ಧಾರದಲ್ಲಿ ಉನ್ನತ ಶಿಕ್ಷಣದ ಹಿತಾಸಕ್ತಿಗಿಂತಲೂ ಹೊಸ ಹುದ್ದೆಗಳನ್ನು ಸೃಷ್ಟಿಸುವಲ್ಲಿ ಇರುವ ರಾಜಕೀಯ ಹಿತಾಸಕ್ತಿಯೇ ಎದ್ದುಕಾಣಿಸುವಂತಿದೆ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದಕ್ಕಿಂತಲೂ ಸಂಸ್ಥೆಗಳನ್ನು ಹುಟ್ಟುಹಾಕುವುದರಲ್ಲಿ ಸರ್ಕಾರಗಳಿಗೆ ಯಾವಾಗಲೂ ಹುಮ್ಮಸ್ಸು ಎನ್ನುವುದಕ್ಕೆ ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವ ರಾಜ್ಯದ ವಿಶ್ವವಿದ್ಯಾಲಯಗಳು ಉದಾಹರಣೆಯಂತಿವೆ. ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಮೂಲ ಸೌಕರ್ಯಗಳು ಹಾಗೂ ಬೋಧಕ ಸಿಬ್ಬಂದಿಯ ಕೊರತೆಯನ್ನು ಬಗೆಹರಿಸುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಡೆಸದ ಸರ್ಕಾರ, ಹೊಸ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಹಾಗೂ ಅವುಗಳಿಗೆ ಕುಲಪತಿಗಳನ್ನು ನೇಮಿಸುವುದರಲ್ಲಿ ಆಸಕ್ತಿ ತೋರಿಸುತ್ತಿದೆ. ಚಾಮರಾಜನಗರ, ಬೀದರ್, ಹಾವೇರಿ, ಹಾಸನ, ಕೊಡಗು, ಕೊಪ್ಪಳ ಹಾಗೂ ಬಾಗಲಕೋಟೆಯಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ನಿರ್ಧಾರ ಹೊರಬಿದ್ದ ಐದಾರು ತಿಂಗಳ ನಂತರ ಕುಲಪತಿಗಳನ್ನು ನೇಮಿಸಲಾಗಿದೆ. ಹೊಸ ವಿಶ್ವವಿದ್ಯಾಲಯಗಳ ಬಗ್ಗೆ ಸರ್ಕಾರಕ್ಕೆ ನಿಜವಾಗಿಯೂ ಕಾಳಜಿಯಿದ್ದಲ್ಲಿ, ಈ ನೇಮಕಗಳನ್ನು ಚುನಾವಣೆ ಸಂದರ್ಭದವರೆಗೂ ಕಾಯದೆ ಮೊದಲೇ ಮಾಡಬಹುದಿತ್ತು. ಆದರೆ, ಸರ್ಕಾರಕ್ಕೆ ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಿಸುವುದರಲ್ಲಿ ಉತ್ಸಾಹವಿದೆಯೇ ಹೊರತು, ಇರುವ ವಿಶ್ವವಿದ್ಯಾಲಯಗಳ ಗುಣಮಟ್ಟ ಸುಧಾರಣೆಯ ಬಗ್ಗೆ ಹೆಚ್ಚಿನ ಆಸಕ್ತಿಯಿಲ್ಲ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾಗಿ ಜಿಲ್ಲೆಗೊಂದು ವಿಶ್ವವಿದ್ಯಾಲಯ ರೂಪಿಸುವುದಾಗಿ ಸರ್ಕಾರ ಹೇಳಿಕೊಂಡಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉನ್ನತ ಶಿಕ್ಷಣದ ವಿಕೇಂದ್ರೀಕರಣ ಸ್ವಾಗತಾರ್ಹ. ಆದರೆ, ಈ ವಿಕೇಂದ್ರೀಕರಣ ಸಮರ್ಪಕ ರೀತಿಯಲ್ಲಿ ಜಾರಿಗೊಳ್ಳದೇ ಹೋದರೆ, ಉನ್ನತ ಶಿಕ್ಷಣ ವ್ಯವಸ್ಥೆ ಮಹತ್ವ ಕಳೆದುಕೊಂಡು, ವಿಶ್ವವಿದ್ಯಾಲಯಗಳು ಜಡ ಸ್ಥಾವರಗಳಾಗಿಯಷ್ಟೇ ಉಳಿಯುತ್ತವೆ.



ಉನ್ನತ ಶಿಕ್ಷಣದ ವಿಕೇಂದ್ರೀಕರಣ ವ್ಯವಸ್ಥೆ ಸಮರ್ಪಕವಾಗಿ ಜಾರಿಯಾಗದಿದ್ದರೆ ವಿಶ್ವವಿದ್ಯಾಲಯಗಳು ಜಡ ಸ್ಥಾವರಗಳಾಗಿಯಷ್ಟೇ ಉಳಿಯುತ್ತವೆ

ವಿಶ್ವವಿದ್ಯಾಲಯವೊಂದರ ಮಹತ್ವ ಇರುವುದು ವಿದ್ಯಾರ್ಥಿಗಳಿಗೆ ನೀಡುವ ಪದವಿಗಳಲ್ಲಿ ಅಲ್ಲ. ಜ್ಞಾನವನ್ನು ಸೃಷ್ಟಿಸುವುದು ಹಾಗೂ ವಿತರಿಸುವುದು ವಿಶ್ವವಿದ್ಯಾಲಯಗಳ ಪ್ರಾಥಮಿಕ ಉದ್ದೇಶ. ಈ ಜ್ಞಾನಕೇಂದ್ರಿತ ಚಟುವಟಿಕೆಗಳ ಒಂದು ರೂಪದಲ್ಲಿ ಪದವಿಗಳನ್ನು ನೀಡಬೇಕೆ ವಿನಾ ಪ್ರಮಾಣಪತ್ರಗಳನ್ನು ನೀಡುವುದಕ್ಕೆ ಮಾತ್ರ ವಿಶ್ವವಿದ್ಯಾಲಯಗಳು ಸೀಮಿತಗೊಳ್ಳಬಾರದು. ದುರದೃಷ್ಟವಶಾತ್, ರಾಜ್ಯದ ಈಗಿನ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ನೀಡಿ ಕೈತೊಳೆದುಕೊಳ್ಳುವ ಕೆಲಸವನ್ನಷ್ಟೇ ಮಾಡುತ್ತಿವೆ. ಸಂವಾದ ಸಂಸ್ಕೃತಿ ಮತ್ತು ವಿಚಾರಧಾರೆಗಳನ್ನು ರೂಪಿಸುವ ವಿಶ್ವವಿದ್ಯಾಲಯಗಳ ಪರಂಪರೆ ಈಗ ಮಸುಕಾಗಿದೆ. ನಾಡು–ನುಡಿ ಹಾಗೂ ವಿವಿಧ ಜ್ಞಾನಕ್ಷೇತ್ರಗಳಿಗೆ ಸಂಬಂಧಿಸಿದ ಸಂಶೋಧನೆಗಳು ಮತ್ತು ಚಟುವಟಿಕೆಗಳಿಂದ ಗಮನಸೆಳೆಯುತ್ತಿದ್ದ ವಿಶ್ವವಿದ್ಯಾಲಯಗಳು ವಿವಾದಗಳಿಂದ ಹಾಗೂ ಭ್ರಷ್ಟಾಚಾರ ಪ್ರಕರಣಗಳಿಂದ ಸುದ್ದಿಯಲ್ಲಿವೆ. ನಾಡು–ನುಡಿಗೆ ಗಣನೀಯ ಕೊಡುಗೆ ನೀಡಿದ ಸಾಧಕರನ್ನು ಗುರುತಿಸಿ ನೀಡುವ ಗೌರವ ಡಾಕ್ಟರೇಟ್ ಪದವಿಗಳು ಕೂಡ ಹೊಳಪು ಕಳೆದುಕೊಂಡಿವೆ. ಸಂಸ್ಕೃತ, ಜಾನಪದ, ಮಹಿಳೆ, ಸಂಗೀತ, ತೋಟಗಾರಿಕೆ ಸೇರಿದಂತೆ ವಿಷಯವಾರು ವಿಶ್ವವಿದ್ಯಾಲಯಗಳು ರಾಜ್ಯದಲ್ಲಿವೆ; ಹಂಪಿಯ ಕನ್ನಡ ವಿಶ್ವವಿದ್ಯಾಲಯ ಸಂಶೋಧನೆಯನ್ನೇ ಮುಖ್ಯ ಉದ್ದೇಶವನ್ನಾಗಿಸಿಕೊಂಡಿದೆ. ಆದರೆ, ಈ ವಿಶ್ವವಿದ್ಯಾಲಯಗಳು ಎಷ್ಟರಮಟ್ಟಿಗೆ ಸೃಜನಶೀಲವಾಗಿವೆ ಎನ್ನುವುದರ ಮೌಲ್ಯಮಾಪನವೇ ಸರಿಯಾಗಿ ನಡೆದಿಲ್ಲ. ಕನ್ನಡ ವಿಶ್ವವಿದ್ಯಾಲಯ ಸೇರಿದಂತೆ ಬಹುತೇಕ ವಿಶ್ವವಿದ್ಯಾಲಯಗಳು ಅನುದಾನದ ಕೊರತೆಯಿಂದ ಬಳಲುತ್ತಿದ್ದು ಅಪೌಷ್ಟಿಕ ಮಕ್ಕಳಂತಿವೆ.

ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಕಾಯಂ ಬೋಧಕರಷ್ಟೇ ಮಾರ್ಗದರ್ಶನ ಮಾಡಲಿಕ್ಕೆ ಅವಕಾಶವಿರುವುದರಿಂದ, ಸಂಶೋಧನೆಯಲ್ಲಿ ತೊಡಗಿಕೊಳ್ಳುವ ವಿದ್ಯಾರ್ಥಿಗಳು ಮಾರ್ಗದರ್ಶಕರ ಕೊರತೆ ಎದುರಿಸುತ್ತಿದ್ದಾರೆ. ಕುಲಪತಿಗಳನ್ನು ನೇಮಿಸುವಲ್ಲಿ ಸರ್ಕಾರಕ್ಕಿರುವ ಹುಮ್ಮಸ್ಸು, ಬೋಧಕ ಸಿಬ್ಬಂದಿಯ ನೇಮಕಾತಿಯಲ್ಲಿ ಕಾಣಿಸುತ್ತಿಲ್ಲ. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳೂ ಕಾಯಂ ಬೋಧಕ ಸಿಬ್ಬಂದಿಯ ಕೊರತೆ ಎದುರಿಸುತ್ತಿವೆ. ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಅಧ್ಯಾಪಕರು ಹಾಗೂ ಅತಿಥಿ ಉಪನ್ಯಾಸಕರನ್ನು ನೆಚ್ಚಿಕೊಂಡು ವಿಶ್ವವಿದ್ಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಕೆಲವು ವಿಭಾಗಗಳಲ್ಲಿ ಮುಖ್ಯಸ್ಥರೇ ಇಲ್ಲ; ಮುಖ್ಯಸ್ಥರಿದ್ದಲ್ಲಿ ಬೋಧಕ ಸಿಬ್ಬಂದಿ ಇರುವುದಿಲ್ಲ. ಅತಿಥಿ ಉಪನ್ಯಾಸಕರಿಗೆ ವೇತನ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಲು ವಿಶ್ವವಿದ್ಯಾಲಯಗಳು ಹಣದ ಕೊರತೆ ಎದುರಿಸಿರುವ ಉದಾಹರಣೆಗಳಿವೆ. ನಿರ್ದಿಷ್ಟ ಸಂಖ್ಯೆಯ ಕಾಯಂ ಉಪನ್ಯಾಸಕರು ಇಲ್ಲದ ಕಾರಣದಿಂದಾಗಿ ರಾಜ್ಯದ ಕೆಲವು ವಿಶ್ವವಿದ್ಯಾಲಯಗಳು 'ನ್ಯಾಕ್' ಮಾನ್ಯತೆಯಲ್ಲಿ ಹಿನ್ನಡೆ ಎದುರಿಸಿವೆ. ವಿಶ್ವವಿದ್ಯಾಲಯಗಳ ಈ ಅಪೌಷ್ಟಿಕತೆ ಮತ್ತು ನಿಷ್ಕ್ರಿಯತೆಯ ಹೊಣೆಗಾರಿಕೆಯನ್ನು ಸರ್ಕಾರವೇ ಹೊರಬೇಕು. ಸಮರ್ಥ ಬೋಧಕರೇ ಇಲ್ಲದ ಮೇಲೆ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳು ನಡೆಯುವುದು ಹೇಗೆ? ಮಾರ್ಗದರ್ಶನ ಮಾಡುವವರ ಕೊರತೆಯಿದ್ದಾಗ ಸಂಶೋಧನಾ ಚಟುವಟಿಕೆಗಳು ನಡೆಯುವುದು ಹೇಗೆ ಸಾಧ್ಯ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ದಿನದ ಟ್ವೀಟ್



ಅಂದು– ಇಂದು...

'ಗಲೀ ಗಲೀ ಮೆ ಶೋರ್ ಹೈ, ರಾಜೀವ್ ಗಾಂಧಿ ಚೋರ್ ಹೈ' ಎಂಬುದು ಒಂದೊಮ್ಮೆ ಬಿಜೆಪಿಯವರು ಗೋಡೆಯ ಮೇಲೆಲ್ಲಾ ಬರೆಯುತ್ತಿದ್ದ ಘೋಷಣೆಯಾಗಿತ್ತು. ಆಡಳಿತಗಾರರ ಬಗೆಗಿನ ಇಂತಹುದೇ ಘೋಷಣೆ ಈಗ ವ್ಯಕ್ತಿಯನ್ನು ಜೈಲಿಗೆ ದೂಡಬಹುದು. ಸಂವಿಧಾನದ 19 (1)(ಎ) ವಿಧಿಯು ಎಷ್ಟೊಂದು ದುರ್ಬಲವಾಗಿದೆ ಎಂಬುದು ಯಾರಿಗೂ ಮನವರಿಕೆಯಾಗುತ್ತಿಲ್ಲ. ಹಿಂದೆ ತುರ್ತುಪರಿಸ್ಥಿತಿಯ ವಿರುದ್ಧ ಪ್ರಬಲ ಹೋರಾಟ ನಡೆಸಿದ್ದೆವು ಎಂದು ಹೇಳಿಕೊಳ್ಳುವವರೇ ಇದಕ್ಕೆ ಕಾರಣರಾಗಿದ್ದಾರೆ!

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ

ಬಿಜೆಪಿಯು ಅವರಿಗೆ ವಿಧಾನಪರಿಷತ್ ಸ್ಥಾನ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ ನೀಡಿತು. ಆದರೂ ಪಕ್ಷ ತೊರೆದಿದ್ದಾರೆ. ಅವರು ಚಿಂಚನಸೂರ ಅಲ್ಲ 'ಚಂಚಲ'ಶೂರ.



ಎನ್.ರವಿ ಕುಮಾರ್, ಪ್ರಧಾನ ಕಾರ್ಯದರ್ಶಿ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಮಂಗಳವಾರ, 24-3-1998

• ಸ್ಪೀಕರ್ ಸ್ಥಾನ: ಸಂಗ್ಮಾ–ಬಾಲಯೋಗಿ ಸ್ಪರ್ಧೆ

ನವದೆಹಲಿ, ಮಾರ್ಚ್ 23– ಸಂಯುಕ್ತ ರಂಗದಿಂದ ಹೊರಬಂದ ತೆಲುಗುದೇಶಂ ಪಕ್ಷ ಆಳುವ ಬಿಜೆಪಿಯ ಜತೆ ಕೈಗೂಡಿಸಿ ತನ್ನ ಸದಸ್ಯ ಜಿ.ಎಂ.ಸಿ.ಬಾಲಯೋಗಿ ಅವರನ್ನು ಸ್ಪೀಕರ್ ಸ್ಥಾನಕ್ಕೆ ಆಳುವ ಪಕ್ಷಗಳ ಒಮ್ಮತದ ಅಭ್ಯರ್ಥಿಯನ್ನಾಗಿ ಇಂದು ನಿಲ್ಲಿಸಿತು.

ಇದರಿಂದ ಹನ್ನೆರಡನೇ ಲೋಕಸಭೆಯ ಸಭಾಧ್ಯಕ್ಷ ಸ್ಥಾನಕ್ಕೆ ಈಗ ಚುನಾವಣೆ ಅನಿವಾರ್ಯವಾಗಿದೆ.

ಕಾಂಗ್ರೆಸ್–ಸಂಯುಕ್ತ ರಂಗ ಅಭ್ಯರ್ಥಿಯಾಗಿ ಕಾಂಗ್ರೆಸ್‌ನ ಪಿ.ಎ.ಸಂಗ್ಮಾ ಅವರು ಸಹ ನಾಮಪತ್ರ ಸಲ್ಲಿಸಿದ್ದಾರೆ. ನಾಳೆ ಸ್ಪೀಕರ್ ಸ್ಥಾನದ ಚುನಾವಣೆ ನಡೆಯಲಿದೆ. ಈ ಚುನಾವಣೆಯ ಫಲಿತಾಂಶವು ವಿಶ್ವಾಸಮತದ ಭವಿಷ್ಯದ ದಿಕ್ಸೂಚಿಯಾಗಲಿದೆ.

• ಕಾಂಗ್ರೆಸ್‌ಗೆ ರಂಗ ಬೆಂಬಲ ನಿರ್ಧಾರ: ನಾಯ್ಡು ಟೀಕೆ

ನವದೆಹಲಿ, ಮಾರ್ಚ್ 23– ಲೋಕಸಭೆ ಸ್ಪೀಕರ್ ಸ್ಥಾನಕ್ಕೆ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುವ ಸಂಯುಕ್ತ ರಂಗದ ತೀರ್ಮಾನವು ಪ್ರಮುಖ ವಿಷಯಗಳ ಬಗೆಗೆ ಒಮ್ಮತದ ನಿರ್ಧಾರ ತೆಗೆದುಕೊಳ್ಳಬೇಕೆನ್ನುವ ಮೂಲ ಬೇರನ್ನೇ ಕಡಿದುಹಾಕಿದಂತಿದೆ ಎಂದು ತೆಲುಗುದೇಶಂ ನಾಯಕ ಎನ್.ಚಂದ್ರಬಾಬು ನಾಯ್ಡು ಅವರು ರಂಗದ ತೀರ್ಮಾನವನ್ನು ಕಟುವಾಗಿ ಟೀಕಿಸಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 24-3-1973

• ರಾಜೇಶ್ ಖನ್ನಾಗೆ ಮದುವೆ

ಮುಂಬೈ, ಮಾರ್ಚ್ 23– ಹಿಂದಿ ಚಿತ್ರರಂಗದ ಶ್ರೇಷ್ಠ ನಟ 32 ವರ್ಷದ ರಾಜೇಶ್ ಖನ್ನಾ ಗುರುವಾರ ಮಧ್ಯರಾತ್ರಿ ಕಳೆದ ನಂತರ ಎರಡು ಗಂಟೆಗೆ ಸರಿಯಾಗಿ ಉದಯೋನ್ಮುಖ ಚಿತ್ರತಾರೆ ಡಿಂಪಲ್ ಕಪಾಡಿಯಾ ಅವರೊಂದಿಗೆ ವಿವಾಹದ ನಿಶ್ಚಿತಾರ್ಥ ಮಾಡಿಕೊಂಡರು.

24 ವರ್ಷದ ಕುಮಾರಿ ಕಪಾಡಿಯಾ ಈಗ ರಾಜ್‌ಕಪೂರ್ ಅವರೊಡನೆ ಮಾಡಿಕೊಂಡಿರುವ ಒಪ್ಪಂದದಂತೆ 'ಬಾಬಿ'ಯಲ್ಲಿ ಅಭಿನಯಿಸುತ್ತಿದ್ದಾಳೆ.

ಗುರುವಾರ ಇಡೀ ದಿನ ಬಿಡುವಿಲ್ಲದೆ ಶೂಟಿಂಗ್‌ನಲ್ಲಿ ನಿರತರಾಗಿದ್ದ ರಾಜೇಶ್, ಕೆಲಸ ಮುಗಿಸಿಕೊಂಡು ಬೆಳಗಿನ ಜಾವ ಮಿಸ್ ಕಪಾಡಿಯಾ ಅವರ ಜುಹು ನಿವಾಸಕ್ಕೆ ಧಾವಿಸಿ ನಿಶ್ಚಿತಾರ್ಥದ ಉಂಗುರಗಳ ವಿನಿಮಯ ಮಾಡಿಕೊಂಡರು. ಮಾರ್ಚ್ 26ರಂದು ಮುಂಬೈನಲ್ಲಿ ಮದುವೆ ನಡೆಯುವುದೆಂದು ತಿಳಿದುಬಂದಿದೆ.

ರಾಜಕಾರಣಕ್ಕೆ ಘನತೆ ತಂದ ಲೋಹಿಯಾ ಚಿಂತನೆಗಳು ಈ ಕಾಲಕ್ಕೂ ಸ್ಫೂರ್ತಿಯಾಗಲಿ!

ಚುನಾವಣೆಯ ಎದುರು ಲೋಹಿಯಾ ಧ್ಯಾನ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಚುನಾವಣೆಯ ಗಡಿಬಿಡಿಯಲ್ಲಿ ಮುಳುಗಿರುವ ಕರ್ನಾಟಕದ ಜನ, ಲೋಹಿಯಾ ಹುಟ್ಟುಹಬ್ಬದ (23 ಮಾರ್ಚ್ 1910) ನೆಪದಲ್ಲಾದರೂ ಅವರ ಸಮಾಜವಾದಿ ರಾಜಕಾರಣವನ್ನು ನೆನೆಯಬೇಕಾದ ಅಗತ್ಯವಿದೆ. ರಾಜಕಾರಣ ಎಷ್ಟೇ ಕೆಟ್ಟರೂ ಅದನ್ನು ರಿಪೇರಿ ಮಾಡುವ ಹೊಸ ನಾಯಕರು, ಜನಸಾಮಾನ್ಯರು ತಯಾರಾಗುತ್ತಲೇ ಇರುತ್ತಾರೆ ಎಂಬ ಡಾ. ರಾಮಮನೋಹರ ಲೋಹಿಯಾ ಅವರ ನಂಬಿಕೆ, ಇಚ್ಛಾಶಕ್ತಿಗಳನ್ನು ಈಗ ಮತ್ತೆ ಹಬ್ಬಿಸಲೇಬೇಕಾದ ಜರೂರಿದೆ.


ಇಂಥ ಬದ್ಧತೆಯಿಂದ ಕಾರ್ಯಕರ್ತರನ್ನು ಅಣಿಗೊಳಿಸುತ್ತಿದ್ದ ಲೋಹಿಯಾ, ಸಮಾಜವಾದಿ ಪಕ್ಷದ ನಿಜವಾದ ಬೆನ್ನೆಲುಬು ಕಾರ್ಯಕರ್ತರು ಎಂದು ನಂಬಿ ಅವರನ್ನು ಸಮಾನವಾಗಿ ಕಾಣುತ್ತಿದ್ದರು. ಅವರನ್ನು ತಾತ್ವಿಕವಾಗಿ ಅಣಿ ಮಾಡುತ್ತಿದ್ದರು. ಹೊಟ್ಟೆ ತುಂಬಿದ ಜನ ಸಿನಿಕರಾಗಿ ಮಾತಾಡಬಹುದು, ಆದರೆ ನಿತ್ಯ ಹೊಟ್ಟೆಬಟ್ಟೆಗೆ ಪರದಾಡುವ ಜನ ಇಲ್ಲಿ ಏನಾದರೂ ಬದಲಾವಣೆ ಆದೀತೆಂದು ಪ್ರತೀ ಚುನಾವಣೆಯಲ್ಲೂ ಕಾಯುತ್ತಿರುತ್ತಾರೆ, ಅಂಥ ಜನರಲ್ಲಿ ಸರಿಯಾದ ರಾಜಕೀಯ ಪ್ರಜ್ಞೆಯನ್ನು ಹರಿತಗೊಳಿಸಿದರೆ ಅವರೇ ರಾಜಕೀಯ ಬದಲಾವಣೆ ತರುತ್ತಾರೆ ಎಂದು ಲೋಹಿಯಾ ನಂಬಿದ್ದರು.

ಚುನಾವಣಾ ಪ್ರಣಾಳಿಕೆಯ ಭರವಸೆಗಳನ್ನು ಈಡೇರಿಸಿದ್ದೇವೆ ಎಂದು ಹೇಳಿಕೊಳ್ಳುವ ಈ ಕಾಲದ ಬಹುತೇಕ ರಾಜಕೀಯ ಪಕ್ಷಗಳಿಗೆ ಲೋಹಿಯಾ ಥರದವರು ರೂಪಿಸುತ್ತಿದ್ದ ಚುನಾವಣಾ ಪ್ರಣಾಳಿಕೆಗಳಿಗೆ ಇರುತ್ತಿದ್ದ ದೇಶನಿರ್ಮಾಣದ ಸಮಗ್ರ ಗುರಿಯ ಅರಿವೇ ಇರುವಂತಿಲ್ಲ. ಪ್ರಣಾಳಿಕೆ ಎನ್ನುವುದು ಸಂತೆಯ ಹೊತ್ತಿಗೆ ನೇಯ್ದ ಕಾರ್ಯಕ್ರಮ, ಭರವಸೆಗಳ ಪಟ್ಟಿಯಲ್ಲ; ಅದು ಸಮಾಜವನ್ನು ಆರೋಗ್ಯಕರವಾಗಿ ಮರುರೂಪಿಸಲು ಜವಾಬ್ದಾರಿಯುತ ರಾಜಕೀಯ ಪಕ್ಷವೊಂದು ಕೊಡುವ ವಾಗ್ದಾನ ಎಂದು ಲೋಹಿಯಾ ನಂಬಿದ್ದರು. ಚುನಾವಣಾ ಪ್ರಣಾಳಿಕೆ ಎನ್ನುವುದು ರಾಜಕೀಯ ಪಕ್ಷವೊಂದು ಸಮುದಾಯದ ಕನಸನ್ನು ಸಾಮೂಹಿಕವಾಗಿ ಮಂಡಿಸುವ ದಾಖಲೆಯೆಂಬ ಸ್ಪಷ್ಟತೆ ಸಮಾಜವಾದಿ ಪಕ್ಷಕ್ಕಿತ್ತು. ಮುಂದೆ ಬಂದ ರಾಜಕೀಯ ಪಕ್ಷಗಳಿಗೆ ಈ ಪ್ರಣಾಳಿಕೆಗಳೇ ಕೈಮರಗಳಂತಿದ್ದವು. ಈ ಪ್ರಣಾಳಿಕೆಗಳಲ್ಲಿದ್ದ ಭೂ ಹಂಚಿಕೆ, ಭಾಷಾ ನೀತಿ, ಲಿಂಗ ಸಮಾನತೆ, ಹಿಂದುಳಿದ ವರ್ಗಗಳಿಗೆ ಮೀಸಲಾತಿ, ಜಾತ್ಯತೀತ ರಾಷ್ಟ್ರೀಯತೆ, ಭೂ ಕಂದಾಯ ರದ್ದತಿ, ರೈತಪರ ನೀತಿಯಂತಹ ಅನೇಕ ಅಂಶಗಳು ಮುಂದೆ ವಿವಿಧ ಪಕ್ಷಗಳ ಸರ್ಕಾರಗಳಲ್ಲಿ ಜಾರಿಗೆ ಬಂದಿರುವುದನ್ನು ಮರೆಯಬಾರದು. ಹಿಂದುಳಿದ ವರ್ಗಗಳ ರಾಜಕೀಯ ಕುರಿತು ಸಮಾಜವಾದಿ ಪಕ್ಷ ಮಾಡಿದ ಪ್ರಯೋಗಗಳನ್ನು ಹಿಂದಿನ ದಶಕಗಳ ವಿವಿಧ ರಾಜಕೀಯ ಪಕ್ಷಗಳು ಅನುಕರಿಸಿವೆ, ಕೆಲವು ತತ್ವಹೀನ ಪಕ್ಷಗಳು ಅಂಥ ಪ್ರಯೋಗಗಳನ್ನು ವಿಕೃತಗೊಳಿಸಿವೆ.

ಲೋಹಿಯಾರ ನಿತ್ಯದ ರಾಜಕಾರಣ ಹಾಗೂ ಚುನಾವಣಾ ರಾಜಕಾರಣಗಳು ಸ್ವಾತಂತ್ರ್ಯ ಚಳವಳಿಯ ಕಾಲದ ಆದರ್ಶವನ್ನು, ಅದೇ ಆಗ ರೂಪುಗೊಳ್ಳುತ್ತಿದ್ದ ದೇಶವೊಂದರ ಮುನ್ನೋಟಗಳನ್ನು ಮುಂದಿನ ಕಾಲಘಟ್ಟಗಳಲ್ಲಿ ವಿಸ್ತರಿಸಿದ ರೀತಿ ಆದರ್ಶಪ್ರಾಯವಾದುದು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದ ಪಕ್ಷವಾಗಲೀ ಸ್ವಾತಂತ್ರ್ಯ ಚಳವಳಿಯಲ್ಲಿ ಎಂದೂ ಭಾಗಿಯಾಗದ ಪಕ್ಷಗಳಾಗಲೀ ಇವತ್ತು ಕೊಡುತ್ತಿರುವ ಚುನಾವಣಾ ಪ್ರಣಾಳಿಕೆಗಳನ್ನು ಗಮನಿಸಿ: ಈ ಪಕ್ಷಗಳಿಗೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೋಟ್ಯಂತರ ಮಹನೀಯರು, ಮಹಿಳೆಯರ ಕನಸುಗಳಾಗಲೀ ಸ್ವಾತಂತ್ರ್ಯ ಹೋರಾಟದ ಮೂಲ ಆಶಯಗಳಾಗಲೀ ನೆನಪೇ ಇಲ್ಲದಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಚುನಾವಣಾ ಕಾಲದಲ್ಲಿ ಲೋಹಿಯಾ ಥರದವರು ಮಾಡುತ್ತಿದ್ದ ಭಾಷಣಗಳಲ್ಲಿದ್ದ ಆರೋಗ್ಯ ಹಾಗೂ ಘನತೆಯನ್ನು ಗಮನಿಸಿ: ಲೋಹಿಯಾ ಹಾಗೂ ಅವರ ಪ್ರಿಯ ರಾಜಕೀಯ ಸಂಗಾತಿಯಾಗಿದ್ದ ಶಾಂತವೇರಿ ಗೋಪಾಲಗೌಡರು ತಮ್ಮ ಚುನಾವಣಾ ಭಾಷಣಗಳಲ್ಲಿ ಜನರ ಅವಿವೇಕ, ಅಜ್ಞಾನಗಳನ್ನು ತೊಡೆಯಲೆತ್ನಿಸುತ್ತಿದ್ದರು. ಆಳವಾಗಿ ಯೋಚಿಸಿ, ಜವಾಬ್ದಾರಿಯಿಂದ ಮಾತಾಡುತ್ತಿದ್ದ ಅವರು ದೇಶದ, ರಾಜ್ಯದ ಆರ್ಥಿಕ, ಸಾಮಾಜಿಕ ಸವಾಲುಗಳು, ಸಂಪನ್ಮೂಲಗಳನ್ನು ಸರ್ಕಾರಗಳು ಬಳಸಬೇಕಾದ ರೀತಿ, ರಾಜ್ಯದ ಮುಂದಿನ ದಿಕ್ಕು ಮುಂತಾದವನ್ನು ವಿವರವಿವರವಾಗಿ ಜನರ ಮುಂದಿಡುತ್ತಿದ್ದರು. ಚುನಾವಣಾ ಭಾಷಣಗಳು ಜನರಿಗೆ ನಿಜವಾದ ರಾಜಕೀಯ ಶಿಕ್ಷಣ ನೀಡುವ ಸಾಧನಗಳಾಗಿದ್ದವು. ಅವರ ಸಭಿಕರು ದುಡ್ಡು ಕೊಟ್ಟು ಎಳೆದುಕೊಂಡು ಬಂದ ಅಸಹಾಯಕ ಮತದಾರರಾಗಿರಲಿಲ್ಲ. ತಮ್ಮ ನಾಯಕರು ಮಾತಾಡುವುದನ್ನು ಕೇಳಿಸಿಕೊಂಡು ನಿಜಕ್ಕೂ ಸ್ಫೂರ್ತಿಗೊಳ್ಳಲು ಕಾತರರಾಗಿದ್ದ ಜನರಾಗಿದ್ದರು. ಈ ಚಿತ್ರಗಳ ಹಿನ್ನೆಲೆಯಲ್ಲಿ ಇವತ್ತಿನ ಚುನಾವಣೆಗಳ ತಿರುಚು ಮುಖಗಳ, ವಿಷ ಕಾರುವ, ಹುಸಿ ವೀರಾವೇಶದ ಆವುಟಗಳನ್ನು ನೋಡಿದರೆ ನಾವೀಗ ಆ ಭಾರತದಲ್ಲಿಲ್ಲವೇನೋ ಅನ್ನಿಸತೊಡಗುತ್ತದೆ!

ಚುನಾವಣೆಯ ಸೋಲು, ಗೆಲುವುಗಳನ್ನು ಲೋಹಿಯಾ ನೋಡುವ ರೀತಿಯೂ ಭಿನ್ನವಾಗಿತ್ತು. ಈ ಕಾಲದ ಅನೇಕ ನಾಯಕರಂತೆ ಚುನಾವಣೆ ಸೋತ ನಂತರ ಮುಂದಿನ ಐದು ವರ್ಷ ಅವರು ಕಣ್ಮರೆಯಾಗುತ್ತಿರಲಿಲ್ಲ. ಎಲ್ಲರಂತೆ ಅವರು ಕೂಡ ಸೋಲಿನಿಂದ ಕುಗ್ಗಿದರೂ ಸೋಲನ್ನು ತಾತ್ವಿಕವಾಗಿ ಸ್ವೀಕರಿಸಿ, ಮುಂದಿನ ರಾಜಕಾರಣದ ಹೆಜ್ಜೆಗಳನ್ನು ವಿವರಿಸಿಕೊಳ್ಳುತ್ತಿದ್ದರು. ವಿರೋಧ ಪಕ್ಷವೊಂದು ಪಾರ್ಲಿಮೆಂಟ್ ಅಥವಾ ವಿಧಾನ ಸಭೆಯೊಳಗೆ ಮಾತ್ರವೇ ಕೆಲಸ ಮಾಡಬೇಕೆಂದಿಲ್ಲ; ಈ ಸಂಸ್ಥೆಗಳ ಹೊರಗೇ ತಮ್ಮ ಕೆಲಸ ಹೆಚ್ಚು ಇದೆ ಎಂದು ತಿಳಿದು ಮುಂದಿನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದರು. ನೆಹರೂ ವಿರುದ್ಧ ನಿಂತು ಸೋತರೂ, ನೆಹರೂ ಆಡಳಿತದ ವಿರುದ್ಧ ಜನಾಭಿಪ್ರಾಯ ರೂಪಿಸಿದ ನೆಮ್ಮದಿಯಲ್ಲಿದ್ದವರು ಲೋಹಿಯಾ!



ನೆಹರೂ ಪಡೆದ 1,18,931 ಮತಗಳ ಎದುರು ಲೋಹಿಯಾ ಪಡೆದ 54,360 ವೋಟುಗಳು ಸರ್ಕಾರದ ನೀತಿಗಳ ಬಗ್ಗೆ ಸ್ಪಷ್ಟ ಭಿನ್ನಮತವುಳ್ಳ ಜನರ ವೋಟುಗಳಾಗಿದ್ದವು. ತಮ್ಮ ಪಕ್ಷ ಅಂಥ ಭಿನ್ನಮತವನ್ನು ರೂಪಿಸುವ ಸಮರ್ಥ ಸಾಧನವಾಗಿದ್ದು ಹಾಗೂ ಜನ ತಮ್ಮ ಸಮಾಜವಾದಿ ಚಿಂತನೆಯನ್ನು ಒಪ್ಪಿ ಕೂಡ ಮತ ಹಾಕಿದ್ದು ಲೋಹಿಯಾರ ಮುಂದಿನ ರಾಜಕೀಯ ಹಾದಿಯ ದಿಕ್ಕುಗಳನ್ನು ತೋರಿಸುತ್ತಿದ್ದವು. ಮುಂದೆ ಎರಡು ಸಲ ಚುನಾವಣೆ ಗೆದ್ದಾಗ ಲೋಕಸಭೆಯಲ್ಲಿ ಅವರು ಮಂಡಿಸಿದ ವಿಚಾರಗಳು ಇವತ್ತಿಗೂ ಯಾವುದೇ ಶಾಸಕ, ಲೋಕಸಭಾ ಸದಸ್ಯರಿಗೆ ಅದ್ಭುತ ಕೈಪಿಡಿಗಳಂತಿವೆ.

ಲೋಹಿಯಾ ಸಮಾಜವಾದ ಕರ್ನಾಟಕದ ರಾಜಕಾರಣಕ್ಕೆ ಕೊಟ್ಟ ಪ್ರೇರಣೆಗಳು ಅತ್ಯಂತ ಆರೋಗ್ಯಕರವಾದವು. ಸಮಾಜವಾದಿ ಪಕ್ಷದ 'ಕಿಸಾನ್ ಮಹಾಸಭಾ'ದ 'ಉಳುವವನೇ ಹೊಲದೊಡೆಯ' ಘೋಷಣೆ ಕರ್ನಾಟಕದಲ್ಲಿ ಶಾಂತವೇರಿ ಗೋಪಾಲಗೌಡರ ಮೂಲಕ ವಿಧಾನಸಭೆಯಲ್ಲಿ ಮತ್ತೆ ಮತ್ತೆ ಮೊಳಗಿತು. ವಿವಿಧ ಘಟ್ಟಗಳಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪ, ಜೆ.ಎಚ್.ಪಟೇಲ್ ಸಮಾಜವಾದಿ ಪಕ್ಷದಿಂದ ಬಂದವರು. ಸಿದ್ದರಾಮಯ್ಯನವರು ಸಮಾಜವಾದಿ ಚಿಂತನೆಯಿಂದ ರೂಪುಗೊಂಡವರು. ದೇವರಾಜ ಅರಸು ಸಮಾಜವಾದವನ್ನು ಚೆನ್ನಾಗಿ ಗ್ರಹಿಸಿದವರು, ಸಮಾಜವಾದ ಸ್ಪರ್ಶಿಸಿದ ಈ ಎಲ್ಲರೂ ಬಗೆಬಗೆಯಲ್ಲಿ ರಾಜ್ಯದ ಆರೋಗ್ಯ ಕಾಪಾಡಿದ್ದಾರೆ, ಜನರ ಮನಸ್ಸನ್ನು ಬೆಸೆಯುವ ರಾಜಕಾರಣವನ್ನೇ ಮಾಡಿದ್ದಾರೆ. ಈ ಅಂಶ ಲೋಹಿಯಾ ಹಾಗೂ ಆನಂತರ ಜೆ.ಪಿ. ರೂಪಿಸಿದ ಸಮಾಜವಾದಿ ಚಿಂತನೆ ಕರ್ನಾಟಕದ ರಾಜಕಾರಣದ ಮೇಲೆ ಬೀರಿರುವ ಅದ್ಭುತ ಪ್ರಭಾವವನ್ನು ಹೇಳುತ್ತದೆ.

1967ರ ಅಕ್ಟೋಬರ್‌ನಲ್ಲಿ ತೀರಿಕೊಳ್ಳುವ ಕೆಲವು ದಿನ ಮೊದಲು ಆಸ್ಪತ್ರೆಯಲ್ಲಿ ಮಲಗಿದ್ದ ಲೋಹಿಯಾ ಇದ್ದಕ್ಕಿದ್ದಂತೆ ಗೆಳತಿ ರಮಾಮಿತ್ರರನ್ನು ಕೇಳಿದರು: 'ಇಳಾ ರಾಣಿ! ನಿಜ ಹೇಳು, ಈ ದೇಶದಲ್ಲಿ ಒಳ್ಳೆಯದೇನಾದರೂ ನಡೀತಾ ಇದೆಯಾ? ಹಿಂದೂ- ಮುಸ್ಲಿಂ ಏಕತೆಯ ಬಗ್ಗೆ ಏನಾದರೂ ಪ್ರಯತ್ನ ನಡೀತಾ ಇದೆಯಾ? ಬಡ ರೈತರ ಕಷ್ಟದ ಬಗ್ಗೆ ಯಾರಾದ್ರೂ ಯೋಚನೆ ಮಾಡ್ತಿದಾರಾ?' ಚಣ ಬಿಟ್ಟು ವ್ಯಗ್ರರಾಗಿ ಲೋಹಿಯಾ ಹೇಳಿದ ಮಾತು: 'ಈ ದೇಶದಲ್ಲಿ ವಸ್ತುಗಳನ್ನ ರಕ್ಷಣೆ ಮಾಡ್ತಾರೆ, ಆದರೆ ಜನ ಹುಳುಗಳ ಥರಾ ಸಾಯ್ತಾ ಇದ್ರೂ ಅವರನ್ನ ಯಾರೂ ಕೇರ್ ಮಾಡೋರಿಲ್ಲ'.

ಕರ್ನಾಟಕದ ರಾಜಕಾರಣ, ಸಂಸ್ಕೃತಿ ಚಿಂತನೆ, ದಲಿತ ಚಳವಳಿ, ರೈತ ಚಳವಳಿಗಳಿಗೆ ಹಲ ಬಗೆಯ ಪ್ರೇರಣೆ ನೀಡಿರುವ ಲೋಹಿಯಾರ ಈ ಕಾಳಜಿಯ ಪ್ರಶ್ನೆಗಳನ್ನು ನಾಡಿನ ಪ್ರಜ್ಞಾವಂತರು ಮತ್ತೆ ಕೇಳುವಂತಾಗಲಿ. 1967ರ ಚುನಾವಣೆಯಲ್ಲಿ ಸಮಾಜವಾದಿ ಪಕ್ಷ ಕಾಂಗ್ರೆಸ್ಸಿಗೆ ಪರ್ಯಾಯವಾಗಿ ರೂಪುಗೊಳ್ಳತೊಡಗಿದ್ದಾಗ ಲೋಹಿಯಾ ಬರೆದ ಸಾಲುಗಳಿವು: 'ಬದಲಾವಣೆಯ ಗಾಳಿ ಬೀಸುತ್ತಿದೆ. ಆದರೆ ಬದಲಾವಣೆಯ ದಿಕ್ಕು ಇನ್ನೂ ನಿರ್ಧಾರವಾಗಿಲ್ಲ... ಬದಲಾವಣೆಯ ಗಾಳಿಯನ್ನು ಯಾವುದೂ ತಡೆಯಲಾಗದು'. ಲೋಹಿಯಾ ಮಾತು ಹತ್ತು ವರ್ಷಗಳ ನಂತರ ನಿಜವಾಯಿತು. ಅದೇ ಮಾತು ಈಗ ಬದಲಾದ ರಾಜಕೀಯ ಚಿತ್ರಗಳ ಕಾಲದಲ್ಲೂ ಮರುದನಿಸುವಂತಾಗಲಿ!

ಚುರುಮುರಿ



ಹಳೇ ರೂಲ್ಸು!

• ಬಿ.ಎನ್.ಮಲ್ಲೇಶ್

'ಶಾಂತಿ, ಶಿಸ್ತು!' ಎಂದ ದುಬ್ಬೀರ.

ಹರಟೆಕಟ್ಟೆ ಸದಸ್ಯರೆಲ್ಲ ಥಟ್ಟಂತ ಮಾತು ನಿಲ್ಲಿಸಿ ದುಬ್ಬೀರನ ಕಡೆ ನೋಡಿದರು.

'ಏನೋ ದುಬ್ಬೀರ, ಯಾವ್ಯಾವೋ ಹೊಸ ಹೊಸ ಪದ ಪ್ರಯೋಗ ಶುರು ಮಾಡೀಯಲ್ಲ, ಏನ್ಸಮಾಚಾರ?' ಎಂದ ಗುಡ್ಡೆ ನಗುತ್ತ.

'ಲೇಯ್, ನಿಮಿಗೆಲ್ಲ ತಮಾಷಿನೇ... ಲೈಫ್‌ನಲ್ಲಿ ಸ್ವಲ್ಪ ಶಿಸ್ತು, ರೀತಿ ನೀತಿ ಕಲೀರಿ. ಹರಟೆಕಟ್ಟೆ ಅಂದ್ರೆ ಹೆಂಗೆಂಗೋ ಏನೇನೋ ಮಾತಾಡಿ ಎದ್ದು ಹೋಗೋದಲ್ಲ'.

'ಮತ್ತೇನು?'

'ಟೈಮಿಗೆ ಸರಿಯಾಗಿ ಬರ್ಬೇಕು, ಒಬ್ರು ಮಾತಾಡುವಾಗ ಮಧ್ಯ ಇನ್ನೊಬ್ರು ಬಾಯಿ ಹಾಕಬಾರ್ದು, ಗಾಂಚಾಲಿ ಎಲ್ಲ ಮಾಡಬಾರ್ದು'.

'ಅಲ್ಲ, ನೀನ್ಯಾವ ಪೋತ್ಲಾಂಡಿ ಅಂತ ನೀನೇಳಿದಂಗೆ ನಾವು ಕೇಳ್ಬೇಕು? ನಾವು ಹರಟೆಕಟ್ಟೆಗೆ ಬರೋದು ನಮಿಗೆ ತಿಳಿದಿದ್ದು ನಾಕು ಮಾತಾಡಿ, ತರ್ಲೆ ಮಾಡಿ, ಬೈದು ಬೈಸ್ಕಂಡು, ನಕ್ಕು ಹಗುರಾಗೋಕೆ. ನೀನ್ಯಾವುದೋ ಹೊಸ ರೂಲ್ಸು ಹೇಳಿದ್ರೆ ಕೇಳ್ಬೇಕಾ?' ತೆಪರೇಸಿಗೆ ಸಿಟ್ಟು ಬಂತು.

'ನೋಡು ನೋಡು, ಹಿಂಗೆಲ್ಲ ಏರು ಧ್ವನೀಲಿ ಮಾತಾಡಬಾರ್ದು. ನಮ್ಮ ಪರಿಷತ್ ಅಧ್ಯಕ್ಷರನ್ನ ನೋಡಿಯಾದ್ರು ಸ್ವಲ್ಪ ಶಿಸ್ತು ಕಲೀರಿ...'

'ಯಾರು ವಿಧಾನ ಪರಿಷತ್ ಅಧ್ಯಕ್ಷರಾ?'

'ಅಲ್ಲ, ನಮ್ಮ ಸಾಹಿತ್ಯ ಪರಿಷತ್ ಅಧ್ಯಕ್ಷರು. ಅವರ ಸಭೆ ನೋಡಿದೀರಾ? ಯಾರೂ ಪಿಟಿಕ್ಕನ್ನಂಗಿಲ್ಲ, ಏರು ಧ್ವನೀಲಿ ಮಾತಾಡಂಗಿಲ್ಲ, ಎಲ್ಲದಕ್ಕೂ ಕೈ ಎತ್ತಿ ಪರ್ಮಿಶನ್ ತಗಾಬೇಕು. ರೂಲ್ಸು ಅಂದ್ರೆ ರೂಲ್ಸು'.

'ಓ ಅದಾ... ಅದೆಲ್ಲ ಹಳೆ ರೂಲ್ಸು ಬಿಡಲೆ, ನಮ್ ತೆಪರೇಸಿ ಮನೇಲಿ ಜಾರಿಗೆ ಬಂದು ಬಾಳ ವರ್ಷಾದುವು' ಗುಡ್ಡೆ ನಕ್ಕ.

'ಅಂದ್ರೆ?'

'ನಮ್ ತೆಪರೇಸಿ ಮನೇಲೂ ಅಷ್ಟೆ, ಹೆಂಡ್ತಿ ಮುಂದೆ ತೆಪರ ಪಿಟಿಕ್ಕನ್ನಂಗಿಲ್ಲ. ಎಲ್ಲದಕ್ಕೂ ಪರ್ಮಿಶನ್ ತಗಾಬೇಕು. ಏರು ಧ್ವನೀಲಿ ಮಾತಾಡಿದ್ರೆ ಅವತ್ತು ಚಾಪಿ ದಿಂಬು ಹೊರಕ್ಕೇ'.

ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಪ್ರಜಾಪ್ರಭುತ್ವ: ಪಕ್ವತೆ ಬರುವುದೆಂದು?

ಸದನವನ್ನು ಮುಂದೂಡುವುದನ್ನೋ ಗಲಭೆ ಎಬ್ಬಿಸುವುದನ್ನೋ ನಿರಂತರವಾಗಿ ಮಾಡುತ್ತಲೇ ಹೋದರೆ ಬಡ ತೆರಿಗೆದಾರನ ಹಣದ ದುರ್ವ್ಯಯ ಆದಂತಲ್ಲವೇ?

• ಡಾ. ಆರ್.ಲಕ್ಷ್ಮೀನಾರಾಯಣ

ಒಂದು ದೇಶದ ಕಾಲಮಾನದಲ್ಲಿ 75 ವರ್ಷ ತುಂಬ ಭಾರಿ ಅಲ್ಲದಿದ್ದರೂ ಕಡಿಮೆ ಕಾಲಮಾನವೇನಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡು ಮುನ್ನಡೆಯುತ್ತಿರುವ ನಮ್ಮ ದೇಶದ ವಿವಿಧ ಸದನಗಳ ಸದಸ್ಯರು ಈ ಸದನಗಳಲ್ಲಿ ನಡೆದುಕೊಳ್ಳುವ ರೀತಿಗೆ ಒಂದು ಮಟ್ಟದ ಘನತೆ ಮತ್ತು ಪಕ್ವತೆ ಇದುವರೆಗಾಗಲೇ ಬರಬೇಕಾಗಿತ್ತೆಂದು ಈ ದೇಶದ ಯಾವುದೇ ನಾಗರಿಕ ಪ್ರಜೆಗೆ ಅನ್ನಿಸಿದರೆ ಅದು ತೀರಾ ಸಹಜವೇ. ಆದರೆ ಇದು ಆಗುತ್ತಿದೆಯೇ ಎಂದು ಪ್ರಶ್ನಿಸಿಕೊಂಡಾಗ ಅವನಿಗೆ ತೀರಾ ನಿರಾಶೆಯಾಗುವುದಂತೂ ಸುಳ್ಳಲ್ಲ.


ಹಾಗೆ ನೋಡಿದರೆ ಅರವತ್ತು– ಎಪ್ಪತ್ತರ ದಶಕಗಳಲ್ಲೇ ಈ ಸದನಗಳಲ್ಲಿ (ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳಲ್ಲಿ) ಚರ್ಚೆಗಳು, ವಾಗ್ವಾದಗಳು, ಧರಣಿ, ಮುಷ್ಕರಗಳು ತೀರಾ ಕೆಳಹಂತಕ್ಕೆ ಹೋಗದೆ, ಪಕ್ವತೆ ಅಲ್ಲದಿದ್ದರೂ ಒಂದು ಮಟ್ಟದ ಘನತೆಯನ್ನಂತೂ ಕಾಪಾಡಿಕೊಂಡಿದ್ದವು ಎನಿಸುತ್ತದೆ. ಆಗ ಸಂಸತ್ ಸದಸ್ಯರಾಗಿದ್ದ ಪಿಲೂಮೋದಿಯವರು ಒಮ್ಮೆ ಬೇಸತ್ತು, ಈ ಸರ್ಕಾರಕ್ಕೇನಾದರೂ ಸೂಕ್ಷ್ಮತೆ ಇದ್ದರೆ ನನ್ನ ವ್ಯಂಗ್ಯದಿಂದಲೇ ಈ ಸರ್ಕಾರವನ್ನು ಕೊಂದುಬಿಡುತ್ತಿದ್ದೆ ಎಂದು ಹೇಳಿದ್ದು ಕೂಡಾ ಉಂಟು. ಆದರೆ ಅವರ ಆ ಮಾತಿನ ಹರಿತವನ್ನು ಅರ್ಥಮಾಡಿಕೊಳ್ಳುವಷ್ಟು ವಿವೇಕವಂತೂ ಆಗಿನ ಸದಸ್ಯರಲ್ಲಿ ಇತ್ತೆಂಬುದಕ್ಕೆ ಅವರ ಮೇಲೆ ಶಿಸ್ತಿನ ಕ್ರಮವನ್ನೇನೂ ಕೈಗೊಳ್ಳದಿದ್ದುದೇ ಸಾಕ್ಷಿ.

ಈಚಿನ ವರ್ಷಗಳಲ್ಲಿ ಯಾವ ರಾಜ್ಯದ ಶಾಸನಸಭೆಗಳನ್ನು ನೋಡಿದರೂ ಮಾತೆತ್ತಿದರೆ ಸಾಕು ಧರಣಿಗಳು, ಪ್ರತಿಭಟನೆಗಳು ಕೆಲವೊಮ್ಮೆ ಕೈಕೈ ಮಿಲಾಯಿಸುವಷ್ಟು ಉಗ್ರಹಂತಕ್ಕೂ ಹೋಗುತ್ತಿರುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಸಂಸತ್ತಿನ ಸದನಗಳೂ ಇದಕ್ಕೆ ತೀರಾ ಹೊರತೇನಲ್ಲವೆಂಬ ರೀತಿಯಲ್ಲಿ ಸಾಗುತ್ತಿರುವುದು ಸಮಾಧಾನದ ಸಂಗತಿಯಂತೂ ಅಲ್ಲ. ಕೆಲವು ಸಲ ಆಳುವ ಸರ್ಕಾರ ಮತ್ತು ಅದರ ಸದಸ್ಯರು ಮರ್ಯಾದೆಯ ಮಿತಿ ಮೀರಿದರೆ, ಇನ್ನು ಹಲವು ಸಲ ವಿರೋಧ ಪಕ್ಷಗಳು ವಿರೋಧಿಸುವ ನೆವದಲ್ಲಿ ಸದನಗಳ ಘನತೆಯನ್ನು ಮೀರಿ ಹೋಗುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗುತ್ತಿರುವುದು ಮಾಮೂಲಾಗಿಬಿಟ್ಟಿದೆ.

ಇನ್ನು ಸದನದಲ್ಲಿ ಏನು ಮಾತನಾಡಿದರೂ ಅದಕ್ಕೆ ಕಾನೂನಿನ ರಕ್ಷಣೆ ಉಂಟೆಂಬ ಕಾರಣಕ್ಕೆ ಅಸಂಸದೀಯ ಪದಗಳ ಪ್ರಯೋಗವೂ ದಿನಬೆಳಗಾದರೆ ಆಗುತ್ತಿರುವುದೂ ಸಭಾಧ್ಯಕ್ಷರು ಅವನ್ನು ಕಡತಗಳಿಂದ ತೆಗೆಸುತ್ತಿರುವುದೂ ಸಾಮಾನ್ಯವಾಗಿಬಿಟ್ಟಿದೆ. ಬ್ರಹ್ಮಾಸ್ತ್ರವನ್ನು ದಿನವೂ ಪ್ರಯೋಗಿಸುತ್ತಿದ್ದರೆ ಅದು ತನ್ನ ಮಹತ್ವವನ್ನೇ ಕಳೆದುಕೊಂಡು ಮೊಂಡಾಗಿಬಿಡುತ್ತದೆ ಎಂಬುದು ಸದಸ್ಯರಿಗೆ ಅರಿವಾದ ದಿನ ನಮ್ಮ ಪ್ರಜಾಪ್ರಭುತ್ವಕ್ಕೆ ಮಂಗಳದ ದಿನ.

ಇದೀಗ ಸದ್ಯರೊಬ್ಬರು ಸದನಕ್ಕೆ ಅಪಚಾರ ಮಾಡುವಂಥ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಪಮಾನಗೊಳಿಸುವಂಥ ಮಾತನ್ನೇ ಆಡಿದ್ದಾರೆ ಎಂದಿಟ್ಟುಕೊಳ್ಳೋಣ. ಅದಕ್ಕಾಗಿ ಕ್ಷಮೆ ಯಾಚಿಸಬೇಕೆಂದು ಪಟ್ಟುಹಿಡಿಯಲೂಬಹುದು. ಆದರೆ ಹಾಗೆ ಎಷ್ಟು ದಿನಗಳವರೆಗೂ ಪಟ್ಟುಹಿಡಿಯಬಹುದು? ಅದಕ್ಕೂ ಒಂದು ಮಿತಿ ಎಂಬುದು ಇರಬೇಕಲ್ಲವೆ? ಸದನದಲ್ಲಿ ಎಷ್ಟೋ ಮಹತ್ವದ ವಿಷಯಗಳ ಬಗೆಗೆ ಚರ್ಚೆ ನಡೆಯುವುದಿರುತ್ತದೆ. ಈ ರೀತಿ ಕ್ಷಮೆ ಕೇಳಲಿಲ್ಲವೆಂದು ಸದನವನ್ನು ಮುಂದೂಡುವುದನ್ನೋ ಇಲ್ಲ ಸದನ ನಡೆಯದಂತೆ ಗಲಭೆ ಎಬ್ಬಿಸುವುದನ್ನೋ ನಿರಂತರವಾಗಿ ಮಾಡುತ್ತಲೇ ಹೋದರೆ ಬಡ ತೆರಿಗೆದಾರನ ಹಣದ ದುರ್ವ್ಯಯ ಆದಂತೆ ಆಗುವುದಿಲ್ಲವೇ? ಅಷ್ಟರಮಟ್ಟಿಗೆ ದೇಶಕ್ಕೂ ಅದೊಂದು ಕಪ್ಪುಚುಕ್ಕೆ ಮತ್ತು ಹಿನ್ನಡೆಯೇ ಆಗುತ್ತದೆ.

ಯಾವುದೇ ವಿಷಯದ ಬಗ್ಗೆ ಪಟ್ಟುಹಿಡಿಯುವುದಕ್ಕೂ ಒಂದು ಮಿತಿ ಇರಬೇಕಲ್ಲವೆ? ಈಗಾಗಲೇ ಎಷ್ಟೆಲ್ಲಾ ಒತ್ತಾಯಿಸಿದರೂ ಕ್ಷಮೆ ಕೇಳದಿರುವವರ ಬಗ್ಗೆ ಮತ್ತು ಕ್ಷಮೆಗಾಗಿ ಒತ್ತಾಯಿಸುತ್ತಿರುವವರ ಬಗ್ಗೆ ಒಂದು ಸಾರ್ವಜನಿಕ ಅಭಿಪ್ರಾಯವಂತೂ ತನಗೆ ತಾನೇ ರೂಪುಗೊಂಡಿರುತ್ತದೆ. ಯಾವತ್ತೂ ಸಾರ್ವಜನಿಕರ ಅಭಿಪ್ರಾಯವೆಂಬುದು ಬಹಳ ಮಹತ್ವದ ಸಂಗತಿ. ಅದು ಮನಃಪೂರ್ವಕವಾಗಲ್ಲದೆ ಒತ್ತಾಯಕ್ಕೆ ಒಳಗಾಗಿ ಬರೀ ಶಬ್ದಗಳಲ್ಲಿ ಯಾಂತ್ರಿಕವಾಗಿ ಕ್ಷಮೆ ಕೋರುವುದಕ್ಕಿಂತಲೂ ಮಹತ್ವದ್ದು ಮತ್ತು ಹೆಚ್ಚು ಪರಿಣಾಮಕಾರಿಯಾದದ್ದು. ಆದರೆ ದುರ್ದೈವದ ಸಂಗತಿಯೆಂದರೆ, ನಮ್ಮ ಇಷ್ಟು ದೊಡ್ಡ ಸಂಸದೀಯ ಪ್ರಜಾಪ್ರಭುತ್ವದ ದೇಶದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಸಿಗಬೇಕಾದಷ್ಟು ಮರ್ಯಾದೆ, ಅದರ ಬಗೆಗೆ ಎಚ್ಚರ ರಾಜಕೀಯಸ್ಥರಲ್ಲಿ ಇನ್ನೂ ಬಂದೇ ಇಲ್ಲ ಎಂಬುದೇ ಕಟು ಸತ್ಯ.



ಯಾವುದೇ ಒಂದು ಸಂಗತಿಯನ್ನು ಪೂರ್ಣ ಸೂರ್ಯಗ್ರಹಣದಂತೆ ಅದು ಇಡೀ ಸದನದ ಕಲಾಪವನ್ನೆಲ್ಲಾ ನುಂಗಿಹಾಕುವ ಹಂತಕ್ಕೆ ಕೊಂಡೊಯ್ಯಬಾರದು ಎಂಬಷ್ಟು ವಿವೇಕ ಸದನದ ಒಳಗಿರುವ ಎಲ್ಲ ಸದಸ್ಯರಿಗೆ ಪಕ್ಷಾತೀತವಾಗಿ ಉದಯಿಸಿದಾಗಲೇ ನಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೊಂದು ಪಕ್ವತೆ ಬಂದಿತೆಂದು ನಿಟ್ಟುಸಿರು ಬಿಡಬಹುದೇನೋ. ಅದು ಕೂಡ ಬಹುಶಃ ಸಾಧ್ಯವಿಲ್ಲವೇನೋ. ಕಾರಣ, ಇನ್ನೇನು ಕರ್ನಾಟಕವು ಸದ್ಯದಲ್ಲೇ ವಿಧಾನಸಭಾ ಚುನಾವಣೆಗೆ ಹೋಗಲಿದೆ. ಮುಂದಿನ ವರ್ಷ ಇಡೀ ದೇಶ ಸಂಸತ್ ಸದಸ್ಯರನ್ನು ಆರಿಸಬೇಕಾಗಿದೆ.

ಚುನಾವಣಾ ನೀತಿ ಸಂಹಿತೆಯು ನಿಯಮದ ಪ್ರಕಾರ ಇನ್ನೂ ಜಾರಿಯಾಗಿಲ್ಲವೆಂಬುದರ ದುರುಪಯೋಗ (ಸದುಪಯೋಗ?) ಮಾಡಿಕೊಳ್ಳುತ್ತಿರುವ ವಿವಿಧ ರಾಜಕೀಯ ಪಕ್ಷಗಳು ಮತ್ತು ಅವುಗಳ ಸಂಭಾವ್ಯ ಹುದ್ದರಿಗಳು, ಮತದಾರರಿಗೆ ನಾನಾ ಥರದ ಆಮಿಷಗಳು, ಪ್ರಲೋಭನೆಗಳನ್ನು ಒಡ್ಡಲಾರಂಭಿಸಿರುವುದನ್ನು ನೋಡಿದರೆ, ಇನ್ನೂ ಈ ಪಕ್ವತೆ ಎಂಬುದು ಬರಬೇಕಾದರೆ ಅದಿನ್ನೆಷ್ಟು ವರ್ಷಗಳು ಬೇಕೋ ಎಂದು ನಿಟ್ಟುಸಿರು ಬಿಡುವುದೊಂದೇ ಮತದಾರನ ಹಣೆಬರಹವಾಗಿದೆ.

ವಾಚಕರ ವಾಣಿ

ಆಧಾರ್ ಲಿಂಕ್ ಮಾಡಿಸಲೇಕೆ ಶುಲ್ಕ?

ಬೇನಾಮಿ ಆಸ್ತಿ, ತೆರಿಗೆ ವಂಚನೆಯಂಥವುಗಳಿಗೆ ಕಡಿವಾಣ ಹಾಕಲು ಕೇಂದ್ರ ಸರ್ಕಾರವು ಪ್ಯಾನ್ ಕಾರ್ಡ್‌ಗೆ ಆಧಾರ್ ಲಿಂಕ್ ಮಾಡಿಸಲು ಸೂಚಿಸಿದೆ. ಮಾರ್ಚ್ 31ರೊಳಗೆ ಲಿಂಕ್ ಮಾಡಿಸದಿದ್ದರೆ ಪ್ಯಾನ್ ಕಾರ್ಡ್ ನಿಷ್ಕ್ರಿಯಗೊಳಿಸುವುದಾಗಿ ಆದಾಯ ತೆರಿಗೆ ಇಲಾಖೆ ಎಚ್ಚರಿಕೆ ನೀಡಿದೆ. ಆದರೆ, ಈ ಕಾರ್ಯಕ್ಕಾಗಿ ₹ 1,000 ಶುಲ್ಕ ನಿಗದಿಪಡಿಸಿರುವುದು ಎಷ್ಟು ಸರಿ? ತೆರಿಗೆ ವಂಚನೆಗೆ ಕಡಿವಾಣ ಹಾಕಲಾಗುತ್ತಿದೆಯೋ ಅಥವಾ ಜನರಿಂದ ಸುಲಿಗೆ ಮಾಡಲಾಗುತ್ತಿದೆಯೋ ಎಂಬ ಅನುಮಾನ ಮೂಡುತ್ತದೆ.

ಸಾಮಾನ್ಯ ಜನರು ದಿನನಿತ್ಯದ ವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ಬೇಸತ್ತಿದ್ದಾರೆ. ಹೀಗಿರುವಾಗ ಸರ್ಕಾರ ಯಾವುದೇ ಶುಲ್ಕವನ್ನು ತೆಗೆದುಕೊಳ್ಳದೆ ಜನರ ಸಮಸ್ಯೆಗೆ ಸ್ಪಂದಿಸಬೇಕು. ಸರ್ವರ್ ಸಮಸ್ಯೆಯನ್ನು ಸರಿಪಡಿಸಬೇಕು. ಲಿಂಕ್ ಮಾಡಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕವನ್ನು ವಿಸ್ತರಿಸಬೇಕು.

ರಾಜ ಮುಗಲಳ್ಳಿ, ಉಜ್ಜಯಿನ, ವಿಜಯನಗರ

ಹೆಣ್ಣುಮಕ್ಕಳ ಜೀವನ ಕತ್ತಲೆಗೆ ದೂಡುವ ಕೆಲಸ

ಹದಿನೆಂಟು ವರ್ಷವಾಗುವುದಕ್ಕೂ ಮೊದಲೇ 15 ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳು ತಾಯಂದಿರಾದ ಸುದ್ದಿ ತಿಳಿದು (ಪ್ರ.ವಾ., ಮಾರ್ಚ್ 22) ಬೇಸರವಾಯಿತು. ಕಾನೂನಿನಡಿ ನಿಗದಿಯಾಗಿರುವ ಮದುವೆಯ ವಯಸ್ಸಿಗಿಂತ ಮೊದಲೇ ಹೆಣ್ಣುಮಕ್ಕಳ ಜೀವನವನ್ನು ಕತ್ತಲೆಗೆ ದೂಡುವ ಕೆಲಸ ಈಗಲೂ ನಡೆಯುತ್ತಿರುವುದು ದುರದೃಷ್ಟಕರ. ಆಟವಾಡಿಕೊಂಡು, ಓದಿಕೊಂಡು ಇರಬೇಕಾದ ವಯಸ್ಸಿನ ಮಕ್ಕಳನ್ನು ಮದುವೆಯ ಹೆಸರಿನಲ್ಲಿ ಪಂಜರಕ್ಕೆ ದೂಡಿ, ಆ ಮೂಲಕ ಅವರ ಭವಿಷ್ಯ ಹಾಗೂ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮವನ್ನು ಸಮಾಜ ಮತ್ತು ಸರ್ಕಾರ ಕಂಡೂ ಕಾಣದಂತೆ ಇರುವುದು ವಿಷಾದಕರ. ಮಕ್ಕಳ ಮೇಲಾಗುವ ದೌರ್ಜನ್ಯ ತಡೆಯಲೆಂದೇ ನಿರ್ದಿಷ್ಟ ಇಲಾಖೆ ಹಾಗೂ ಅಧಿಕಾರಿಗಳು ಇದ್ದರೂ ಬಾಲ್ಯವಿವಾಹಗಳು ನಡೆಯುತ್ತಿವೆ. ಹಾಗಾದರೆ ಇಲಾಖೆ ಹಾಗೂ ಅಧಿಕಾರಿಗಳು ಏನು ಮಾಡುತ್ತಿದ್ದಾರೆ?

ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪ್ರಮುಖ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಸಮ್ಮುಖದಲ್ಲೇ ಬಾಲ್ಯವಿವಾಹ ನಡೆದ ಉದಾಹರಣೆಗಳು ಇವೆ. ಆದಕಾರಣ ಇಂತಹ ಪ್ರಕರಣ ನಡೆದರೆ ಸಂಬಂಧಿಸಿದ ಪ್ರದೇಶದ ಅಧಿಕಾರಿಗಳ ವಿರುದ್ಧ ಕಠಿಣವಾದ ಕಾನೂನು ಕ್ರಮ ಜರುಗಿಸಬೇಕು. ಆಗಮಾತ್ರ ಬಾಲ್ಯವಿವಾಹ ಹಾಗೂ ಪುಟ್ಟ ಹೆಣ್ಣುಮಕ್ಕಳ ತಾಯ್ತನದ ಪ್ರಕರಣಗಳನ್ನು ತಡೆಯಬಹುದು.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಸತ್ಯಾಸತ್ಯತೆ ಅರಿಯುವ ಕೆಲಸವಾಗಲಿ

ಉರಿಗೌಡ, ನಂಜೇಗೌಡರ ಬಗ್ಗೆ ಹೇಳಿಕೆ ನೀಡುತ್ತಿರುವ ರಾಜಕೀಯ ಮುಖಂಡರ ಬಳಿ ಟಿಪ್ಪು ಸುಲ್ತಾನರ ಸಮಕಾಲೀನ ಇತಿಹಾಸಕಾರರ ಹೇಳಿಕೆಗಳಾಗಲಿ ಅಥವಾ ಶಾಸನದ ದಾಖಲೆಗಳಾಗಲಿ ಇದ್ದರೆ ಅವುಗಳನ್ನು ಮಠಕ್ಕೆ ತಂದುಕೊಡಲಿ, ಅವುಗಳನ್ನು ಕೂಲಂಕಷವಾಗಿ ಪರಾಮರ್ಶಿಸಿ, ನಂತರ ಸತ್ಯಾಸತ್ಯತೆಯನ್ನು ತಿಳಿಸಲಾಗುವುದು ಎಂದು ಆದಿಚುಂಚನಗಿರಿ ಮಠಾಧೀಶರು ಹೇಳಿಕೆ ನೀಡಿರುವುದು ಸರಿಯಾಗಿದೆ. ಹೀಗಿದ್ದರೂ ಅವರ ಹೇಳಿಕೆಯನ್ನು ಅರ್ಥ ಮಾಡಿಕೊಳ್ಳದಷ್ಟು ಪ್ರವೀಣರು ನಮ್ಮ ಸಮಾಜದಲ್ಲಿ ಇರುವುದನ್ನು ನೋಡಿ ಮರುಕವೆನಿಸುತ್ತದೆ.

ಇಷ್ಟಕ್ಕೂ ದೇ. ಜವರೇಗೌಡರು ನನಗೆ ತಿಳಿದಂತೆ ಇತಿಹಾಸಕಾರರಲ್ಲ. ಅದು ಗೊತ್ತಿದ್ದೂ ಕೆಲವು ಮುಖಂಡರು ಬಾಯಿಗೆ ಬಂದಂತೆ ಹೇಳಿಕೆ ನೀಡುವುದು ಅವರ ನಡತೆಗೆ ತಕ್ಕುದಲ್ಲ.

ಗೌಡಯ್ಯ, ಮೈಸೂರು

ಪ್ರಾಧ್ಯಾಪಕರ ನೇಮಕಕ್ಕೂ ತೋರಲಿ ಉತ್ಸಾಹ

ದೇಶದ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (ಐಐಟಿ ಮತ್ತು ಎನ್‌ಐಟಿ) ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇರುವ ಬಗ್ಗೆ ಸಂಪಾದಕೀಯ ಕಳವಳ ವ್ಯಕ್ತಪಡಿಸಿದೆ (ಪ್ರ.ವಾ., ಮಾರ್ಚ್ 22). ಸರ್ಕಾರವೇನೋ ಗುಣಮಟ್ಟದ ಶಿಕ್ಷಣದ ಬಗ್ಗೆ, ಜಾಗತಿಕ ಗುಣಮಟ್ಟದ ಬಗ್ಗೆ ಮಾತನಾಡುತ್ತಿದೆ. ಆದರೆ ಪ್ರಾಧ್ಯಾಪಕರ ಹುದ್ದೆಗಳು ಖಾಲಿಯಿದ್ದರೆ ಯಾವ ಬಗೆಯ ಗುಣಮಟ್ಟದ ಶಿಕ್ಷಣ ಸಾಧ್ಯ? ಇದೇ ರೀತಿಯಲ್ಲಿ ಕರ್ನಾಟಕದ ವಿಶ್ವವಿದ್ಯಾಲಯಗಳು ಮತ್ತು ಪ್ರಥಮದರ್ಜೆ ಕಾಲೇಜುಗಳಲ್ಲಿ ದಂಡಿಯಾಗಿ ಪ್ರಾಧ್ಯಾಪಕರ ಹುದ್ದೆಗಳು ಖಾಲಿಯಿವೆ. ಅನೇಕ ವಿಶ್ವವಿದ್ಯಾಲಯಗಳಲ್ಲಿನ ಕೆಲವು ವಿಭಾಗಗಳಲ್ಲಿ ಕಾಯಂ ಪ್ರಾಧ್ಯಾಪಕರೇ ಇಲ್ಲ.

ಸರ್ಕಾರಿ ಕಾಲೇಜುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಅತಿಥಿ ಉಪನ್ಯಾಸಕರಿದ್ದಾರೆ. ಇವರು ಎರಡು– ಮೂರು ಕಾಲೇಜುಗಳಲ್ಲಿ ಅರೆಬರೆ ಸಂಭಾವನೆಗೆ ಕೆಲಸ ಮಾಡುತ್ತಿರುತ್ತಾರೆ. ಇವರು ಹೇಗೆ ಗುಣಮಟ್ಟದ ಬೋಧನೆ ನೀಡಲು ಸಾಧ್ಯ? ಸರ್ಕಾರವು ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸುವುದರಲ್ಲಿ ತೋರುತ್ತಿರುವ ಉತ್ಸಾಹ, ಕಾಳಜಿಯನ್ನು ಅಲ್ಲಿ ಪ್ರಾಧ್ಯಾಪಕರನ್ನು ನೇಮಿಸುವ ಬಗ್ಗೆ ತೋರುತ್ತಿಲ್ಲ. ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಲ್ಲಿ ಶೇ 52.49ರಷ್ಟು ಹುದ್ದೆಗಳು ಖಾಲಿಯಿವೆ. ಪ್ರಾಧ್ಯಾಪಕರ ಹುದ್ದೆಗಳನ್ನು ಖಾಲಿಯಿಟ್ಟುಕೊಂಡು ಉನ್ನತ ಗುಣಮಟ್ಟದ ಶಿಕ್ಷಣ ಎನ್ನುವುದು ಒಂದು ಭ್ರಮೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಪಕ್ಷಾಂತರ ನಿಷೇಧ ಕಾನೂನು ಬಲಗೊಳ್ಳಲಿ

ನಮ್ಮ ಜನಪ್ರತಿನಿಧಿಗಳು ಸಾಮೂಹಿಕವಾಗಿ ಪಕ್ಷಾಂತರ ಮಾಡುವುದನ್ನು ತಡೆಯುವಲ್ಲಿ ಪಕ್ಷಾಂತರ ನಿಷೇಧ ಕಾನೂನು ಸಂಪೂರ್ಣವಾಗಿ ಸೋತಿದೆ. ಇದರಿಂದಾಗಿ, ಜನಾದೇಶ ಎಂಬುದು ಕಿಮ್ಮತ್ತು ಕಳೆದುಕೊಳ್ಳುತ್ತಿದೆ. ಈ ಬಗೆಯ ಪಕ್ಷಾಂತರಗಳನ್ನು ತಡೆಯಲು ಕಾನೂನಿಗೆ ತಿದ್ದುಪಡಿ ತರಬೇಕು ಎಂದು ವೆಂಕಯ್ಯ ನಾಯ್ಡು ಇತ್ತೀಚೆಗೆ ಹೇಳಿದ್ದಾರೆ. ಈ ದಿಸೆಯಲ್ಲಿ ಗಂಭೀರವಾಗಿ ಚಿಂತಿಸಲು ಇದು ಸಕಾಲ. ಪಕ್ಷಭೇದ ಮರೆತು ನಮ್ಮ ರಾಜಕಾರಣಿಗಳು ಈ ಕುರಿತು ಯೋಚಿಸಬೇಕಾಗಿದೆ. ಗೆದ್ದ ನಂತರ ನಮ್ಮ ಪ್ರತಿನಿಧಿಗಳು ಪಕ್ಷಾಂತರ ಮಾಡುವುದನ್ನು ತಡೆಯುವುದು ಅಗತ್ಯ.

ಮಹೇಶ ಕೇವಂಟಗಿ ಕುಮಸಿ, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜನಮಂಗಳಕ್ಕೆ ಶ್ರಮಿಸಿದ ಸರ್ವ ಸಮುದಾಯಗಳ ಸಂತ



ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಬಾಹುಬಲಿಗೆ ಪಾದಪೂಜೆ ಮಾಡಿದ್ದ ಸ್ವಾಮೀಜಿ

ಮಜ್ಜನಕ್ಕೆ ಆಧುನಿಕ ಸ್ಪರ್ಶ

ಹಾಸನ: ಶ್ರವಣಬೆಳಗೊಳ ಎಂದರೆ ನೆನಪಾಗುವುದು ಬಾಹುಬಲಿಯ ಮಹಾನ್ ಮೂರ್ತಿ ಹಾಗೂ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ. ಅವರು, 12 ವರ್ಷಗಳಿಗೊಮ್ಮೆ ಬಾಹುಬಲಿಗೆ ನಡೆಯುವ ಮಹಾಮಸ್ತಕಾಭಿಷೇಕಕ್ಕೆ ಆಧುನಿಕತೆಯ ಸ್ಪರ್ಶ ಕೊಟ್ಟವರು. ಅವರ ನೇತೃತ್ವದಲ್ಲೇ 4 ಮಹಾಮಸ್ತಕಾಭಿಷೇಕಗಳು ಅಚ್ಚುಕಟ್ಟಾಗಿ ನೆರವೇರಿವೆ. 1970ರಲ್ಲಿ ಶ್ರವಣಬೆಳಗೊಳ ಮಠದ ಪೀಠಾಧಿಪತಿಯಾದ ಸ್ವಾಮೀಜಿ, 1981ರಲ್ಲಿ ನಡೆದ ಗೊಮ್ಮಟೇಶ್ವರನ ಸಹಸ್ರಾಬ್ದಿ ಮಹಾಮಸ್ತಕಾಭಿಷೇಕವನ್ನು ಯಶಸ್ವಿಯಾಗಿ ನೆರವೇರಿಸಿದ್ದರು. ಕಾಲ ಕಳೆದಂತೆ ಮಹಾಮಸ್ತಕಾಭಿಷೇಕದ ವೀಕ್ಷಣೆ, ಆಯೋಜನೆಯಲ್ಲಿ ತಮ್ಮದೇ ಆದ ವಿಶಿಷ್ಟ ಯೋಚನೆಗಳ ಮೂಲಕ ಮಹತ್ತರ ಬದಲಾವಣೆ ತಂದಿದ್ದರು.

ಮೊದಲಿಗೆ, ಮಹಾಮಸ್ತಕಾಭಿಷೇಕಕ್ಕೆ ಬಂದವರಿಗೆ ತಂಗಲು ತೆಂಗಿನಗರಿಯ ಕುಟೀರಗಳಿರುತ್ತಿದ್ದವು. ನಂತರ, ಬಿದಿರಿನ ಚಾಪೆಯ ಕುಟೀರಗಳು ಬಂದವು. 1981ರ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಬಟ್ಟೆಯ ಟೆಂಟ್, ಟಾರ್ಪಾಲಿನ ಟೆಂಟ್‌ಗಳು ಬಂದವು. 1993ರಲ್ಲಿ ಸ್ವಿಸ್ ಮಾದರಿಯ ಕಾಟೇಜ್‌ಗಳನ್ನು ನಿರ್ಮಿಸಲಾಗಿತ್ತು. 2006ರ ಹೊತ್ತಿಗೆ ಥಿಂಕ್ ಶೀಟ್ ಕಾಟೇಜ್ ಬಂತು. 2018ರಲ್ಲೂ ಸುಧಾರಿತ ವಿನ್ಯಾಸದ ಕುಟೀರಗಳನ್ನು ನಿರ್ಮಿಸಲಾಗಿತ್ತು.

2018ರಲ್ಲಿ ವಿಶೇಷ ತಂತ್ರಜ್ಞಾನದ ಅಟ್ಟಳಿಗೆಗಳನ್ನು ನಿರ್ಮಿಸಿದ್ದು ವಿಶೇಷ.

'ಮೂರ್ತಿಗೆ ಜಿಡ್ಡು ಅಂಟುತ್ತದೆ' ಎಂಬ ಕಾರಣಕ್ಕೆ ತುಪ್ಪ, ಮೊಸರಿನ ಅಭಿಷೇಕವನ್ನು ನಿಲ್ಲಿಸಿದ್ದು, ಸಂಪ್ರದಾಯಕ್ಕೆ ಚ್ಯುತಿ ಬರದಂತೆ ಮೂರ್ತಿಯ ಪದತಲದಲ್ಲಿರುವ ಪಂಚಲೋಹದ ಪ್ರತಿಬಿಂಬಕ್ಕೆ ಅದೇ ಅಭಿಷೇಕ ಮಾಡುವ ಪದ್ಧತಿಯನ್ನು ಸ್ವಾಮೀಜಿ ರೂಪಿಸಿದ್ದರು.

ಫೋನ್‌ನಿಂದ ದೂರ

ಆಧುನಿಕತೆಗೆ ಒಗ್ಗಿಗೊಂಡಿದ್ದರೂ ಸ್ವಾಮೀಜಿ 2006ರಿಂದ ಈವರೆಗೆ ಫೋನ್ ಅಥವಾ ಮೊಬೈಲ್‌ನಲ್ಲಿ ಮಾತನಾಡಿಲ್ಲ. ಅವರನ್ನು ಮಾತನಾಡಿಸಲು ನೇರವಾಗಿ ಭೇಟಿ ಮಾಡಬೇಕಿತ್ತು. 2001ರಲ್ಲಿ ವಿಜಯಪುರದಲ್ಲಿ ನಡೆದ ಚಾತುರ್ಮಾಸ್ಯದಿಂದ ಮರಳಿದ ಬಳಿಕ ಅವರು, 12 ವರ್ಷಗಳ ಕಾಲ, ವಾಹನ ಸಂಚಾರವನ್ನೇ ತ್ಯಜಿಸಿದ್ದರು.


● ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಮೂಡುಬಿದಿರೆ ಜೈನಮಠ

ಶ್ರವಣಬೆಳಗೊಳದ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು, ಜೈನ ಧರ್ಮದ ಜತೆಗೆ ಸರ್ವ ಧರ್ಮ ಸಮನ್ವಯ ಸಾಧಿಸುವಲ್ಲಿ ಆದರ್ಶಪ್ರಾಯರು. ಅವರು ಎಲ್ಲ ಸಮುದಾಯಗಳಿಗೆ ಸಂತರು, ಎಲ್ಲ ಸ್ವಾಮೀಜಿಗಳಿಗೆ ಮಾದರಿಯಾದವರು.

1949ರ ಮೇ 3ರಂದು ಕಾರ್ಕಳ ತಾಲ್ಲೂಕಿನ ವರಾಂಗದಲ್ಲಿ ಹುಟ್ಟಿದ ಸ್ವಾಮೀಜಿ ಎಳೆ ವಯಸ್ಸಿನಲ್ಲೇ ದೀಕ್ಷೆ ಪಡೆದವರು. ಸಣ್ಣ ವಯಸ್ಸಿನಲ್ಲಿ ದೊಡ್ಡ ಜವಾಬ್ದಾರಿ ನಿಭಾಯಿಸಿದವರು. ಅಯೋಧ್ಯೆ ರಥ ಸಂಚಾರದ ಮಾದರಿಯಲ್ಲಿ 'ಜನಮಂಗಳ ಕಲಶ' ಸಂಚಾರದ ಬಹುದೊಡ್ಡ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಿದವರು. ಕ್ರಿ.ಶ. 981ರಲ್ಲಿ ಸ್ಥಾಪನೆ ಆಗಿರುವ ಬಾಹುಬಲಿ ಮೂರ್ತಿಯ ಮಹಾಮಜ್ಜನ ಮಹೋತ್ಸವಕ್ಕೆ (1981ನೇ ಇಸ್ವಿ) ಅಂತರರಾಷ್ಟ್ರೀಯ ಮನ್ನಣೆ ತಂದುಕೊಟ್ಟ ಅವರ ಸಂಘಟನಾ ಚಾತುರ್ಯ ಮನಗಂಡ ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ಪೂಜ್ಯರಿಗೆ 'ಕರ್ಮಯೋಗಿ' ಎಂಬ ಉಪಾಧಿಯನ್ನು ನೀಡಿದ್ದರು.

ನಾವು ಬಾಲ್ಯದಲ್ಲಿ ಮೂಡುಬಿದಿರೆ ಮಠದಲ್ಲಿ ಅವರನ್ನು ಭೇಟಿ ಮಾಡಿದ್ದೆವು. 1988ರಲ್ಲಿ ಕಾರ್ಕಳದಲ್ಲಿ ಮಹಾಮಸ್ತಕಾಭಿಷೇಕ. ಆಗ ನಾವೆಲ್ಲ ಚಿಕ್ಕ ಮಕ್ಕಳು. ನಮಗೆಲ್ಲ ಅವರು ಧವಲಾ ಗ್ರಂಥದ ಬಗ್ಗೆ ತಿಳಿ ಹೇಳಿದ್ದರು. ಧವಲಾ ಗ್ರಂಥವನ್ನು ಆಧುನಿಕ ಕನ್ನಡಕ್ಕೆ ಅನುವಾದ ಮಾಡಿದವರು ಸುಬ್ಬಯ್ಯ ಶಾಸ್ತ್ರಿಗಳು. ಸುಬ್ಬಯ್ಯ ಶಾಸ್ತ್ರಿಗಳ ಮೊಮ್ಮಗನೆಂದು ನನಗೆ ವಿಶೇಷ ಪ್ರೀತಿ ತೋರಿದರು. ಧವಲಾ ಗ್ರಂಥವನ್ನು ಓದಿಕೊಂಡಿದ್ದ ಸ್ವಾಮೀಜಿ, ನಂತರ ಧವಲಾ ಯೋಜನೆಯಡಿಯಲ್ಲಿ 39 ಸಂಪುಟಗಳನ್ನು ಹೊರತರುವಲ್ಲಿ ಶ್ರಮಿಸಿದರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಪ್ರಾಕೃತ ಭಾಷಾ ಸಮ್ಮೇಳನ, ಸಂಸ್ಕೃತ ಸಮ್ಮೇಳನ, ವಿದ್ವತ್ ಗೋಷ್ಠಿ ಹೀಗೆ ಎಲ್ಲಕ್ಕೂ ಪ್ರೋತ್ಸಾಹ ನೀಡುವ ಜತೆಗೆ ಸಂಘಟನೆಗೆ ಸಹಕಾರ ಮಾಡುತ್ತಿದ್ದರು. ಲಂಡನ್ ವಿಶ್ವವಿದ್ಯಾಲಯದಲ್ಲಿ ಜೈನ ಅಧ್ಯಯನ ಕೇಂದ್ರ ಸ್ಥಾಪನೆಗೆ ಪ್ರೇರಕರು. ಅಮೆರಿಕದಲ್ಲಿ ನಡೆಯುವ ದ್ವೈವಾರ್ಷಿಕ ಸಭೆಗೆ ಮಾರ್ಗದರ್ಶಕರಾಗಿದ್ದರು.

ಸರ್ವಧರ್ಮ ಸಮನ್ವಯಕ್ಕಾಗಿ ಹಲವಾರು ಕಡೆಗಳಲ್ಲಿ ಪ್ರವಾಸ ಮಾಡಿದ್ದರು, ವಿದೇಶ ಪ್ರವಾಸಕ್ಕೂ ಹೋಗಿದ್ದರು. 'ವಿದೇಶದಲ್ಲಿ ಏನೂ ಇಲ್ಲ, ನಾವಿಲ್ಲಿ ಮಾಡಬೇಕಾದ ಕೆಲಸಗಳು ಸಾಕಷ್ಟಿವೆ' ಎಂದು ಸ್ವಾಮೀಜಿ ಯಾವಾಗಲೂ ಹೇಳುತ್ತಿದ್ದರು. ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲಿ ಅಹರ್ನಿಶಿ ದುಡಿದರು. ವಿಶೇಷವಾಗಿ ಪ್ರಾಥಮಿಕ ಶಿಕ್ಷಣ, ಎಂಜಿನಿಯರಿಂಗ್ ಕಾಲೇಜು, ನರ್ಸಿಂಗ್ ಕಾಲೇಜಿನ ಸ್ಥಾಪನೆ ಮಾಡಿ ಶೈಕ್ಷಣಿಕ ಕ್ರಾಂತಿ ಮಾಡಿದರು. ಜನರ



ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

ಆರೋಗ್ಯ ಕಾಳಜಿಗಾಗಿ ಸಂಚಾರಿ ಆಸ್ಪತ್ರೆ ಯೋಜನೆ ರೂಪಿಸಿದರು.

ಪ್ರತಿ ಮಹಾಮಸ್ತಕಾಭಿಷೇಕವನ್ನೂ ಜನರಿಗೆ ಪ್ರಿಯವಾಗುವ ಹಾಗೆ, ಜನರ ಮನತಟ್ಟುವ ಹಾಗೆ, ಲೋಕಪ್ರಿಯ ಆಗುವ ಹಾಗೆ ಮಾಡುತ್ತಿದ್ದರು. ಮಹಾಮಸ್ತಕಾಭಿಷೇಕ ಕೇವಲ ಆಧ್ಯಾತ್ಮಿಕವಲ್ಲ, ಅದಕ್ಕೆ ಸಾಮಾಜಿಕ ಆಯಾಮಗಳಿವೆ ಎಂಬುದು ಸ್ವಾಮೀಜಿಯವರ ನಂಬಿಕೆಯಾಗಿತ್ತು. ಯಾವುದೇ ಒಂದು ಕಾರ್ಯ ಇರಲಿ ಅದರಿಂದ ಜನಮಂಗಳ ಎಂಬುದು ಅವರ ಆಶಯವಾಗಿತ್ತು. ಸದಾ ಅಭಿವೃದ್ಧಿ ಪಥದ ಬಗ್ಗೆ ಯೋಚನೆ ಮಾಡುತ್ತಿದ್ದರು. ಶ್ರವಣಬೆಳಗೊಳದ ವಿಕಾಸ ಅಂದರೆ ಅದು ಅಲ್ಲಿಗಷ್ಟೇ ಸೀಮಿತವಲ್ಲ, ಅದರಿಂದಾಗಿ ಇಡೀ ಕರ್ನಾಟಕ ಬೆಳಗಬೇಕು ಎಂಬ ದೂರದೃಷ್ಟಿ ಹೊಂದಿದ್ದರು. ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಅವರು ರೂಪಿಸಿದ ಅನೇಕ ಅಭಿವೃದ್ಧಿ ಯೋಜನೆಗಳು ಈಗಲೂ ಅಲ್ಲಿನ ಸಾರ್ವಜನಿಕರಿಗೆ ಅನುಕೂಲವಾಗಿವೆ.

ಸಾಹಿತ್ಯದ ಬಗ್ಗೆ ಅಪಾರ ಪ್ರೀತಿ ಇತ್ತು. ಕತೆ, ಕಾದಂಬರಿ ಬರೆಯಲು ಅನೇಕರನ್ನು ಪ್ರೇರೇಪಿಸುತ್ತಿದ್ದರು. ಕುವೆಂಪು, ಕಾರಂತರು, ಜೆ.ಪಿ.ರಾಜರತ್ನಂ ಇಂತಹ ಅನೇಕ ಬರಹಗಾರರನ್ನು ಮೆಚ್ಚಿದ್ದರು. ವಿದ್ವಾಂಸರು, ಸಾಹಿತಿಗಳನ್ನು ತುಂಬ ಗೌರವಿಸುತ್ತಿದ್ದರು. 'ಪ್ರಜಾವಾಣಿ' ಪತ್ರಿಕೆ ಬಗ್ಗೆ ಅವರಿಗೆ ವಿಶೇಷ ಅಭಿಮಾನ ಇತ್ತು. ಪತ್ರಿಕೆಯಲ್ಲಿ ಪ್ರಕಟವಾದ ಈ ಹಿಂದೆ ನಡೆದ ಮಹಾ ಮಸ್ತಕಾಭಿಷೇಕದ ಎಲ್ಲ ವರದಿಗಳನ್ನು ಜತನದಿಂದ ಸಂಗ್ರಹಿಸಿಟ್ಟಿದ್ದಾರೆ. ಪತ್ರಿಕೆಗಳನ್ನು ಖರೀದಿಸಿ ಓದುತ್ತಿದ್ದರು. ಅದಕ್ಕಾಗಿ ಒಂದು ವಿಭಾಗವೇ ಇತ್ತು. 'ಗೊಮ್ಮಟವಾಣಿ' ಪತ್ರಿಕೆಯ ಏಳಿಗೆಗೆ ಅವರೇ ಕಾರಣರು. ಇಂಗ್ಲಿಷ್ ಭಾಷೆಯಲ್ಲಿ 'ಗೊಮ್ಮಟವಾಣಿ' ಪ್ರಕಟಣೆಗೆ ಪ್ರೋತ್ಸಾಹ ನೀಡಿದರು.

ಪೇಜಾವರ ಸ್ವಾಮೀಜಿ, ತುಮಕೂರು ಸಿದ್ದಗಂಗಾ ಸ್ವಾಮೀಜಿ, ತರಳಬಾಳು ಸ್ವಾಮೀಜಿ ಹೀಗೆ ಅನೇಕ ಸ್ವಾಮೀಜಿಗಳ ಜತೆಗೆ ಒಡನಾಟ ಇತ್ತು. ಹಿಂದೂ, ಮುಸ್ಲಿಂ, ಕ್ರೈಸ್ತ ಎಂಬ ಭೇದ-ಭಾವ ಇಲ್ಲದೆ ಸರ್ವಧರ್ಮ ಸಮನ್ವಯದ ಬಗ್ಗೆ ಮಾತನಾಡುತ್ತಿದ್ದರು. 'ನಾವು ಹುಟ್ಟಿ ಬಂದಿದ್ದು ಜಗತ್ತಿನ ಶ್ರೇಯಸ್ಸಿಗಾಗಿ. ಆ ಕೆಲಸವನ್ನು ಮಾಡಬೇಕು' ಎಂದು ಸದಾ ಹೇಳುತ್ತಿದ್ದರು. ಪಶು-ಪಕ್ಷಿ, ಪ್ರಾಣಿಗಳ ಬಗೆಗೆ ಕಾಳಜಿ ಇತ್ತು. ಅಂತರ್ಜಲ ಸಂರಕ್ಷಣೆಗೆ ಯೋಜನೆ ರೂಪಿಸಿದ್ದರು. ಜ್ಞಾನದಾಹಿ ಅವರು. ಯಾವಾಗಲೂ ಗ್ರಂಥಗಳು, ಪೂಜಾ ಕ್ರಮಗಳ ಬಗ್ಗೆ ಚರ್ಚಿಸುತ್ತಿದ್ದರು. ಸಾಧು ಸಂತರ ರಕ್ಷಣೆ ಬಗ್ಗೆ ಮಾತನಾಡುತ್ತಿದ್ದರು.

ಸಾಮಾಜಿಕ ಕಾರ್ಯದ ತುಡಿತ ಸದಾ ಇತ್ತು. ಮೂಡುಬಿದಿರೆ ಬಗ್ಗೆ ವಿಶೇಷ ಆಸ್ಥೆ. ಯಾವುದಾದರೂ ಕೆಲಸ ಆಗಬೇಕೆಂದರೆ ನಿಗದಿತ ಅವಧಿಯಲ್ಲಿ ಅದು ಪೂರ್ಣಗೊಳ್ಳಬೇಕು. ಮೂಡುಬಿದಿರೆಯಲ್ಲಿ ಪಿಯು ಕಾಲೇಜು ಪ್ರಾರಂಭಿಸಲು ತಾಕೀತು ಮಾಡಿದ್ದರು. 2012ರಲ್ಲಿ ಅವರ ಇಚ್ಛೆಯಂತೆ ಕಾಲೇಜು ಸ್ಥಾಪನೆ ಮಾಡಿದೆವು. ಕಾಲೇಜಿಗೆ ಬಂದ ಅವರು ತುಂಬ ಸಂತಸಪಟ್ಟರು.

ಆಚಾರ್ಯ ವಿದ್ಯಾಸಾಗರರಿಂದ ಸಲ್ಲೇಖನವನ್ನು ಸ್ವೀಕರಿಸಿದ್ದರು. ಅದು 12 ವರ್ಷಗಳ ಸಲ್ಲೇಖನ ವ್ರತವಾಗಿತ್ತು. ವ್ರತವನ್ನು ಸ್ವೀಕರಿಸಿ ಈಗ ಮೂರು ವರ್ಷ ಆಗಿತ್ತು ಅಷ್ಟೆ.

ರಾಜ್ಯದ ಜೈನ ಮಠಗಳ ಪಟ್ಟಾಚಾರ್ಯ ಪೀಠಗಳು ಖಾಲಿ ಇದ್ದಾಗ, 12 ಭಟ್ಟಾರಕರಿಗೆ ದೀಕ್ಷೆ ಕೊಟ್ಟು, ಮಠಗಳನ್ನು ಉದ್ಧಾರ ಮಾಡಿದರು. ಅಲ್ಲಿ ಧರ್ಮ ಸಂಚಲನ ಮಾಡಿದರು. ರಾಜ್ಯದಲ್ಲಿ, ದೇಶದಲ್ಲಿ ಅತಿವೃಷ್ಟಿ, ಅನಾವೃಷ್ಟಿ ಆದಾಗ ಅದಕ್ಕೆ ಸ್ಪಂದಿಸಿ, ದಾನಿಗಳ ಮೂಲಕ ನೆರವಾದರು. ಒಬ್ಬ ಶ್ರೇಷ್ಠ ಸಂತನನ್ನು ನಾವು ಕಳೆದುಕೊಂಡಿದ್ದೇವೆ ಎಂಬ ಅನಾಥ ಭಾವ ಕಾಡುತ್ತಿದೆ. ಆದರೆ, ಅವರ ಆದರ್ಶಗಳು ನಮ್ಮ ಜೊತೆಗಿವೆ, ಅದರೊಂದಿಗೆ ನಾವು ಸಾಗೋಣ.

ನಿರೂಪಣೆ: ಸಂಧ್ಯಾ ಹೆಗಡೆ

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಿಧನ

ಒಂದನೇ ಪುಟದಿಂದ...

ಪಾರ್ಥಿವ ಶರೀರವನ್ನು ಮಧ್ಯಾಹ್ನ 1.30ಕ್ಕೆ ಶ್ರವಣಬೆಳಗೊಳ ಮಠಕ್ಕೆ ತಂದು ಚಾವುಂಡರಾಯ ಸಭಾಂಗಣದಲ್ಲಿ ಅಂತಿಮದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವಿವಿಧೆಡೆಯಿಂದ ಬಂದಿದ್ದ ಸಹಸ್ರಾರು ಭಕ್ತರು ಅಂತಿಮ ನಮನ ಸಲ್ಲಿಸಿದರು. ಸಂಜೆ 4.30ಕ್ಕೆ ಮೆರವಣಿಗೆ ನಡೆಸಲಾಯಿತು. ಶ್ರವಣಬೆಳಗೊಳದ ಚಂದ್ರಗಿರಿಯ ಚಿಕ್ಕಬೆಟ್ಟಕ್ಕೆ ಹೊಂದಿಕೊಂಡಿರುವ ತಾವರೆಕಟ್ಟೆ ಬೋಳುಬೆಟ್ಟದಲ್ಲಿ ಸರ್ಕಾರಿ ಗೌರವಗಳೊಂದಿಗೆ ದಿಗಂಬರ ಜೈನ ಸಂಪ್ರದಾಯದಂತೆ ಅಂತ್ಯಸಂಸ್ಕಾರ ನಡೆಯಿತು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಧರ್ಮಸ್ಥಳದ ಸುರೇಂದ್ರಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅಂತಿಮ ದರ್ಶನ ಪಡೆದರು.

ಸಾಗರದ ಆಗಮ ಕೀರ್ತಿ ಉತ್ತರಾಧಿಕಾರಿ



ಶ್ರವಣಬೆಳಗೊಳ ಜೈನ ಮಠದ ಉತ್ತರಾಧಿಕಾರಿಯಾಗಿ ಶಿವಮೊಗ್ಗ ಜಿಲ್ಲೆಯ ಸಾಗರದ ಆಗಮ ಕೀರ್ತಿ ಅವರನ್ನು ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಾಲ್ಕು ತಿಂಗಳ ಹಿಂದೆಯೇ ನೇಮಿಸಿದ್ದರು.

ಎರಡು ದಿನದ ಹಿಂದಷ್ಟೇ ಕ್ಷೇತ್ರದ ಹಿರಿಯರನ್ನು ಮಠಕ್ಕೆ ಕರೆಸಿದ್ದ ಸ್ವಾಮೀಜಿ, 'ಆಗಮ ಕೀರ್ತಿಗಳನ್ನು ಉತ್ತರಾಧಿಕಾರಿಯಾಗಿ ನೇಮಿಸಲಾಗಿದೆ. ನನ್ನ ಆರೋಗ್ಯ ಸರಿ ಉಳಿಯುತ್ತಿಲ್ಲ. ಹೀಗಾಗಿ ಅವರನ್ನೇ ಮುಂದುವರಿಸಬೇಕು' ಎಂದು ತಿಳಿಸಿದ್ದರು. 'ಆಗಮ ಕೀರ್ತಿ ಅವರನ್ನು ಉತ್ತರಾಧಿಕಾರಿಯಾಗಿ ಮಾಡಲಾಗುತ್ತಿದ್ದು, ಪಟ್ಟಾಧಿಕಾರ ಮಹೋತ್ಸವ ಮುಂದಿನ ದಿನಗಳಲ್ಲಿ ನಡೆಯಲಿದೆ' ಎಂದು ಮಠದ ಮೂಲಗಳು ತಿಳಿಸಿವೆ.

ಶ್ರದ್ಧಾಂಜಲಿ, ಅಂಗಡಿ ಬಂದ್

ಸ್ವಾಮೀಜಿ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಶ್ರವಣಬೆಳಗೊಳದಲ್ಲಿ ಗಾಢಮೌನ ಆವರಿಸಿತು. ಅಂಗಡಿಗಳನ್ನು ಬಂದ್ ಮಾಡಿದ ವರ್ತಕರು, ನಾಗರಿಕರು ಶ್ರದ್ಧಾಂಜಲಿ ಸಲ್ಲಿಸಿದರು. ಅಂತಿಮ ದರ್ಶನಕ್ಕಾಗಿ ಹೊರಗಿನಿಂದ ಬಂದಿದ್ದ ಭಕ್ತರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.



ಶ್ರವಣಬೆಳಗೊಳದಲ್ಲಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯ ಪಾರ್ಥಿವ ಶರೀರದ ಮೆರವಣಿಗೆ ನಡೆಯಿತು.

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಗೆ ಸಹಸ್ರಾರು ಭಕ್ತರ ಮೌನ ನಮನ

ಸರ್ಕಾರಿ ಗೌರವದೊಂದಿಗೆ ಸ್ವಾಮೀಜಿ ಅಂತ್ಯಕ್ರಿಯೆ

ಶ್ರವಣಬೆಳಗೊಳ: ಜೈನ ಸಂಪ್ರದಾಯದಂತೆ, ಸೂರ್ಯಾಸ್ತಕ್ಕೂ ಮುನ್ನವೇ ಗುರುವಾರ ಸಂಜೆ 6.05ಕ್ಕೆ ಬೆಟ್ಟದ ತಪ್ಪಲಿನಲ್ಲಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅಂತ್ಯಕ್ರಿಯೆ ನಡೆಯಿತು. ಮೂರು ಕುಶಾಲು ತೋಪುಗಳನ್ನು ಹಾರಿಸುವ ಮೂಲಕ ಸಕಲ ಸರ್ಕಾರಿ ಗೌರವವನ್ನು ಸಲ್ಲಿಸಲಾಯಿತು. ಸಂಜೆಯ ವೇಳೆಗೆ ಚಾವುಂಡರಾಯ ಮಂಟಪದಲ್ಲಿ ಸಕಲ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ನಂತರ ನಮೋಕಾರ ಮಹಾಮಂತ್ರ, ಮಹಾಶಾಂತಿಧಾರ ಪಠಣ, ವಿವಿಧ ಮಂಗಲವಾದ್ಯಗಳೊಂದಿಗೆ ಪ್ರಮುಖ ರಸ್ತೆಗಳಲ್ಲಿ ಪಾರ್ಥಿವ ಶರೀರದ ಮೆರವಣಿಗೆ ನಡೆಯಿತು. ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಸಹಸ್ರಾರು ಭಕ್ತರು ಅಂತಿಮ ನಮನ ಸಲ್ಲಿಸಿದರು. ಚಂದ್ರಗಿರಿ ಚಿಕ್ಕಬೆಟ್ಟಕ್ಕೆ ಹೊಂದಿಕೊಂಡಿರುವ ತಾವರಕಟ್ಟೆಯ ಬೋಳುಬೆಟ್ಟದವರೆಗೆ ಮೆರವಣಿಗೆ ನಡೆಯಿತು.

ಸ್ವಾಮೀಜಿಯ ಪಾರ್ಥಿವ ಶರೀರವನ್ನು ಚಿತೆಯಲ್ಲಿ ಕುಳ್ಳಿರಿಸಿ, ಶಾಂತಿಧಾರ ಪಠಿಸಲಾಯಿತು. ನಂತರ ಗಂಧ, ಅರಿಷಿಣ, ಚಂದನ, ಕಷಾಯ, ಕ್ಷೀರ, ತುಪ್ಪ, ಎಳನೀರು, ವಿವಿಧ ಜಲಗಳಿಂದ ಅಭಿಷೇಕ ಮಾಡಲಾಯಿತು. ಗಂಧದ ಕಟ್ಟಿಗೆಯಿಂದ ತಯಾರಿಸಿದ ಚಿತೆಯಲ್ಲಿ ಕೊಬ್ಬರಿ, ತುಪ್ಪ ಹಾಕಲಾಯಿತು. ನಂತರ ಮಠದ ಉತ್ತರಾಧಿಕಾರಿ ಆಗಮ ಕೀರ್ತಿಯವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಹೊಂಬುಜ ಜೈನ ಮಠದ ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ, ಅರಹಂತಗಿರಿಯ ಧವಲಕೀರ್ತಿ ಸ್ವಾಮೀಜಿ, ಆರತಿಪುರದ ಸಿದ್ಧಾಂತ ಕೀರ್ತಿ ಸ್ವಾಮೀಜಿ, ಸೋಂದಾ ಜೈನ ಮಠದ ಭಟ್ಟಾಕಲಂಕ ಸ್ವಾಮೀಜಿ, ಕನಕಗಿರಿಯ ಭುವನಕೀರ್ತಿ ಸ್ವಾಮೀಜಿ, ಕಂಬದಹಳ್ಳಿಯ ಭಾನುಕೀರ್ತಿ ಸ್ವಾಮೀಜಿ, ಕಾರ್ಕಳದ ಲಲಿತಕೀರ್ತಿ ಸ್ವಾಮೀಜಿ, ಎನ್.ಆರ್.ಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿ, ಮೂಡುಬಿದಿರೆಯ ಚಾರುಕೀರ್ತಿ ಸ್ವಾಮೀಜಿ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು. ವಿವಿಧ ಕ್ಷೇತ್ರಗಳ ಗಣ್ಯರು ಸೇರಿ ರಾಜ್ಯದ ವಿವಿಧ ಮೂಲೆಗಳಿಂದ ಜನಸಾಗರವೇ ಹರಿದು ಬಂದಿತ್ತು. ಭದ್ರತೆಗಾಗಿ ನೂರಾರು ಪೊಲೀಸರನ್ನು ನಿಯೋಜಿಸಲಾಗಿತ್ತು.



ಶ್ರವಣಬೆಳಗೊಳದ ಚಾವುಂಡರಾಯ ಮಂಟಪದಲ್ಲಿ ಶ್ರೀಗಳ ಪಾರ್ಥಿವ ಶರೀರಕ್ಕೆ ಭಕ್ತರು ಅಂತಿಮ ನಮನ ಸಲ್ಲಿಸಿದರು.

ಜಿನಾಲಯಗಳ ಉದ್ಧಾರಕ


ಸ್ವಾಮೀಜಿಯ ಪೂರ್ವಾಶ್ರಮದ ಹೆಸರು ರತ್ನಾಕರ. 1969ರ ಡಿಸೆಂಬರ್ 12ರಂದು ಕ್ಷುಲ್ಲಕ ದೀಕ್ಷೆ ಸ್ವೀಕರಿಸಿದ್ದರು. ಇಪ್ಪತ್ತನೇ ವಯಸ್ಸಿನಲ್ಲಿ, ಅಂದರೆ 1970ರಲ್ಲಿ ಧರ್ಮಾಚಾರ್ಯ ಪೀಠವನ್ನು ಏರಿದ್ದರು. ಬಳಿಕ ಎಸ್.ಡಿ.ಜೆ.ಎಂ.ಐ ಟ್ರಸ್ಟ್ ಆಡಳಿತ ಸಮಿತಿಯ ಅಧ್ಯಕ್ಷರಾಗಿ ಅದನ್ನು ಪ್ರಾಥಮಿಕ ಶಿಕ್ಷಣದಿಂದ ಎಂಜಿನಿಯರಿಂಗ್ ಕಾಲೇಜು ಶಿಕ್ಷಣದವರೆಗೆ ಬೆಳೆಸಿದ್ದರು.

ಜೈನ ಧರ್ಮಶಾಸ್ತ್ರಕ್ಕಷ್ಟೇ ಸೀಮಿತವಾಗಿರಲಿಲ್ಲ. ಅವರು ಇತಿಹಾಸ ತಜ್ಞರು, ತತ್ವಜ್ಞಾನಿಗಳು, ಶ್ರೇಷ್ಠ ವಾಗ್ಮಿಗಳೂ ಆಗಿದ್ದರು. ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಇತಿಹಾಸ, ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ ತತ್ವಶಾಸ್ತ್ರ, ಕನ್ನಡ, ಸಂಸ್ಕೃತ ಮತ್ತು ಪ್ರಾಕೃತದಲ್ಲೂ ಸ್ನಾತಕೋತ್ತರ ಪದವಿ ಪಡೆದಿದ್ದರು.

ನೂರಾರು ಜಿನಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ನಿತ್ಯ ಪೂಜೆ ನಡೆಯುವಂತೆ ಮಾಡಿದ್ದರು. ಸುತ್ತಲಿನ 10ಕ್ಕೂ ಹೆಚ್ಚು ಗ್ರಾಮಗಳನ್ನು ದತ್ತು ಪಡೆದು, ಮೂಲ ಸೌಲಭ್ಯಗಳನ್ನು ಕಲ್ಪಿಸಿದ್ದರು. ಸಹಸ್ರಮಾನದ ಮಸ್ತಕಾಭಿಷೇಕದಲ್ಲಿ ಸಾವಿರ ಮಂದಿಗೆ ಉಚಿತ ನೇತ್ರ ತಪಾಸಣೆ ಶಿಬಿರವನ್ನೂ ನಡೆಸಿದ್ದರು. 1975ರಲ್ಲಿ ಮಹಾವೀರ ನಿರ್ವಾಣದ 2500ನೇ ವರ್ಷದ ನೆನಪಿಗಾಗಿ ದಕ್ಷಿಣ ಭಾರತದಾದ್ಯಂತ ನಡೆದ ಧರ್ಮ ಚಕ್ರಯಾತ್ರೆಯ ಕೀರ್ತಿಯೂ ಅವರಿಗೇ ಸಲ್ಲುತ್ತದೆ.

ಆರೋಗ್ಯ, ಶಿಕ್ಷಣಕ್ಕೆ ಮಹತ್ವ ನೀಡುತ್ತಿದ್ದ ಸ್ವಾಮೀಜಿ, ಪಾಲಿಟೆಕ್ನಿಕ್, ಎಂಜಿನಿಯರಿಂಗ್, ನರ್ಸಿಂಗ್ ಕಾಲೇಜು, ಗೊಮ್ಮಟೇಶ್ ವಿದ್ಯಾಪೀಠ, ಪಾಕೃತ ಭಾಷೆಯ ಅಭಿವೃದ್ಧಿಗೆ ಬೆಂಗಳೂರಿನಲ್ಲಿ ಪ್ರಾಕೃತ ಜ್ಞಾನ ಭಾರತ ಟ್ರಸ್ಟ್ ಸ್ಥಾಪಿಸಿದ್ದರು. ಶ್ರವಣಬೆಳಗೊಳದಲ್ಲಿ ರಾಷ್ಟ್ರೀಯ ಪ್ರಾಕೃತ ಅಧ್ಯಯನ -ಸಂಶೋಧನಾ ಸಂಸ್ಥೆಯಲ್ಲಿ ತಾಳೆಗರಿಗಳನ್ನು ಸಂರಕ್ಷಿಸುವ, ಪ್ರಾಕೃತ ಗ್ರಂಥಗಳ ಕನ್ನಡ ಅನುವಾದ ಯೋಜನೆಯನ್ನು ರೂಪಿಸಿದ್ದರು. ಆಯುರ್ವೇದ ಆಸ್ಪತ್ರೆ, ಸಂಚಾರಿ ಆಸ್ಪತ್ರೆ, ಲ್ಯಾಬ್‌ಗಳನ್ನು ಸ್ಥಾಪಿಸಿದ್ದರು. ಮಹಾಮಸ್ತಕಾಭಿಷೇಕದಲ್ಲಿ ಉಳಿದ ಹಣದಿಂದ ಆಧುನಿಕ ಮಕ್ಕಳ ಆಸ್ಪತ್ರೆ ನಿರ್ಮಿಸಿದ್ದರು. ಧವಲಾ, ಜಯಧವಲಾ, ಮಹಾಧವಲಾ ಗ್ರಂಥಗಳ 42 ಸಂಪುಟಗಳನ್ನು ಕನ್ನಡಕ್ಕೆ ಅನುವಾದಿಸಿ, ಪ್ರಕಟಿಸಿದ್ದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಮಾರ್ಚ್ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ತೃತೀಯ ಗಂ. 17-00 ನಕ್ಷತ್ರ: ಅಶ್ವಿನಿ ಗಂ. 13-22 ಯೋಗ: ವೈಧೃತಿ ಗಂ. 25-43, ಕರಣ: ಗರಜೆ ಗಂ. 17-00, ಮೀನ ಮಾಸದ 09 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 -12-00
ಸೂರ್ಯೋದಯ : 06-36 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 01 ರಂಜಾನ್ ದಿನ ವಿಶೇಷ : ಗೌರಿತೃತೀಯಾ(ಗಂಗೋರ್), ಆಂದೋಲನ ತೃತೀಯಾ, ಸರ್‌ಹುಲ್(ಬಿಹಾರ್), ರಂಜಾನ್‌ಮೊದಲನೇ ದಿನ(ಮುಸ್ಲಿಂ)
ಅದೃಷ್ಟ ಸಂಖ್ಯೆ : 3, 6

ಮೇಷ: ಕಾರ್ಯದ ಸಾಧನೆಯಾಗಬೇಕಾದಲ್ಲಿ ಕಳೆದುಕೊಂಡ ಸ್ನೇಹಿತನ ಸಹಾಯ ಅಗತ್ಯವೆನ್ನಿಸುವುದು. ಮಗಳ ಅಂತರರಾಷ್ಟ್ರೀಯ ಸಾಧನ ಹೆಮ್ಮೆಯ ಸಂಗತಿಯಾಗುವುದು. ಕುಟುಂಬದಲ್ಲಿ ಸಂತೋಷ ಇರುವುದು.

ವೃಷಭ: ಸರ್ವಗುಣ ಸಂಪನ್ನನಾದ ಮಗನ ಕೀರ್ತಿ ಉನ್ನತ ಮಟ್ಟದಲ್ಲಿ ಕೇಳಿಬರುತ್ತಿರುವ ಬಗ್ಗೆ ಹೆಮ್ಮೆಯೆಂದೆನಿಸುತ್ತದೆ. ತಹಶೀಲ್ದಾರರಿಂದ ಆಗಬೇಕಾದ ಕೆಲಸಗಳು ಸರಿಯಾಗಿ ಆಗುವ ಸಾಧ್ಯತೆಗಳು ಕಂಡುಬರುತ್ತವೆ.

ಮಿಥುನ: ಮೈದುನನ ಸಹಾಯದಿಂದ ತವರು ಮನೆಯ ಕೆಲವರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಸಂಜೆಯ ಮುಂದೆ ತಂಗಾಳಿಯ ಜೊತೆ ಸ್ನೇಹಿತರೊ ಅಥವಾ ಸಂಗಾತಿಯೊಂದಿಗೆ ಕಾಲ ಕಳೆಯುವಿರಿ. ಬೆಂಕಿಯ ಬಗ್ಗೆ ಜಾಗ್ರತೆಯಿಂದಿರಿ.

ಕರ್ಕಾಟಕ: ಸ್ನೇಹಿತನೊಂದಿಗೆ ಮುನಿಸಿನ ತೆರೆಯನ್ನು ಬದಿ ಸರಿಸಿ ಉತ್ತಮ ಸಮಯವನ್ನು ಅನುಭವಿಸುವಿರಿ. ಸಮ ಪಾಲು ಸಮ ಬಾಳು ಎಂಬ ನಿಮ್ಮ ಧ್ಯೇಯವನ್ನು ನಿಮ್ಮ ಕಿರಿಯರು ಗೌರವಿಸುವುದರೊಂದಿಗೆ ಪಾಲಿಸುತ್ತಾರೆ.

ಸಿಂಹ: ನಿಮ್ಮ ದೈನಂದಿನ ಕಾರ್ಯ ಕಲಾಪಗಳನ್ನು ಬಿಟ್ಟು ನೀವಾಗಿಯೆ ಏನಾದರು ಕೆಲಸವನ್ನು ಅಂಟಿಸಿಕೊಳ್ಳದಿದ್ದರೆ ದಿನವು ಅತ್ಯಂತ ಆರಾಮದಾಯಕವಾಗಿರುತ್ತದೆ. ಮಕ್ಕಳ ಪರೀಕ್ಷೆಯು ನಿಮ್ಮ ಸಮಸ್ಯೆಯಾಗದಿರಲಿ.

ಕನ್ಯಾ: ಮಾಡುತ್ತಿರುವ ಕೆಲಸದಲ್ಲಿ ಹಣದ ಕೊರತೆ ಕಂಡುಬಂದರೆ ತುಂಬಾ ಸಂಕೋಚ ಮಾಡಿಕೊಳ್ಳದೆ ಆತ್ಮೀಯರಲ್ಲಿ ಕೇಳಿ, ನಿಮಗೆ ತೀರಿಸುವ ಸಾಮರ್ಥ್ಯ ಇದೆ. ಮಗನ ಮುಜುಗರದ ಸಂಗತಿಗಳು ನಿಮ್ಮ ತಲೆನೋವಾಗಬಹುದು.

ತುಲಾ: ರಾತ್ರಿ ಅನಿವಾರ್ಯ ಕಾರಣಗಳಿಂದ ಆದ ನಿದ್ರಾಹೀನತೆಯು ಕೆಲಸದ ಸಮಯದಲ್ಲಿ ಬಹಳವಾಗಿ ಕಾಡುವ ಸಂಭವವಿದೆ. ಮನೆಯ ಅಥವಾ ಕಚೇರಿಯ ಹೆಚ್ಚುವರಿ ಜವಾಬ್ದಾರಿಗಳನ್ನು ನಿಭಾಯಿಸುವ ಹೊಣೆ ನಿಮ್ಮದಾಗುತ್ತದೆ.

ವೃಶ್ಚಿಕ: ನಿಮ್ಮ ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗದಲ್ಲಿ ಎದುರಾಗುವ ಏರಿಳಿತದ ನಡುವೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ನಿರ್ಜಲೀಕರಣದಿಂದಾಗಿ ನಿಮ್ಮ ಚರ್ಮವು ಸುಕ್ಕುಗಟ್ಟಿದಂತಾಗಬಹುದು, ಎಚ್ಚರವಹಿಸಿರಿ.

ಧನು: ಉತ್ತರ ತಿಳಿಯದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಗೋಜಿನಲ್ಲಿ ವಾಸ್ತವ ಮರೆಯದಿರಿ. ನಿಮ್ಮ ಮನಸ್ಸಿಗೆ ಹತ್ತಿರವಾಗುವ ಜನರನ್ನು ನಿಮ್ಮ ಮಾತುಗಳಿಂದ ಭರ್ತ್ಸನೆಗೊಳಿಸಿ ಸಂಬಂಧವನ್ನು ದೂರವಾಗುವಂತೆ ಮಾಡಿಕೊಳ್ಳದಿರಿ.

ಮಕರ: ಕಾರ್ಯಕ್ರಮದಲ್ಲಿ ನಿಮ್ಮ ಪಾತ್ರವನ್ನು ಬಹಳವಾಗಿ ಪ್ರಶಂಸಿಸಿ ಜನರು ಮಾತನಾಡುವರು ಹಾಗೂ ಹೊಸ ಹಿಂಬಾಲಕರನ್ನು ಸಂಪಾದಿಸುವಿರಿ. ಭಾರತಿದೇವಿಯ ಸದ್ವರಂಪರೆಯಲ್ಲಿ ಜನಿಸಿದ್ದಕ್ಕಾಗಿ ಹೆಮ್ಮೆ ಪಡುವಂತಾಗುತ್ತದೆ.

ಕುಂಭ: ಮಧುರವಾದ ನಿಮ್ಮ ಸಾಂತ್ವಾನ ನುಡಿಗಳು ಬೇಸರಗೊಂಡ ವ್ಯಕ್ತಿಗೆ ಆಸರೆಯ ಹೆಗಲಾದಂತೆ ಆಗುತ್ತದೆ. ಇಷ್ಟರ ತನಕ ಬಾರದೆ ಇದ್ದ ಸಂಬಂಧಿಕರ ಇಂದಿನ ಆಗಮನವು ಆಶ್ಚರ್ಯದ ಜೊತೆ ಸಂತಸವನ್ನು ತರುತ್ತದೆ.

ಮೀನ: ಕೆಲಸದ ಒತ್ತಡದಿಂದ ಶಿರೋವೇದನೆಯು ಇಂದು ನಿಮ್ಮ ಪಾಲಿಗಿರಬಹುದು. ಸರಿಯಾದ ವ್ಯಕ್ತಿಗಳನ್ನು ಭೇಟಿ ಮಾಡಿ ನಿಮ್ಮ ಸಮಸ್ಯೆಗಳನ್ನು ಚರ್ಚಿಸಿದಲ್ಲಿ ಉತ್ತಮ ಪರಿಹಾರಗಳು ಶೀಘ್ರವೇ ಪ್ರಾಪ್ತವಾಗುವುದು.

ಬೆರಗಿನ ಬೆಳಕು



ಗುರುರಾಜ ಕರಜಗಿ

ಎರಡು ದೃಷ್ಟಿಗಳು

ಸ್ಥಿರ ಹಿಮಾಚಲ ಬೊಮ್ಮ, ಚರ ಜಾಹ್ನವಿಯೆ ಮಾಯೆ |
ಪರಸ್ತ್ವಘನದ ವಿದ್ರವರೂಪ ವಿಶ್ವ ||
ಪರಮಾರ್ಥಕೊಂದಕ್ಷಿ ವೆವಹಾರಕಿನ್ನೊಂದು |
ಎರಡುಮೊಂದಾಂತರ್ಯ – ಮಂಕುತಿಮ್ಮ
|| 848 ||

ಪದ-ಅರ್ಥ: ಬೊಮ್ಮ = ಬ್ರಹ್ಮ, ಚರ = ಚಲಿಸುವ, ಜಾಹ್ನವಿ = ಗಂಗೆ, ವಿದ್ರವ = ದ್ರವ ರೂಪಿ, ಪರಮಾರ್ಥಕೊಂದಕ್ಷಿ = ಪರಮಾರ್ಥಕೆ + ಒಂದು + ಅಕ್ಷಿ(ಕಣ್ಣು), ವೆವಹಾರಕಿನ್ನೊಂದು = ವೆವಹಾರಕೆ(ವ್ಯವಹಾರಕ್ಕೆ) + ಇನ್ನೊಂದು. ಎರಡುಮೊಂದಾಂತರ್ಯ = ಎರಡುಂ (ಎರಡೂ) + ಒಂದು + ಆಂತರ್ಯ.

ವಾಚ್ಯಾರ್ಥ: ಬ್ರಹ್ಮ ಹಿಮಾಚಲದಂತೆ ಸ್ಥಿರ, ಅಲ್ಲಿಂದ ಹೊರಡುವ ಚಲನಶೀಲೆಯಾದ ಗಂಗೆಯೇ ಮಾಯೆ. ಅದರಂತೆಯೇ ಪರಸತ್ವವೆನ್ನುವುದು ಘನವಾದರೆ ಮಾಯೆಯ ಕೇಂದ್ರವಾದ ಈ ವಿಶ್ವ, ಆ ಘನದ ದ್ರವರೂಪ. ಪರಮಾರ್ಥಕ್ಕೆ ಮತ್ತು ವ್ಯವಹಾರಕ್ಕೆ ನೋಡುವ ದೃಷ್ಟಿಗಳು ಬೇರೆಯಾದರೂ, ಆಂತರ್ಯದಲ್ಲಿ ಅವೆರಡೂ ಒಂದೇ.

ವಿವರಣೆ: ಹಿಮಾಚಲ ಅಂದಿನಿಂದ ಇಂದಿನವರೆಗೆ ಹಾಗೆಯೇ ಅಚಲವಾಗಿ ನಿಂತಿದೆ. ಆದರೆ ಅದರ ಮೇಲೆ ಬಿದ್ದ ಹಿಮ ಕರಗಿ, ನೀರಾಗಿ, ಹರಿದು ಬಂದು ಗಂಗೆಯಾಗಿದೆ. ಈ ಉದಾಹರಣೆಯನ್ನು ಕಗ್ಗ, ಭಗವಂತ ಮತ್ತು ಜಗತ್ತುಗಳ ನಡುವಿನ ಸಂಬಂಧವನ್ನು ತಿಳಿಸಲು ಬಳಸಿಕೊಳ್ಳುತ್ತದೆ. ಬ್ರಹ್ಮ ಹಿಮಾಚಲ ಮತ್ತು ಗಂಗೆ ಮಾಯೆ. ಆದಿಶಂಕರರು ಜಗತ್ತು ಮಿಥ್ಯೆ ಎಂದಿದ್ದರೂ. ಮಿಥ್ಯೆ ಎಂದರೆ ಸುಳ್ಳು ಅಥವಾ ಅಸ್ತಿತ್ವವೇ ಇಲ್ಲದಿರುವುದು ಎಂದಲ್ಲ. ಬ್ರಹ್ಮ ಪರಮಸತ್ಯವಾದರೆ, ಜಗತ್ತು ನಾಮ, ರೂಪಗಳಿದ್ದ ವ್ಯವಹಾರಿಕ ಸತ್ಯ. ಛಾಂದೋಗ್ಯ ಉಪನಿಷತ್ತಿನಲ್ಲಿ ಉದ್ದಾಲಕ ಮಣ್ಣು, ಚಿನ್ನ, ಕಬ್ಬಿಣದ ಉದಾಹರಣೆ ಕೊಡುತ್ತಾನೆ. ಮಣ್ಣು ಮೂಲದಲ್ಲಿ ಒಂದೇ ಆದರೂ ಅದರಿಂದ ಮಡಕೆ ಮುಂತಾದ ವಸ್ತುಗಳನ್ನು ಮಾಡಿದಾಗ ಅದಕ್ಕೆ ನಾಮ, ರೂಪಗಳು ಬರುತ್ತವೆ. ಹಾಗೆಯೇ ಚಿನ್ನ. ಒಂದೇ ಆದರೂ ವ್ಯವಹಾರಿಕ ಜಗತ್ತಿನಲ್ಲಿ, ಅದರಿಂದಾದ ಆಭರಣಗಳಲ್ಲಿ ವೈವಿಧ್ಯತೆ ಬರುತ್ತದೆ. ಈ ವ್ಯವಹಾರಿಕ ಸತ್ಯವನ್ನು ಮಾಯೆ ಎಂದು ಕರೆದಿದ್ದಾರೆ. ಇದನ್ನು ಸರಳವಾಗಿ ಹೇಳುವುದಾದರೆ ಇರುವುದನ್ನು ಇಲ್ಲದಂತೆ, ಇಲ್ಲದಿರುವುದನ್ನು ಇರುವಂತೆ ತೋರಿಸುವುದೇ ಮಾಯೆ. ಬ್ರಹ್ಮ ಮೂಲ, ಜಗತ್ತು ಮಾಯೆಯೆಂದರೆ, ಜಗತ್ತು ಕಾಣುತ್ತಿಲ್ಲವೆ, ಅದನ್ನು ಅನುಭವಿಸುತ್ತಿಲ್ಲವೆ? ಎಂಬ ಪ್ರಶ್ನೆಗಳು ಮೂಡುತ್ತವೆ.


ಈ ಮಾಯೆಗೆ ಆವರಣ ಶಕ್ತಿ ಮತ್ತು ವಿಕ್ಷೇಪ ಶಕ್ತಿ ಎಂಬ ವಿಶಿಷ್ಟ ಶಕ್ತಿಗಳಿವೆ. ಮೊದಲನೆಯ ಆವರಣ ಶಕ್ತಿಯಿಂದ ವಸ್ತುಗಳ ನಿಜರೂಪ ಮಾಯವಾಗುತ್ತದೆ. ಎರಡನೆಯ ವಿಕ್ಷೇಪ ಶಕ್ತಿಯಿಂದ ನಿಜವಾದ ವಸ್ತುಗಳ ಬದಲಾಗಿ ಬೇರೆಯೇ ವಸ್ತುಗಳು ತೋರುತ್ತವೆ. ಮಡಕೆಯನ್ನು ಕಂಡಾಗ ಮಣ್ಣು ಮರೆತುಹೋಗುವಂತೆ, ಆಭರಣವನ್ನು ಕಂಡಾಗ ಚಿನ್ನ ಮರೆತು ಹೋಗುವಂತೆ, ಮೇಜನ್ನು ಕಂಡಾಗ ಮರ ಮರೆಯಾಗುವಂತೆ ಕಾಣುತ್ತದೆ. ಆದರೆ ಬ್ರಹ್ಮದರ್ಶನವಾದಾಗ ಮಾಯೆಯ ಪೊರೆ ಕಳಚಿ ಹೋಗುತ್ತದೆ.

ಅದಕ್ಕೆ ಕಗ್ಗ ತಿಳಿಸುತ್ತದೆ, ನಮಗೆ ಎರಡು ದೃಷ್ಟಿಗಳಿರಬೇಕು. ಪರಮಾರ್ಥಿಕವಾಗಿ ಬ್ರಹ್ಮವೊಂದೇ ಸತ್ಯ ಎಂದು ತಿಳಿದರೂ ವ್ಯಾವಹಾರಿಕವಾಗಿ ಜಗತ್ತನ್ನು ಒಪ್ಪಿಕೊಳ್ಳಬೇಕು. ಬ್ರಹ್ಮದ ಒಂದು ಶಕ್ತಿಯೇ ಮಾಯೆಯಾದ್ದರಿಂದ ಅವೆರಡೂ ಬೇರೆಯಲ್ಲ, ಒಂದೇ. ಆದ್ದರಿಂದ ನಮ್ಮ ದೃಷ್ಟಿಗಳು ಮೇಲ್ನೋಟಕ್ಕೆ ಎರಡೆನ್ನಿಸಿದರೂ, ಮೂಲದಲ್ಲಿ, ಆಂತರ್ಯದಲ್ಲಿ ಅವು ಒಂದೇ.

ಪದಬಂಧ 5267 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಚುಂಬನದೊಂದಿಗೆ ರತ್ನ ಸಿಕ್ಕಿದೆಯಲ್ಲಾ! (2)
2. ಬಸವಣ್ಣನವರು ಕೈಲಾಸವೆಂದಿರುವ ಕೆಲಸ (3)
4. ಕಣದಲ್ಲಿರುವ ಹತೋಟಿ (4)
6. ವೀರಶೈವರ ಸ್ಮಶಾನ (4)
8. ರಾಜ್ಯಕ್ಕೆ ಸಂಬಂಧಿಸಿದ ಕೆಲಸ (4)
9. ತತ್ವಗಳನ್ನು ಬಲ್ಲವನು (4)
11. ಮಂಜ ನಡುವಿದ್ದರೆ ಇದು ಸೂಕ್ತ! (4)
13. ಮರದೊಳಗೆ ಕಾಣುತ್ತಿರುವ ದುಂಬಿ (4)
15. ಮನಸ್ಸಿನ ಅಸ್ವಾಸ್ಥತೆ (3)
16. ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ
1. ದುಮುಗುಟ್ಟುತ್ತಿರುವ ಅಜ್ಜ (3)
2. ವಿನಾಕಾರಣದಲ್ಲೇ ಉದ್ದೇಶವನ್ನು ಹುಡುಕಿ! (3)
3. ಕರು ಖರೀದಿಗೆ ಹಾಕಿದ ಷರತ್ತು (3)
5. ಉಲ್ಟಾ ಪಲ್ಟಾ ಹಿಡಿದಿರುವ ವಂದರಿ (3)
7. ಬಂಗಾರವನ್ನು ಹೀಗೂ ಕರೆವರು (3)
8. ರಾಯರಿಂದ ಬಂದ ನಿರೂಪ (3)
10. ನೆನಪು ಹೀಗೆ ಬಂದಿದೆ (3)
12. ಉಪಪತ್ನಿ ಇಲ್ಲಿದ್ದಾಳೆ (3)
13. ಭವ್ಯವಾದ ಸೌಧ (3)
14. ಮಣಿ ಧರಿಸಿದ ಚಲುವೆ (3)



5266ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 4.ಲವಾಜಮೆ
6.ವಿಧುರ 8.ಹರವಿ
9.ದನುಜ 11.ದಮನ
13.ಗರತಿ 15.ಅಪಾತ್ರ
16.ಅನಿರುದ್ಧ 18.ಬಹಿರಂಗ

ಮೇಲಿಂದ ಕೆಳಕ್ಕೆ:
1.ಚಮ್ಮಾರ 2.ತಿಲ
3.ಆಮೆ 5.ವಾಕ್ಕೋವಿದ
6.ವಿಷಾದ 7.ದಾಹ
10.ಜಗದ್ಗುರು 12.ನಕ್ಷತ್ರ
14.ತಿದಿ 15.ಅನಂಗ
16.ಅಣ್ಣ 17.ದ್ಧಬ

ಸುಡೊಕು 5653

		1		8				5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5652 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ರಾಜ್ಯ ಮಹಿಳಾ ಕಾಂಗ್ರೆಸ್ ಸಭೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಚುನಾವಣೆಯಲ್ಲಿ ಮಹಿಳಾ ಕಾಂಗ್ರೆಸ್‌ನ ಪಾಲ್ಗೊಳ್ಳುವಿಕೆ ಹೆಚ್ಚಿಸಲು 'ಗೆಲುವಿನ ತಂತ್ರ' ಶೀರ್ಷಿಕೆಯಡಿ ನಗರದಲ್ಲಿ ಮಾರ್ಚ್ 25 ಮತ್ತು 26ರಂದು ರಾಜ್ಯ ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳ ಚರ್ಚಾ ಸಭೆ ನಡೆಯಲಿದೆ' ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ತಿಳಿಸಿದರು.

'ಆಲಿವ್ ಗಾರ್ಡನ್ ರೆಸಾರ್ಟ್‌ನಲ್ಲಿ 25ರಂದು ಬೆಳಿಗ್ಗೆ 10.30ಕ್ಕೆ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿಸೋಜಾ ಸಭೆ ಉದ್ಘಾಟಿಸಲಿದ್ದಾರೆ. 26 ಜಿಲ್ಲೆಗಳ ಸಂಘಟನಾ ಪ್ರಮುಖರು ಸೇರಿ 200ಕ್ಕೂ ಹೆಚ್ಚು ಪದಾಧಿಕಾರಿಗಳು ಭಾಗವಹಿಸಲಿದ್ದಾರೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸಿಂಧನೂರು: ಬಾದರ್ಲಿ ಕುಟುಂಬದ ಹಂಪನಗೌಡ, ಬಸನಗೌಡ ಶತಪ್ರಯತ್ನ

ಟಿಕೆಟ್‌ಗಾಗಿ ಅಜ್ಜ–ಮೊಮ್ಮಗ ಪೈಪೋಟಿ

• ನಾಗರಾಜ ಚಿನಗುಂಡಿ

ರಾಯಚೂರು: ಜಿಲ್ಲೆಯ ಸಿಂಧನೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಮಾಜಿ ಶಾಸಕ ಹಂಪನಗೌಡ ಬಾದರ್ಲಿ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಸನಗೌಡ ಬಾದರ್ಲಿ ಸಂಬಂಧದಲ್ಲಿ ಅಜ್ಜ–ಮೊಮ್ಮಗ.

ಹಂಪನಗೌಡ ಬಾದರ್ಲಿ ನಾಲ್ಕು ಬಾರಿ ಶಾಸಕರಾಗಿದ್ದು, ಚುನಾವಣೆಯಲ್ಲಿ ಎರಡು ಸಲ ಸೋತಿದ್ದಾರೆ. ಜನತಾ ಪರಿವಾರದ ಕಾಲದಿಂದಲೂ ಸಿದ್ದರಾಮಯ್ಯ ಅವರೊಂದಿಗೆ ಹಂಪನಗೌಡ ನಿಕಟ ಸಂಬಂಧ ಹೊಂದಿದ್ದಾರೆ.



ನಾಲ್ಕು ಬಾರಿ ಶಾಸಕನಾಗಿದ್ದೇನೆ. ಎಲ್ಲವನ್ನೂ ಪರಿಶೀಲಿಸಿ ಹೈಕಮಾಂಡ್ ನ್ಯಾಯೋಚಿತ ತೀರ್ಮಾನ ತೆಗೆದುಕೊಳ್ಳುತ್ತದೆ ಎಂಬ ವಿಶ್ವಾಸವಿದೆ
ಹಂಪನಗೌಡ ಬಾದರ್ಲಿ
ಮಾಜಿ ಶಾಸಕ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ವರಿಷ್ಠರನ್ನು ಭೇಟಿಯಾಗಿರುವೆ. ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಟಿಕೆಟ್ ಸಿಗುವುದು ಖಚಿತ
ಬಸನಗೌಡ ಬಾದರ್ಲಿ
ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಎಂಎಸ್ಐಎಲ್ ಅಧ್ಯಕ್ಷರಾಗಿದ್ದರು. ಕೆಪಿಸಿಸಿ ವರಿಷ್ಠರ ಒಡನಾಟವೂ ಇದೆ. ಟಿಕೆಟ್ ವಿಚಾರದಲ್ಲಿ ಸಿದ್ದರಾಮಯ್ಯ ಬೆಂಬಲ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಹಂಪನಗೌಡ ಬಾದರ್ಲಿ ಇದ್ದಾರೆ.


ಹಲವು ವರ್ಷಗಳಿಂದ ಪಕ್ಷದಲ್ಲಿ ಸಕ್ರಿಯರಾಗಿರುವ ಬಸನಗೌಡ ಬಾದರ್ಲಿ ಅವರು ಕಾಂಗ್ರೆಸ್ ಯುವ ಘಟಕದ ರಾಜ್ಯ ಅಧ್ಯಕ್ಷರಾಗಿದ್ದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜೊತೆ ಆತ್ಮೀಯತೆ ಕಾಯ್ದುಕೊಂಡಿದ್ದಾರೆ. ಟಿಕೆಟ್ ವಿಷಯದಲ್ಲಿ ಸೋತವರಿಗಿಂತ ಯುವ ಆಕಾಂಕ್ಷಿಗಳಿಗೆ ಆದ್ಯತೆ ಸಿಗಲಿದೆ ಎಂಬ ವಿಶ್ವಾಸದಲ್ಲಿ ಬಸನಗೌಡ ಬಾದರ್ಲಿ ಇದ್ದಾರೆ.

ಹಂಪನಗೌಡರಿಗೆ ಬಸವನಗೌಡ ಸಹೋದರನ ಕಡೆಯಿಂದ ಮೊಮ್ಮಗ. ಇಬ್ಬರೂ ಪರಸ್ಪರ ಗೌರವ ಹೊಂದಿದ್ದಾರೆ. ಸಾರ್ವಜನಿಕರ ಎದುರು ಅಂತರ ಕಾಯ್ದುಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷವು ರಾಜ್ಯಮಟ್ಟದಲ್ಲಿ ಪ್ರತಿಭಟನೆಗೆ ಕರೆ ನೀಡಿದಾಗ, ಸಿಂಧನೂರಿನಲ್ಲಿ ಅಜ್ಜ ಮತ್ತು ಮೊಮ್ಮಗ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸುತ್ತಾರೆ.

ಟಿಕೆಟ್‌ಗಾಗಿ ಇಬ್ಬರೂ ವರಿಷ್ಠರ ಮೇಲೆ ಪ್ರಭಾವ ಬೀರಲು ಪ್ರಯತ್ನ ನಡೆಸಿದ್ದಾರೆ. ವೇದಿಕೆಗಳಲ್ಲಿ ಇಬ್ಬರೂ ಪರಸ್ಪರ ವಿರುದ್ಧ ಮಾತನಾಡುವುದಿಲ್ಲ. ತಮಗೆ ಟಿಕೆಟ್ ಸಿಗುವುದು ನಿಶ್ಚಿತ ಎಂಬ ಆಶಾಭಾವದಲ್ಲಿ ಇಬ್ಬರೂ ಇದ್ದಾರೆ.

ಸಭಿಕರ ಮಧ್ಯೆ ಪ್ರಧಾನಿ ಮೋದಿ 'ಮೆರವಣಿಗೆ'

ಪ್ರಜಾವಾಣಿ ವಾರ್ತೆ



ದಾವಣಗೆರೆ: ಬಿಜೆಪಿ ವಿಜಯ ಸಂಕಲ್ಪ ಯಾತ್ರೆ 'ಮಹಾಸಂಗಮ' ಸಮಾರೋಪ ಮಾರ್ಚ್ 25ರಂದು ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಸಭಿಕರ ನಡುವೆ ಪೆಂಡಾಲ್ ಒಳಗೆ ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಲಿದ್ದಾರೆ.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ, ಸಂಸದ ಜಿ.ಎಂ. ಸಿದ್ದೇಶ್ವರ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು.

'ರಾಜ್ಯದ ವಿವಿಧೆಡೆ ರೋಡ್ ಶೋ ನಡೆದಿದೆ. ದಾವಣಗೆರೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಭಿಕರ ನಡುವೆ ಹಾದು ಹೋಗಬೇಕು ಎಂದು ಪ್ರಧಾನಿಯವರೇ ಆಶಯ ವ್ಯಕ್ತಪಡಿಸಿದ್ದು, ಇದೇ ಮೊದಲ ಬಾರಿಗೆ ಪೆಂಡಾಲ್ ಒಳಗೆ ತೆರೆದ ವಾಹನದಲ್ಲಿ ಕೈಬೀಸುತ್ತ ವೇದಿಕೆಯತ್ತ ತೆರಳಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಮಿಷನ್–150' ಗುರಿಯೊಂದಿಗೆ ಬಿಜೆಪಿ ಮಾರ್ಚ್ 1ರಿಂದ ನಾಲ್ಕು ಕಡೆಗಳಿಂದ ಆರಂಭಿಸಿದ್ದ ವಿಜಯ ಸಂಕಲ್ಪ ಯಾತ್ರೆಯ ಸಮಾರೋಪ ದಾವಣಗೆರೆಯಲ್ಲಿ ನಡೆಯುತ್ತಿದೆ. 10 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ. ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬರುವ ಪ್ರಧಾನಿ, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಮಧ್ಯಾಹ್ನ 3ಕ್ಕೆ ದಾವಣಗೆರೆ ತಲುಪುವರು ಎಂದರು.

ಮುನಿಯಪ್ಪಗೆ ಟಿಕೆಟ್ ಖಂಡಿಸಿ ರಾಜೀನಾಮೆ

ದೇವನಹಳ್ಳಿ ಕ್ಷೇತ್ರ: ಕೇಂದ್ರದ ಮಾಜಿ ಸಚಿವರ ವಿರುದ್ಧ ಆಕಾಂಕ್ಷಿಗಳು, ಮುಖಂಡರ ಆಕ್ರೋಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ದೇವನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಕೇಂದ್ರ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ನೀಡಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಟಿಕೆಟ್ ಆಕಾಂಕ್ಷಿಗಳು ಮತ್ತು ಪಕ್ಷದ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ನೀಡುವ ಮೂಲಕ ಬಂಡಾಯ ಸಾರಿದ್ದಾರೆ.

ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ, ಉಪಾಧ್ಯಕ್ಷ, ದೇವನಹಳ್ಳಿ ಹಾಗೂ ವಿಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪುರಸಭೆ, ಗ್ರಾಮ ಪಂಚಾಯಿತಿಯ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ರಾಜೀನಾಮೆ ಪತ್ರ ಪ್ರದರ್ಶಿಸಿd ಸ್ಥಳೀಯ ಕಾಂಗ್ರೆಸ್ ಮುಖಂಡರು, ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡದ ವ್ಯಕ್ತಿಗೆ ಟಿಕೆಟ್ ನೀಡಿದರೆ ಮುಳುವಾಗಲಿದೆ. ಸ್ಥಳೀಯರಿಗೆ ಟಿಕೆಟ್ ನೀಡಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಿದರು.

ಕ್ಷೇತ್ರದಲ್ಲಿ ಬಿಜೆಪಿಯು ದಲಿತ ಎಡಗೈ ಸಮುದಾಯದ ವ್ಯಕ್ತಿಗೆ ಟಿಕೆಟ್ ಘೋಷಿಸಿದೆ. ಕಾಂಗ್ರೆಸ್ ಕೂಡಾ ಅದೇ ಸಮುದಾಯದ ವ್ಯಕ್ತಿಗೆ ಟಿಕೆಟ್ ನೀಡದಿದ್ದರೆ ಮತಗಳು ವಿಭಜನೆ ಆಗಲಿವೆ ಎಂದು ಉಲ್ಲೇಖಿಸಲಾಗಿದೆ.

'ಐದು ವರ್ಷಗಳಿಂದ ಕ್ಷೇತ್ರದಲ್ಲಿ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಸಮಯ, ಹಣ ಖರ್ಚು ಮಾಡಿ ಪಕ್ಷ ಸಂಘಟನೆ ಮಾಡಿದ್ದೇವೆ. ಕೊನೆ ಕ್ಷಣದಲ್ಲಿ ಕ್ಷೇತ್ರದ ಜನರಿಗೆ ಪರಿಚಯವಿಲ್ಲದ ವ್ಯಕ್ತಿಯನ್ನು ಕರೆ ತಂದು ಟಿಕೆಟ್ ನೀಡಿದರೆ ಕಾಂಗ್ರೆಸ್ ಸೋಲಲಿದೆ' ಎಂದು ಎಚ್ಚರಿಸಿದರು.



ಸುದ್ದಿಗೋಷ್ಠಿಯಲ್ಲಿ ಗುರುವಾರ ಕಾಂಗ್ರೆಸ್ ಮುಖಂಡರು ರಾಜೀನಾಮೆ ಪತ್ರ ಪ್ರದರ್ಶಿಸಿದರು

'ಸ್ಥಳೀಯರಿಗೆ ಟಿಕೆಟ್ ನೀಡಬೇಕು. ಒಂದು ವೇಳೆ ಮುನಿಯಪ್ಪರಿಗೆ ಟಿಕೆಟ್ ನೀಡಿದ್ದಲ್ಲಿ ನಮ್ಮ ರಾಜೀನಾಮೆ ಅಂಗೀಕರಿಸಿ, ಹೊಸದಾಗಿ ಪದಾಧಿಕಾರಿಗಳನ್ನು ನೇಮಿಸಿಕೊಂಡು ಪಕ್ಷ ಸಂಘಟಿಸಿ' ಎಂದು ಸವಾಲು ಹಾಕಿದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ವಿ.ಶಾಂತಕುಮಾರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೆ.ಆರ್.ನಾಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಸನ್ನ ಕುಮಾರ್ ಇತರರು ಇದ್ದರು.

ಜನತಾ ಪಾರ್ಟಿ: ಅಭ್ಯರ್ಥಿಗಳ ಪಟ್ಟಿ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ನಗರದ ವಿವಿಧ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಜನತಾ ಪಾರ್ಟಿ ಬಿಡುಗಡೆಗೊಳಿಸಿದೆ.

'ರಾಜಾಜಿನಗರದಿಂದ ಬಿ.ಎನ್. ಗೋಪಾಲಕೃಷ್ಣ, ವಿಜಯನಗರದಿಂದ ನಾಗರಾಜ್, ಗೋವಿಂದರಾಜ ನಗರದಿಂದ ಎ. ರಾಜ್, ಗಾಂಧಿ ನಗರದಿಂದ ಅಬ್ದುಲ್ ರವೂಫ್, ಬ್ಯಾಟರಾಜನಪುರದಿಂದ ಈಶ್ವರ್, ಕೆ.ಆರ್. ಪುರದಿಂದ ಚಂದ್ರಶೇಖರ್, ಪುಲಿಕೇಶಿ ನಗರದಿಂದ ಎ. ಸಂದೀಪ್, ರಾಜರಾಜೇಶ್ವರಿ ನಗರದಿಂದ ಸಂತೋಷ್ ಕುಮಾರ್, ಸರ್ವಜ್ಞ ನಗರದಿಂದ ದಿಲೀಪ್ ಕುಮಾರ್, ದಾಸರಹಳ್ಳಿಯಿಂದ ಎಂ.ಸ್ನೇಹಾ, ಮಹಾಲಕ್ಷ್ಮೀ ಲೇಔಟ್‌ನಿಂದ ನಳಿನಿ ಗೌಡ, ಮಲ್ಲೇಶ್ವರದಿಂದ ಎಂ.ಶಿವಕುಮಾರ್ ಹಾಗೂ ಯಶವಂತಪುರದಿಂದ ಜಿ.ಉದಯ ಶಂಕರ್ ಸ್ಪರ್ಧಿಸುವರು' ಎಂದು ತಿಳಿಸಿದೆ.

ಹಿಂದುಳಿದವರಿಗೆ ಆದ್ಯತೆ ನೀಡಲು ಮನವಿ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ




ಶಿವಮೊಗ್ಗ: 'ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮತದಾರರ ಸಂಖ್ಯೆ ಶೇ 55ರಷ್ಟಿದ್ದು, ಟಿಕೆಟ್ ಹಂಚಿಕೆ ವೇಳೆ ಈ ವರ್ಗದ ಅಭ್ಯರ್ಥಿಗಳಿಗೆ ಆದ್ಯತೆ ನೀಡುವಂತೆ ಹೈಕಮಾಂಡ್‌ಗೆ ಮನವಿ ಮಾಡಲಾಗಿದೆ' ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ಸಮಿತಿ ಅಧ್ಯಕ್ಷ ಮಧು ಬಂಗಾರಪ್ಪ ಹೇಳಿದರು.

'ಕಾಂಗ್ರೆಸ್ ಪಕ್ಷ ಬಹುಮತದೊಂದಿಗೆ ಅಧಿಕಾರಕ್ಕೆ ಬರಬೇಕಿದೆ. ಹೀಗಾಗಿ ಗೆಲ್ಲುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಶಿವಮೊಗ್ಗದಲ್ಲಿ ಶಾಸಕ ಕೆ.ಎಸ್.ಈಶ್ವರಪ್ಪ ಹಾಗೂ ವಿಧಾನಪರಿಷತ್ ಸದಸ್ಯ ಆಯನೂರು ಮಂಜುನಾಥ್ ನಡುವಿನ 'ಧಾರಾವಾಹಿ'ಗೂ ಕಾಂಗ್ರೆಸ್‌ಗೂ ಸಂಬಂಧವಿಲ್ಲ. ಅದರ ನಿರ್ಮಾಣ ಹಾಗೂ ಪ್ರಾಯೋಜಕತ್ವವೂ ನಮ್ಮದಲ್ಲ' ಎಂದು ಪ್ರತಿಕ್ರಿಯಿಸಿದ ಅವರು, 'ಆಯನೂರು ಅವರಿಗೆ ಕಾಂಗ್ರೆಸ್ ಟಿಕೆಟ್ ಕೊಡಲಿದೆ ಎಂಬುದೆಲ್ಲ ಊಹಾಪೋಹ' ಎಂದು ಹೇಳಿದರು.

'ಬಿಜೆಪಿ ನಡೆ ಖಂಡಿಸಿ ಕಾಂಗ್ರೆಸ್‌ಗೆ ಸೇರ್ಪಡೆ'

ಪ್ರಜಾವಾಣಿ ವಾರ್ತೆ



ಬಾಬುರಾವ ಚಿಂಚನಸೂರ

ಕಲಬುರಗಿ: 'ಕೋಲಿ ಸಮಾಜವನ್ನು ಪರಿಶಿಷ್ಟ ಜಾತಿಗೆ (ಎಸ್‌ಟಿ) ಸೇರ್ಪಡೆ ಕುರಿತು ಕೊಟ್ಟ ಭರವಸೆ ಉಳಿಸಿಕೊಳ್ಳಲು ಬಿಜೆಪಿ ಮಾತುತಪ್ಪಿತು. ಬಿಜೆಪಿಯ ನಡೆ ಖಂಡಿಸಿ, ಮನನೊಂದು ಕಾಂಗ್ರೆಸ್ ಸೇರಿರುವೆ' ಎಂದು ಕಾಂಗ್ರೆಸ್ ಮುಖಂಡ ಬಾಬುರಾವ ಚಿಂಚನಸೂರ ಸ್ಪಷ್ಟನೆ ನೀಡಿದರು.

'ಬಿಜೆಪಿ ತೊರೆದಿದ್ದರಿಂದ ಚಿತ್ತಾಪುರದಲ್ಲಿ ಬಿಜೆಪಿ ಪ್ರಭಾವ ಕುಸಿದಿದೆ. ಕಲ್ಯಾಣ ಕರ್ನಾಟಕದಾದ್ಯಂತ ಪ್ರಚಾರ ನಡೆಸಿ, ನನ್ನ ಶಕ್ತಿಯನ್ನು ತೋರಿಸುವೆ. ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕೈಯನ್ನು ಇನ್ನಷ್ಟು ಬಲಪಡಿಸಿ, ಪಕ್ಷವನ್ನು ಬೆಳೆಸುವೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಖರ್ಗೆ ಅವರು ಧೀಮಂತ ನಾಯಕ. ಖರ್ಗೆ ಅವರಿಂದ ಕೋಲಿ ಸಮಾಜಕ್ಕೆ ಎಸ್‌ಟಿ ಮೀಸಲಾತಿ ಸಿಗುತ್ತದೆ. ನಾನು ಹೋರಾಟಗಾರ. ನನ್ನದು ತೆರೆದಿಟ್ಟ ಇತಿಹಾಸ. ಅಧಿಕಾರದ ಆಸೆಗಾಗಿ ಕಾಂಗ್ರೆಸ್‌ಗೆ ಬರಲಿಲ್ಲ' ಎಂದರು.

'ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ ನೇತೃತ್ವದಲ್ಲಿ ಪತ್ನಿ ಅಮರೇಶ್ವರಿ ಅವರೊಂದಿಗೆ ಕಾಂಗ್ರೆಸ್ ಸೇರಿರುವೆ. ಎಸ್‌ಎಂ ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ವೇಳೆ ಡಿ.ಕೆ ಶಿವಕುಮಾರ ಅವರು ನೆರವಾಗಿ, 7 ಖಾತೆ ಕೊಡಿಸಿದ್ದರು' ಎಂದರು.

ಉತ್ತರಿಸಲಾಗದೇ ಪತ್ರಿಕಾಗೋಷ್ಠಿ ಅರ್ಧಕ್ಕೆ ಮುಕ್ತಾಯ!: 'ಮಲ್ಲಿಕಾರ್ಜುನ ಖರ್ಗೆ ಮತ್ತು ನಾನು ತಂದೆ–ಮಗ ಇದ್ದಂತೆ. ತಂದೆ ಮೇಲೆ ಮಗ ಮುನಿಸಿಕೊಳ್ಳುತ್ತಾನೆ. ತಂದೆಯಾದವನು ಮಗನನ್ನು ಕರೆಯಲೇಬೇಕು' ಎಂದು ಬಾಬುರಾವ ಚಿಂಚನಸೂರ ತಿಳಿಸಿದರು.

ಕಾಂಗ್ರೆಸ್ ಸೇರ್ಪಡೆ ಹಿನ್ನೆಲೆಯಲ್ಲಿ ಸುದ್ದಿಗಾರರು, 'ಖರ್ಗೆ ಕುಟುಂಬದ ವಿರುದ್ಧ ತೊಡೆ ತಟ್ಟಿದ್ದು', 'ಕೋಲಿ ಸಮಾಜಕ್ಕೆ ಖರ್ಗೆಯಿಂದ ಕೊಡಲಿ ಪೆಟ್ಟು', '40 ವರ್ಷ ಕೋಲಿ ಸಮಾಜವನ್ನು ತುಳಿದದ್ದು ಖರ್ಗೆ', 'ಬಿಜೆಪಿ ನನ್ನ ತಾಯಿ ಪಕ್ಷ' ಎಂದೆಲ್ಲ ನೀವು ಹೇಳಿಕೆ ನೀಡಿದ್ದೀರಿ. ಈಗ ಹೇಗೆ ಕಾಂಗ್ರೆಸ್ ಸೇರಿದ್ದೀರಿ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅವರು, 'ಖರ್ಗೆ ರಾಷ್ಟ್ರ ಮಟ್ಟದ ದೊಡ್ಡ ನಾಯಕ. ಅವರು ಮಾತಿಗೆ ನಿಂತರೆ ಸಂಸತ್ತು ಗಡ ಗಡ ನಡುಗುತ್ತದೆ' ಎಂದು ಹೊಗಳತೊಡಗಿದರು. 'ಖರ್ಗೆ ಅವರ ಗುಣಗಾನ ಬಿಟ್ಟು ಪ್ರಶ್ನೆಗಳಿಗೆ ಉತ್ತರಿಸಿ' ಎಂದು ಸುದ್ದಿಗಾರರು ಆಗ್ರಹಿಸಿದರು. ಆಗ ಅವರೇ ಎಲ್ಲರಿಗೂ ಕೈ ಮುಗಿದು ಪತ್ರಿಕಾಗೋಷ್ಠಿಯನ್ನು ಅರ್ಧಕ್ಕೆ ಮುಗಿಸಿ ಹೊರಟರು.

ಸಂಕ್ಷಿಪ್ತ ಸುದ್ದಿ

ಗದಗ: ಪ್ರತ್ಯೇಕ ಪ್ರಕರಣ ₹19 ಲಕ್ಷ ನಗದು ಜಪ್ತಿ

ಗದಗ: ಜಿಲ್ಲೆಯ ವಿವಿಧೆಡೆ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹19 ಲಕ್ಷಕ್ಕೂ ಹೆಚ್ಚು ಹಣವನ್ನು ಬುಧವಾರ ಪ್ರತ್ಯೇಕ ಪ್ರಕರಣಗಳಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಗೌಸ್ ಮೊಹಿದ್ದೀನ್ ಹಾಗೂ ವಸಂತ ಯಲ್ಲಪ್ಪ ಅವರು ವಾಹನದಲ್ಲಿ ದಾಖಲೆಗಳಿಲ್ಲದೇ ಹಣ ಸಾಗಿಸುತ್ತಿದ್ದಾಗ ಸಿಪಿಐ ಜಯಂತ್ ಗೌಳಿ ನೇತೃತ್ವದ ತಂಡ ಕುಟೀರ ಚೆಕ್‌ಪೋಸ್ಟ್‌ನಲ್ಲಿ ಪರಿಶೀಲಿಸಿ ಹಣ ವಶಕ್ಕೆ ಪಡೆಯಿತು. ಮಲ್ಲಿಕಾರ್ಜುನ, ಹಮೀರ್ ಎಂಬವರು ಗಜೇಂದ್ರಗಡದಿಂದ ಗದಗಕ್ಕೆ ಕಾರಿನಲ್ಲಿ ಕೊಂಡೊಯ್ಯುತ್ತಿದ್ದ ₹1.43 ಲಕ್ಷ ಅನ್ನು ಬೆಟಗೇರಿ ಠಾಣೆ ಪೊಲೀಸರು ದಂಡಿನ ದುರ್ಗಮ್ಮ ಚೆಕ್ ಪೋಸ್ಟ್‌ನಲ್ಲಿ ವಶಪಡಿಸಿಕೊಂಡಿದ್ದಾರೆ.

ಗ್ರಾಮಾಂತರ ಠಾಣೆ ಪೊಲೀಸರು ದುಂದೂರು ಚೆಕ್‌ಪೋಸ್ಟ್‌ನಲ್ಲಿ ಶಿವಾನಂದ ಶ್ರೀಶೈಲಪ್ಪ ಎಂಬುವರು ಸಾಗಣೆ ಮಾಡುತ್ತಿದ್ದ ₹46,250 ಮೌಲ್ಯದ ಮದ್ಯ ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಬಸವರಾಜ ಗೋಣೆಪ್ಪ ಎಂಬುವರು ಕಾರಿನಲ್ಲಿ ಸಾಗಿಸುತ್ತಿದ್ದ ₹4.55 ಲಕ್ಷವನ್ನು ಲಕ್ಷ್ಮೇಶ್ವರ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ.

ಬಾದಾಮಿ: ಸಿದ್ದರಾಮಯ್ಯ ರೋಡ್ ಶೋ ಇಂದು

ಬಾಗಲಕೋಟೆ: ಜಿಲ್ಲೆಯ ಬಾದಾಮಿಯಲ್ಲಿ ವಿಧಾನಸಭೆ ವಿರೋಧಪಕ್ಷ ನಾಯಕ ಸಿದ್ದರಾಮಯ್ಯ ಶುಕ್ರವಾರ ರೋಡ್ ಶೋ ನಡೆಸುವರು. ಕ್ಷೇತ್ರ ಆಯ್ಕೆ ಕುರಿತ ಚರ್ಚೆ ನಡೆದಿರುವ ಹಿನ್ನೆಲೆಯಲ್ಲಿ ಅವರ ರೋಡ್ ಶೋ ಮಹತ್ವ ಪಡೆದುಕೊಂಡಿದೆ.

ಬಾದಾಮಿಯ ರಾಮದುರ್ಗ ಕ್ರಾಸ್‌ನಿಂದ ಎಪಿಎಂಸಿ ಆವರಣದವರೆಗೆ ಮಧ್ಯಾಹ್ನ 12.30ಕ್ಕೆ ರೋಡ್ ಶೋ ನಡೆಸಲಿದ್ದಾರೆ. 'ಮಧ್ಯಾಹ್ನ ವಿವಿಧ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. 30 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳಲಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಹೊಳೆಬಸು ಶೆಟ್ಟರ್ ತಿಳಿಸಿದ್ದಾರೆ. ಬಾದಾಮಿ ಕ್ಷೇತ್ರದಿಂದಲೇ ಸ್ಪರ್ಧಿಸಬೇಕು ಎಂದು ಅವರ ಬೆಂಬಲಿಗರು ಆಗ್ರಹಿಸುತ್ತಿದ್ದಾರೆ.

9.33 ಕೆ.ಜಿ ಚಿನ್ನ ವಶ

ಚಿಕ್ಕಮಗಳೂರು: ಸಾರಿಗೆ ಗೋದಾಮೊಂದರಲ್ಲಿ ಸಂಗ್ರಹಿಸಿಟ್ಟಿದ್ದ 666 ಸೀರೆ, ತರೀಕೆರೆ ಬಳಿ ವಾಹನದಲ್ಲಿ ಸಾಗಿಸುತ್ತಿದ್ದ ಅಂದಾಜು ₹2.58 ಕೋಟಿ ಮೌಲ್ಯದ 9.33 ಕೆ.ಜಿ ಚಿನ್ನವನ್ನು ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್ ತಂಡದವರು ಬುಧವಾರ ವಶಪಡಿಸಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ತಿಳಿಸಿದರು.

ತಪಾಸಣೆ ವೇಳೆ 9.33 ಕೆ.ಜಿ ಚಿನ್ನ ಸಿಕ್ಕಿದೆ. ವಾಹನದವರು ಹಾಜರುಪಡಿಸಿದ ದಾಖಲೆಗಳಲ್ಲಿ ವ್ಯತ್ಯಾಸ ಕಂಡುಬಂದಿದ್ದರಿಂದ ಚಿನ್ನವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಫ್ಲೈಯಿಂಗ್ ಸ್ಕ್ವಾಡ್ ತಂಡದವರು ಖಚಿತ ಮಾಹಿತಿ ಮೇರೆಗೆ ನಗರದ ಖಾಸಗಿ ಸಾರಿಗೆ ಸಂಸ್ಥೆಯೊಂದರ ಗೋದಾಮಿನ ಮೇಲೆ ಕಾರ್ಯಾಚರಣೆ ನಡೆಸಿ 666 ಸೀರೆ ಜಪ್ತಿ ಮಾಡಿದರು. ಗುಜರಾತ್‌ನಿಂದ ಚಂದನ್‌ಕುಮಾರ್ ಜೈನ್ ಎಂಬವರ ಹೆಸರಿಗೆ ಸೀರೆಗಳನ್ನು ಕಳಿಸಲಾಗಿದೆ. ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಯುತ್ತಿದೆ ಎಂದರು.

ದೀರ್ಘದಂಡ ನಮಸ್ಕಾರ ಹಾಕುವಾಗ ಕಾರು ಹರಿದು ಯುವತಿ ಸಾವು

ಪ್ರಜಾವಾಣಿ ವಾರ್ತೆ



ಐಶ್ವರ್ಯ ನಾಯಿಕ

ಅಥಣಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ತೀರ್ಥ ಗ್ರಾಮದಲ್ಲಿ ಗುರುವಾರ ದೀರ್ಘದಂಡ ನಮಸ್ಕಾರ ಹಾಕುವ ವೇಳೆ, ತಲೆಯ ಮೇಲೆ ಕಾರು ಹರಿದು ಯುವತಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ತೀರ್ಥ ಗ್ರಾಮದ ಐಶ್ವರ್ಯ ನಾಯಿಕ (23) ಮೃತರು.

ಗ್ರಾಮದೇವ ಜಾತ್ರೆಯ ಅಂಗವಾಗಿ ಹರಕೆ ಹೊತ್ತಿದ್ದ ಅವರು ದೀರ್ಘದಂಡ ನಮಸ್ಕಾರ ಹಾಕುತ್ತಿದ್ದರು. ಕೃಷ್ಣಾ ನದಿಯಿಂದ ದೇವಸ್ಥಾನವರೆಗೆ ನಮಸ್ಕಾರ ಹಾಕುತ್ತ ಬರುವಾಗ ವೇಗವಾಗಿ ಬಂದ ಕಾರು ಯುವತಿಯ ತಲೆ ಮೇಲೆ ಹರಿಯಿತು. ಕಾರ್ ಚಾಲಕ ಪರಾರಿಯಾಗಿದ್ದಾನೆ. ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎನ್‌ಎಚ್‌ಎಂ: ನೌಕರರ ವಜಾಕ್ಕೆ ಸೂಚನೆ

ಬೆಂಗಳೂರು: 'ಎಚ್ಚರಿಕೆ ನೋಟಿಸ್ ನೀಡಿದರೂ 48 ಗಂಟೆಯೊಳಗೆ ಕರ್ತವ್ಯಕ್ಕೆ ಹಾಜರಾಗದ ಪ್ರತಿಭಟನಾನಿರತ ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಸಿಬ್ಬಂದಿಯನ್ನು ವಜಾಗೊಳಿಸಿ, ತೆರವಾದ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಬೇಕು' ಎಂದು ಎನ್‌ಎಚ್‌ಎಂ ನಿರ್ದೇಶಕರು ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ತುರ್ತು ಸಭೆ ನಡೆಸಿ, ಸಿಬ್ಬಂದಿಯನ್ನು ವಜಾಗೊಳಿಸುವ ಕುರಿತು ನಿರ್ಣಯ ಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ. ಪ್ರತಿಭಟನೆಯನ್ನು ನಿಲ್ಲಿಸಿ, 48 ಗಂಟೆಯೊಳಗೆ ಕರ್ತವ್ಯಕ್ಕೆ ಹಾಜರಾಗುವಂತೆ ಮಾ.16ರಂದು ಎಚ್ಚರಿಕೆ ನೋಟಿಸ್ ನೀಡಲಾಗಿತ್ತು. ಮುಷ್ಕರ ಮುಂದುವರಿಸಿದ ಕಾರಣ ಸಾರ್ವಜನಿಕ ಹಿತದೃಷ್ಟಿಯಿಂದ ಎಸ್ಮಾ ಕಾಯ್ದೆ ಜಾರಿಗೊಳಿಸುವಂತೆ ಸೂಚನೆ ನೀಡಲಾಗಿತ್ತು. ಕೆಲವು ಜಿಲ್ಲೆಗಳ ನೌಕರರು ಪೂರ್ಣ ಪ್ರಮಾಣದಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ ಎಂದು ನಿರ್ದೇಶಕರು ತಿಳಿಸಿದ್ದಾರೆ.

ಎನ್‌ಎಚ್‌ಎಂ ಅಡಿ 30,574 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಳಗುತ್ತಿಗೆ ನೌಕರರ ಸಂಘವು ವಿವಿಧ ಬೇಡಿಕೆಗಳ ಸಂಬಂಧ ಫೆ.13ರಿಂದಲೂ ಪ್ರತಿಭಟನೆ ನಡೆಸುತ್ತಿದೆ. ಶೇ 15ರಷ್ಟು ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗಳನ್ನು ಈಗಾಗಲೇ ಈಡೇರಿಸಲಾಗಿದೆ. ಆದರೂ ಕಾಯಂಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ವಿಚಾರವಾಗಿ ಬೇರೆ ರಾಜ್ಯಗಳನ್ನು ಸಂಪರ್ಕಿಸಿದಾಗ, ಮಣಿಪುರ ಹೊರತುಪಡಿಸಿ ಬೇರೆ ಯಾವುದೇ ರಾಜ್ಯದಲ್ಲಿ ನೌಕರರನ್ನು ಕಾಯಂಗೊಳಿಸಿಲ್ಲ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಸಾರಿಗೆ ಮುಷ್ಕರಕ್ಕೆ ತಡೆ

ಒಂದನೇ ಪುಟದಿಂದ...

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಸಾರಿಗೆ ನೌಕರರು ತಮ್ಮ ಬೇಡಿಕೆ ಈಡೇರಿಕೆಗಾಗಿ ನಡೆಸುವ ಕಾನೂನಿನ ಪ್ರಕ್ರಿಯೆಗಳಿಗೆ ಅರ್ಜಿದಾರರ ವಿರೋಧವಿಲ್ಲ. ಆದರೆ, ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಇದೇ 24ರಂದು (ಶುಕ್ರವಾರ) ಮುಷ್ಕರ ನಡೆಸಲು ವೇದಿಕೆ ಕೈಗೊಂಡಿರುವ ನಿರ್ಧಾರದಿಂದ ಸಾಕಷ್ಟು ಜನರಿಗೆ ಅನನುಕೂಲ ಉಂಟಾಗಲಿದೆ' ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಸರ್ಕಾರದ ಪರ ವಕೀಲರು, 'ಪ್ರಕರಣಕ್ಕೆ ಸಂಬಂಧಿಸಿದಂತೆ ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆಯೊಂದಿಗೆ ಕಾರ್ಮಿಕ ಇಲಾಖೆ ಆಯುಕ್ತರು ಇದೇ 20ರಂದು ಮಧ್ಯಾಹ್ನ 2.30ಕ್ಕೆ ಸಂಧಾನ ಸಭೆ ಏರ್ಪಡಿಸಿದ್ದರು. ಆದರೆ, ಯಾವುದೇ ನಿರ್ದಿಷ್ಟ ನಿರ್ಣಯಕ್ಕೆ ಬರುವಲ್ಲಿ ಸಭೆ ವಿಫಲವಾಯಿತು. ಹಾಗಾಗಿ, ಏಪ್ರಿಲ್ 6ರಂದು ಬೆಳಗ್ಗೆ 11.30ಕ್ಕೆ ಪುನಃ ಸಂಧಾನ ಸಭೆ ನಿಗದಿಪಡಿಸಲಾಗಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮುಷ್ಕರ ನಡೆಸುವುದರಿಂದ ಸಾರ್ವಜನಿಕರ ಸಂಚಾರ, ಉದ್ಯೋಗಿಗಳು, ಆಸ್ಪತ್ರೆ, ಔಷಧಾಲಯಗಳ ಸಿಬ್ಬಂದಿ ಮತ್ತು ವಾರ್ಷಿಕ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಲಿದೆ. ಇದನ್ನು ತಪ್ಪಿಸಲು ಮೂರು ವಾರ ಕಾಲ ವೇದಿಕೆ ಮುಷ್ಕರ ನಡೆಸಬಾರದು' ಎಂದು ವೇದಿಕೆಗೆ ತಾಕೀತು ಮಾಡಿತು.

'ಈ ಮಧ್ಯಂತರ ಆದೇಶವು ಏಪ್ರಿಲ್ 6ರಂದು ಸಂಧಾನ ಸಭೆ ನಡೆಸುವುದಕ್ಕೆ ಯಾವುದೇ ಅಡ್ಡಿ ಉಂಟು ಮಾಡುವುದಿಲ್ಲ. ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಿಸುವ ಉದ್ದೇಶದಿಂದ ಈ ಮಧ್ಯಂತರ ಆದೇಶ ಹೊರಡಿಸಲಾಗುತ್ತಿದೆ. ವೇದಿಕೆ ತನ್ನ ಯಾವುದೇ ಬೇಡಿಕೆಗಳಿದ್ದರೆ ಸಂಧಾನ ಸಭೆಯಲ್ಲಿ ಮಂಡಿಸಬೇಕು' ಎಂದು ಸೂಚಿಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯವ್ಯ-ಕಲ್ಯಾಣ ಕರ್ನಾಟಕ ಸಾರಿಗೆ ನಿಗಮ, ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಮತ್ತು ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ನಟ ಚೇತನ್‌ಗೆ ಜಾಮೀನು

ಬೆಂಗಳೂರು: 'ಸಾಮಾಜಿಕ ಮಾಧ್ಯಮಗಳಲ್ಲಿ ಬರಹ ಪ್ರಕಟಿಸಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ' ಎಂಬ ಆರೋಪದಡಿ ಬಂಧಿಸಲಾಗಿದ್ದ ನಟ ಎ. ಚೇತನ್ ಕುಮಾರ್ ಅವರಿಗೆ ನಗರದ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿದೆ.

'ಚೇತನ್ ಅವರು ಹಿಂದೂ ಧರ್ಮದ ಬಗ್ಗೆ ಫೇಸ್‌ಬುಕ್, ಟ್ವಿಟರ್‌ನಲ್ಲಿ ಬರಹ ಪ್ರಕಟಿಸಿದ್ದಾರೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ' ಎಂದು ಆರೋಪಿಸಿ ಶಿವಕುಮಾರ್ ಎಂಬುವರು ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಶೇಷಾದ್ರಿಪುರ ಪೊಲೀಸರು, ಚೇತನ್ ಅವರನ್ನು ಮಾರ್ಚ್ 21ರಂದು ಬಂಧಿಸಿದ್ದರು. ನಂತರ, ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿತ್ತು. .

ಪದ್ಮ ಪುರಸ್ಕೃತರು



ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೇಂದ್ರದ ಮಾಜಿ ಸಚಿವ ಎಸ್.ಎಂ. ಕೃಷ್ಣ ಅವರಿಗೆ ಪದ್ಮ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಿದರು –ಪಿಟಿಐ ಚಿತ್ರ



ದ್ರೌಪದಿ ಮುರ್ಮು ಅವರು ಶಿಡ್ಲಘಟ್ಟ ತಾಲ್ಲೂಕಿನ ಪಿಂಡಿಪಾಪನಹಳ್ಳಿಯ ತಮಟೆ ಕಲಾವಿದರಾದ ಮುನಿವೆಂಕಟಪ್ಪ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು

'₹50 ಲಕ್ಷಕ್ಕೆ ಬ್ಲ್ಯಾಕ್‌ಮೇಲ್'

ಹೊಸಪೇಟೆ (ವಿಜಯನಗರ): 'ಕರ್ನಾಟಕ ರಕ್ಷಣಾ ವೇದಿಕೆ ಪ್ರಜಾಸೇನೆ ರಾಜ್ಯ ಘಟಕದ ಅಧ್ಯಕ್ಷ ಕೆ.ಆರ್. ಕುಮಾರಸ್ವಾಮಿ ಅವರು ₹50 ಲಕ್ಷಕ್ಕಾಗಿ ನನಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಅವರು ಕೇಳಿದಷ್ಟು ಹಣ ಕೊಡದ ಕಾರಣ ನನ್ನ ಮಗ ಸಿದ್ಧಾರ್ಥ ಸಿಂಗ್ ವಿರುದ್ಧ ಸರ್ಕಾರಿ ಜಮೀನು ಕಬಳಿಸಿದ ಆರೋಪ ಮಾಡುತ್ತಿದ್ದಾರೆ. ನನ್ನ ಮಗ ಅವರ ವಿರುದ್ಧ ಮಾನನಷ್ಟ ಕ್ರಿಮಿನಲ್ ಮೊಕದ್ದಮೆ ಹೂಡಲು ತೀರ್ಮಾನಿಸಿದ್ದಾನೆ' ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ತಿಳಿಸಿದರು.

ತಾಲ್ಲೂಕಿನ ವೆಂಕಟಾಪುರದಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ದೇವಾಲಯಕ್ಕೆ ಸೇರಿದ 180 ಎಕರೆ ಇನಾಮು ಜಮೀನು 11 ಜನ ಕಬಳಿಸಿದ್ದಾರೆ' ಎಂದು ಕುಮಾರಸ್ವಾಮಿ ಆರೋಪ ಮಾಡಿದ್ದಾರೆ. ನನ್ನ ಮಗ ಸಿದ್ಧಾರ್ಥ ಸಿಂಗ್, ಭಾಮೈದ ಧರ್ಮೇಂದ್ರ ಸಿಂಗ್ ಹೆಸರಿದೆ. ಇತರೆ ಒಂಬತ್ತು ಜನ ಯಾರೆಂಬುದು ನನಗೆ ಗೊತ್ತಿಲ್ಲ' ಎಂದರು. 'ನಾನು ಸಚಿವರಿಗೆ ಬ್ಲ್ಯಾಕ್‌ಮೇಲ್ ಮಾಡಿದ್ದೇನೆ ಎನ್ನುವುದು ಶುದ್ಧ ಸುಳ್ಳು. ನಾನೇ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಪ್ರಜಾಸೇನೆ ರಾಜ್ಯ ಘಟಕದ ಅಧ್ಯಕ್ಷ ಕೆ.ಆರ್. ಕುಮಾರಸ್ವಾಮಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಮಹೇಶ ಜೋಶಿ ಆರೋಪ • ಸದಸ್ಯತ್ವ ರದ್ದತಿ, ಮಾರ್ಗಸೂಚಿ ಬಗ್ಗೆ ಸ್ಪಷ್ಟನೆ

'ಅಸ್ತಿತ್ವಕ್ಕಾಗಿ ಕಸಾಪ ವಿರುದ್ಧ ಪಿತೂರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕಾರ್ಯಚಟುವಟಿಕೆಗಳನ್ನು ಸಹಿಸಲಾಗದ ಒಂದು ಗುಂಪು, ತಮ್ಮ ಅಸ್ತಿತ್ವಕ್ಕಾಗಿ ಪರಿಷತ್ತಿನ ವಿರುದ್ಧ ಪಿತೂರಿ ಮಾಡುತ್ತಿದೆ. ಸ್ವಾಯತ್ತತೆ ಹೊಂದಿರುವ ಈ ಸಂಸ್ಥೆಯ ಆಡಳಿತದಲ್ಲಿ ಹಸ್ತಕ್ಷೇಪಕ್ಕೆ ಅವಕಾಶ ನೀಡುವುದಿಲ್ಲ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಹಿತ್ಯ ಪರಿಷತ್ತಿಗೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಸ್ಪಷ್ಟನೆ ನೀಡಿದರು.

'ಚುನಾವಣೆ ಪೂರ್ವದಿಂದಲೂ ಎಸ್.ಜಿ.ಸಿದ್ಧರಾಮಯ್ಯ, ಡಾ.ವಸುಂಧರ ಭೂಪತಿ, ಬಂಜಗೆರೆ ಜಯಪ್ರಕಾಶ್, ಕೆ. ಶರೀಫಾ, ಎಚ್.ಎಲ್. ಪುಷ್ಪಾ, ಆರ್.ಜಿ. ಹಳ್ಳಿ ನಾಗರಾಜ್, ಪುರುಷೋತ್ತಮ ಬಿಳಿಮಲೆ, ವಿಮಲಾ ಕೆ.ಎಸ್. ಸೇರಿ ಕೆಲವರು ಪ್ರತಿಯೊಂದಕ್ಕೂ ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಅವರನ್ನು ಬಿಟ್ಟರೆ ಬೇರೆಯವರಿಂದ ವಿರೋಧ ವ್ಯಕ್ತವಾಗಿಲ್ಲ. ತಮ್ಮ ಅಸ್ತಿತ್ವಕ್ಕಾಗಿ ಪರಿಷತ್ತಿನ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡ ಸರದಾರರ ಜೊತೆಗೆ ವಿರೋಧಿಸುವವರ ಗುಂಪು ಗುರುತಿಸಿಕೊಂಡಿದೆ. ಹಾವೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಯಶಸ್ಸನ್ನು ಅರಗಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ' ಎಂದು ಹೇಳಿದರು.

'ಪರಿಷತ್ತಿನ ಬಗ್ಗೆ ನಿಜವಾದ ಕಾಳಜಿ, ಗೌರವ ಇದ್ದರೆ ಚರ್ಚೆಯ ಮೂಲಕ ಉತ್ತರ ಕಂಡುಕೊಳ್ಳಲು ಅವಕಾಶವಿದೆ. ಆದರೆ, ಇದಕ್ಕೆ ಸಿದ್ಧರಿಲ್ಲದವರು ಕಲ್ಲು ಹೊಡೆಯುವ ಕೆಲಸ ಮಾಡುತ್ತಿದ್ದಾರೆ. ಕನ್ನಡಿಗರಿಂದ ಚುನಾಯಿತರಾದ ನಮಗೆ ಕನ್ನಡ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು. ಹೆಜ್ಜೆ ಹೆಜ್ಜೆಗೂ ಪ್ರತಿರೋಧ ತೋರುವುದು ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದಂತೆ' ಎಂದರು.

'ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಹೊರಡಿಸಿರುವುದು ಸರ್ವಾಧಿಕಾರಿ ಧೋರಣೆಯಲ್ಲ. ನಮ್ಮ ಕಾರ್ಯವ್ಯಾಪ್ತಿಯಲ್ಲಿ ಅಧಿಕಾರ ಚಲಾಯಿಸಲಾಗಿದೆ. ಸಭೆಯಲ್ಲಿ ಮಾತನಾಡಲು ಅವಕಾಶ ಸಿಗುತ್ತಿಲ್ಲ ಎಂದು ಕೆಲ ಸದಸ್ಯರು ಅಳಲು ತೋಡಿಕೊಂಡಿದ್ದರು. ಸಭೆಯಲ್ಲಿ ಶಿಸ್ತು ಅಗತ್ಯ. ಎಲ್ಲ ಕಡೆಯೂ ಈ ರೀತಿಯ ಕಾರ್ಯಸೂಚಿ ಸಹಜ. ರಾಜ್ಯಾಧ್ಯಕ್ಷನಾಗಿ ನಾನು ವಕ್ತಾರನಾಗಿರುತ್ತೇನೆ. ಸರಿಯಾದ ಮಾಹಿತಿ ಜನರಿಗೆ ದೊರೆಯಬೇಕು. ಆದ್ದರಿಂದ ಮಾರ್ಗಸೂಚಿಯಲ್ಲಿ ಈ ಬಗ್ಗೆ ತಿಳಿಸಲಾಗಿದೆ' ಎಂದು ಮಹೇಶ ಜೋಶಿ ಹೇಳಿದರು.

'ಗೋವಿಂದ ಭಟ್ಟರ ಹೆಸರಿನಲ್ಲಿ ವಿವಾದ'

'ಹಾವೇರಿ ಸಾಹಿತ್ಯ ಸಮ್ಮೇಳನಕ್ಕೆ ತೊಂದರೆ ಕೊಡಬೇಕೆಂದು ಪಿತೂರಿ ಮಾಡಿ, ಶಿಶುನಾಳ ಶರೀಫರ ಗುರು ಗೋವಿಂದ ಭಟ್ಟರನ್ನೂ ವಿವಾದಕ್ಕೆ ಎಳೆದುತರಲಾಯಿತು. ಸಮ್ಮೇಳನಕ್ಕೆ ನಾಲ್ಕು ದಿನವಿರುವಾಗ ವ್ಯಕ್ತಿಯೊಬ್ಬರು ನಾನು ಗೋವಿಂದ ಭಟ್ಟರ ವಂಶದವನಲ್ಲ ಎಂದು ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿದರು. ಹಣದ ಆಮಿಷಕ್ಕೆ ಈ ಕೆಲಸ ಮಾಡಿರುವುದಾಗಿ ಅವರೇ ಹೇಳಿದ್ದಾರೆ. ನಾನು ಆ ವಂಶದವನು ಎನ್ನುವುದಕ್ಕೆ ಪುಸ್ತಕದಲ್ಲಿಯೂ ಉಲ್ಲೇಖವಿದೆ. ದೂರದರ್ಶನದಲ್ಲಿ ಇದ್ದಾಗ 'ಈಶ್ವರ ಅಲ್ಲಾ ನೀನೇ ಎಲ್ಲಾ' ಧಾರವಾಹಿ ಪ್ರಸಾರವಾಗುವಾಗಲೂ ಗೋವಿಂದ ಭಟ್ಟರ ಮರಿಮೊಮ್ಮಗ ಅಂತ ಬರುತ್ತಿತ್ತು. ಆಗ ವಿರೋಧ ವ್ಯಕ್ತಪಡಿಸದವರು ಈಗ ಏಕೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ' ಎಂದು ಮಹೇಶ ಜೋಶಿ ಪ್ರಶ್ನಿಸಿದರು.

'ಸದಸ್ಯತ್ವ ಅಮಾನತು ಮೊದಲಲ್ಲ'

'ಬೆಂಗಳೂರು ದೂರದರ್ಶನ ಕೇಂದ್ರದ ಸಹಾಯಕ ನಿರ್ದೇಶಕಿಯಾದ ನಿರ್ಮಲಾ ಸಿ. ಎಲಿಗಾರ ಅವರು 2023ರ ಜ.3ರಂದು 31 ಮಂದಿಗೆ ವಸತಿ ವ್ಯವಸ್ಥೆ, ಜನರೇಟರ್ ನೀಡುವಂತೆ ಕೇಳಿದರು. ದೂರದರ್ಶನ ಸರ್ಕಾರಿ ಸಂಸ್ಥೆ. ಸರ್ಕಾರಿ ನೌಕರರು ಈ ರೀತಿ ಸೌಲಭ್ಯ ಕೇಳುವುದು ಭ್ರಷ್ಟಾಚಾರ. ಅವರು ಉದ್ದೇಶಪೂರ್ವಕವಾಗಿ ನಮ್ಮ ವಿರುದ್ಧ ಆರೋಪಿಸಿ, ದೂರದರ್ಶನ ಕಚೇರಿಯಲ್ಲಿ ಮೌನಾಚರಣೆ ನಡೆಸಿದರು. ಈ ಬಗ್ಗೆ ನೋಟಿಸ್ ನೀಡಿ, ಉತ್ತರ ಕೇಳಲಾಗಿತ್ತು.ಅಧ್ಯಕ್ಷರಿಗೆ ಇರುವ ಅಧಿಕಾರದಡಿಯೇ ಅವರ ಸದಸ್ಯತ್ವವನ್ನು ಅಮಾನತುಗೊಳಿಸಲಾಗಿದೆ' ಎಂದು ಮಹೇಶ ಜೋಶಿ ಹೇಳಿದರು.

'1965ರಲ್ಲಿ ಪರಿಷತ್ತಿನ ವಿರುದ್ಧ ಅವಹೇಳನಕಾರಿ ಮಾತನಾಡಿದ್ದಕ್ಕೆ ಅಂದಿನ ಅಧ್ಯಕ್ಷ ಜಿ. ವೆಂಕಟಸುಬ್ಬಯ್ಯ ಅವರು ಎಂ.ವಿ.ಸುಬ್ಬರಾವ್ ಅವರನ್ನು ಸದಸ್ಯತ್ವದಿಂದ ವಜಾ ಮಾಡಿದ್ದರು. 1981ರಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಅವರ ಸದಸ್ಯತ್ವವನ್ನು ಹಂ.ಪ. ನಾಗರಾಜಯ್ಯ ವಜಾಗೊಳಿಸಿದ್ದರು' ಎಂದು ತಿಳಿಸಿದರು.

ಪಂಚಮಸಾಲಿ ಬೇಡಿಕೆ ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಮೀಸಲು ಯಥಾಸ್ಥಿತಿ ಆದೇಶ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2-ಎ ಮೀಸಲಾತಿ ನೀಡಬಾರದು ಮತ್ತು ಮೀಸಲು ಪ್ರವರ್ಗ ಮಾರ್ಪಾಡು ಮಾಡುವಂತೆ ಕೋರಿ ಯಾವುದೇ ಜಾತಿ, ಉಪಜಾತಿ, ಸಮುದಾಯ ಬುಡಕಟ್ಟುಗಳು ಸಲ್ಲಿಸುವ ಬೇಡಿಕೆಗಳನ್ನು ಸರ್ಕಾರ ಪ್ರೋತ್ಸಾಹಿಸದಂತೆ ತಡೆ ನೀಡಬೇಕು' ಎಂಬ ಮಧ್ಯಂತರ ಮನವಿಗೆ ನೀಡಲಾಗಿದ್ದ ತಡೆ ಮತ್ತು ಯಥಾಸ್ಥಿತಿ ಕಾಯ್ದುಕೊಂಡು ಹೋಗಬೇಕು ಎಂಬ ಆದೇಶವನ್ನು ಹೈಕೋರ್ಟ್ ತೆರವು ಮಾಡಿದೆ.

ಈ ಸಂಬಂಧ ಬೆಂಗಳೂರಿನ ಜ್ಞಾನಭಾರತಿ ಮುತ್ತುರಾಜು ನಗರದ ನಿವಾಸಿ ಡಿ.ಜಿ. ರಾಘವೇಂದ್ರ ಬಿನ್ ಸೂರ್ಯ ದೇವಾಡಿಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರವಾಗಿ ವಿಶೇಷವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಆಲಿಸಿದ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ 2023ರ ಜನವರಿ 12ರಂದು ನೀಡಿದ್ದ ಮಧ್ಯಂತರ ಆದೇಶವನ್ನು ತೆರವುಗೊಳಿಸಿತು.

'ಸರ್ಕಾರವು, 2-ಎ ಮೀಸಲಾತಿಗೆ ತೊಂದರೆಯಾಗುವಂತಹ ಯಾವುದೇ ಕಾರ್ಯಕ್ಕೆ ಮುಂದಾಗುವುದಿಲ್ಲ. ಪ್ರವರ್ಗ 2-ಎಗೆ ಲಭ್ಯವಿರುವ ಮೀಸಲಾತಿಗೆ ಅಡ್ಡಿ ಉಂಟುಮಾಡುವ ಉದ್ದೇಶವನ್ನು ಸರ್ಕಾರ ಹೊಂದಿಲ್ಲ. ಆದಾಗ್ಯೂ, ಈ ಪ್ರಕರಣದಲ್ಲಿ ಸರ್ಕಾರ ಕೈಗೊಳ್ಳುವ ಯಾವುದೇ ನಿರ್ಧಾರದಂತೆ ಪ್ರವರ್ಗ 2-ಎ ಅಡಿಯಲ್ಲಿನ ಮೀಸಲಾತಿಯ ಪ್ರಮಾಣದಲ್ಲಿ ಬದಲಾವಣೆ ಮಾಡುವುದಿಲ್ಲ' ಎಂದು ವಾಗ್ದಾನ ನೀಡಿದರು. ನಂತರ, ಈ ಕುರಿತಂತೆ ನ್ಯಾಯಾಲಯಕ್ಕೆ ಲಿಖಿತ ಮುಚ್ಚಳಿಕೆ ಸಲ್ಲಿಸಿದರು.

ಇದಕ್ಕೂ ಮುನ್ನ ಅರ್ಜಿದಾರರ ಪರ ವಕೀಲ ಎಚ್.ವಿ.ಮಂಜುನಾಥ್ ಸರ್ಕಾರದ ಮನವಿಗೆ ಬಲವಾದ ಆಕ್ಷೇಪಣೆ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಮೀಸಲಾತಿ ಕಲ್ಪಿಸುವ ಸಂಬಂಧ ಸರ್ಕಾರ ಕೈಗೊಳ್ಳುವ ಯಾವುದೇ ನಿರ್ಧಾರವು ಈ ಅರ್ಜಿಯ ಕುರಿತಂತೆ ಅರ್ಜಿ ಮೇಲಿನ ಅಂತಿಮ ಆದೇಶಕ್ಕೆ ಒಳಪಟ್ಟಿರಲಿದೆ' ಎಂದು ಸ್ಪಷ್ಟಪಡಿಸಿತು.

ಆಕ್ಷೇಪಣೆ ಏನಿತ್ತು?: ರಾಜ್ಯ ಸರ್ಕಾರ ಈ ಹಿಂದೆ ನ್ಯಾಯಪೀಠಕ್ಕೆ ಸಲ್ಲಿಸಿದ್ದ ಆಕ್ಷೇಪಣೆಯಲ್ಲಿ, 'ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆ-1995ರ ಕಲಂ 9ರ ಪ್ರಕಾರ ಯಾವುದಾದರೂ ಒಂದು ಸಮುದಾಯ ತಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸುವಂತೆ ಮನವಿ ಸಲ್ಲಿಸಿದರೆ, ಅದನ್ನು ಪರಿಶೀಲಿಸುವುದಕ್ಕೆ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಅವಕಾಶವಿದೆ. ಮನವಿ ಮಾಡಿದ ಸಮುದಾಯಗಳನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ ಬಗ್ಗೆ ವಿಚಾರಣೆ, ಸಮೀಕ್ಷೆ, ತನಿಖೆ ನಡೆಸಿ ವರ್ಗೀಕರಣದ ಬಗ್ಗೆ ಆಯೋಗವು ಸರ್ಕಾರಕ್ಕೆ ಶಿಫಾರಸು ಮಾಡಬೇಕಾಗುತ್ತದೆ. ಕಲಂ 11ರ ಪ್ರಕಾರ, ಸರ್ಕಾರವು ಆಯೋಗದೊಂದಿಗೆ ಸಮಾಲೋಚನೆ ನಡೆಸಿ, ಪ್ರತಿ 10 ವರ್ಷಗಳಿಗೊಮ್ಮೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಣೆ ಮಾಡಲು ಅವಕಾಶವಿದೆ. ಇದು ನಿರಂತರ ಪ್ರಕ್ರಿಯೆ' ಎಂದು ತನ್ನ ಕ್ರಮವನ್ನು ಸಮರ್ಥಿಸಿಕೊಂಡಿತ್ತು.

ಅರ್ಜಿದಾರರ ಕೋರಿಕೆ: 'ನಾನು ದೇವಾಡಿಗ ಸಮುದಾಯಕ್ಕೆ ಸೇರಿದವನಾಗಿದ್ದು ಹಿಂದುಳಿದ ವರ್ಗಗಳಿಗೆ ದೊರೆಯುವ 2-ಎ ಮೀಸಲಾತಿಯ ಫಲಾನುಭವಿಯಾಗಿದ್ದೇನೆ. ಇತ್ತೀಚೆಗೆ ಲಿಂಗಾಯತ-ವೀರಶೈವ ಪಂಚಮಸಾಲಿ ಸಮುದಾಯದವರು ತಮ್ಮನ್ನು ಪ್ರವರ್ಗ 2-ಎಗೆ ಸೇರಿಸಬೇಕು ಎಂಬ ಬೇಡಿಕೆಯನ್ನು ಮಂಡಿಸಿದ್ದಾರೆ. ಈ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಂಚಮಸಾಲಿ ಸಮುದಾಯವನ್ನು 2-ಎಗೆ ಸೇರ್ಪಡೆ ಮಾಡುವುದಾಗಿ ಖಚಿತಪಡಿಸಿದ್ದು ಅದಕ್ಕಾಗಿ 2022ರ ಡಿಸೆಂಬರ್ 29ರ ಗಡುವು ನೀಡಿದ್ದರು. ಒಂದು ವೇಳೆ ಈ ಬಲಾಢ್ಯ ಸಮುದಾಯವನ್ನು 2-ಎಗೆ ಸೇರ್ಪಡೆ ಮಾಡಿದರೆ ಹಿಂದುಳಿದ ವರ್ಗಗಳಿಗೆ ಅನ್ಯಾಯ ವಾಗಲಿದೆ. ಹಾಗಾಗಿ, ಅರ್ಜಿ ಇತ್ಯರ್ಥವಾಗುವ ತನಕ ಮೀಸಲು ಪ್ರವರ್ಗಗಳನ್ನು ಮಾರ್ಪಾಡು ಮಾಡುವ ಬೇಡಿಕೆಗಳನ್ನು ಸರ್ಕಾರ ಪ್ರೋತ್ಸಾಹಿಸದಂತೆ ಮಧ್ಯಂತರ ತಡೆ ನೀಡಬೇಕು' ಎಂದು ಕೋರಿದ್ದರು.

'ಸಂಪುಟದಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಲಿ'

ಬೆಂಗಳೂರು: 'ಪಂಚಮಸಾಲಿ ಸಮುದಾಯಕ್ಕೆ 2-ಡಿ ಮೀಸಲಾತಿ ನೀಡುವ ವಿಷಯದಲ್ಲಿ ಶುಕ್ರವಾರ ನಡೆಯುವ ಸಚಿವ ಸಂಪುಟದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

'ಈ ಸಮುದಾಯಕ್ಕೆ ಮೀಸಲಾತಿ ನೀಡುವ ವಿಷಯದಲ್ಲಿ ಹೈಕೋರ್ಟ್ ತಡೆಯಾಜ್ಞೆ ತೆರವುಗೊಳಿಸಿದೆ. ಈ ಸಂದರ್ಭದಲ್ಲಿ ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಶುಕ್ರವಾರ ಬಹುತೇಕ ಕೊನೆಯ ಸಚಿವ ಸಂಪುಟ ಸಭೆ ನಡೆಯುತ್ತಿದ್ದು, ಈ ಸಭೆಯಲ್ಲಿ ಮೀಸಲಾತಿ ಹೆಚ್ಚಿಸಬೇಕಾದ ಪ್ರಮಾಣದ ಬಗ್ಗೆ ಸ್ಪಷ್ಟ ನಿರ್ಣಯ ಕೈಗೊಳ್ಳಬೇಕು. ಅದನ್ನು ಕೂಡಲೇ ರಾಜ್ಯಪತ್ರದಲ್ಲಿ ಹೊರಡಿಸಬೇಕು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು. ನಾಲ್ಕು ವರ್ಷಗಳಿಂದ ಪಾದಯಾತ್ರೆ, ಹೋರಾಟ, ಉಪವಾಸ ಸತ್ಯಾಗ್ರಹ ನಡೆಸಿದ್ದಕ್ಕೆ ಫಲ ದೊರಕುವ ವಿಶ್ವಾಸ ಬಂದಿದೆ. ಪ್ರಧಾನಿ ನರೇಂದ್ರ ಮೋದಿಯವರ ಮೇಲಿದ್ದ ವಿಶ್ವಾಸ ದುಪ್ಪಟ್ಟಾಗಿದೆ. ಸಚಿವ ಸಂಪುಟದ ನಿರ್ಣಯಗಳನ್ನು ಆಧರಿಸಿ ಹೋರಾಟ ಸಮಿತಿಯ ಕಾರ್ಯಕಾರಿ ಸಮಿತಿ ಸಭೆ ನಡೆಸಲಾಗುವುದು. ಸರ್ಕಾರದ ನಿರ್ಧಾರಗಳು ಸಮಾಧಾನ ಎನಿಸಿದರೆ ಹೋರಾಟವನ್ನು ಶನಿವಾರ ತಾತ್ಕಾಲಿಕವಾಗಿ ಹಿಂಪಡೆಯಲಾಗುವುದು ಎಂದರು.

ಸಂಪುಟ ಸಭೆಯಲ್ಲಿ ಒಪ್ಪಿಗೆ ಸಾಧ್ಯತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ 'ಮೀಸಲಾತಿ' ವಿಚಾರವನ್ನು ಅಸ್ತ್ರವಾಗಿ ಬಳಸಲು ಮುಂದಾಗಿರುವ ರಾಜ್ಯ ಬಿಜೆಪಿ ಸರ್ಕಾರ, ಪಂಚಮಸಾಲಿ ಮತ್ತು ಒಕ್ಕಲಿಗ ಸಮುದಾಯದ ಮೀಸಲಾತಿ ಹೆಚ್ಚಳ ಬೇಡಿಕೆ ಮತ್ತು ಪರಿಶಿಷ್ಟ ಜಾತಿಯ ಒಳ ಮೀಸಲಾತಿ ವರ್ಗೀಕರಣ ವಿವಾದಕ್ಕೆ ಅಂತ್ಯ ಹಾಡಲು ನಿರ್ಧರಿಸಿದೆ.

ಮಾರ್ಚ್ 24ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಜಾತಿ ಪಟ್ಟಿಯಲ್ಲಿರುವ 'ಪ್ರವರ್ಗ 3ಎ' ಸಮುದಾಯವನ್ನು (ಒಕ್ಕಲಿಗ, ರೆಡ್ಡಿ, ಬಲಿಜ, ಬಂಟ, ಕೊಡವ ಸೇರಿ 12 ಜಾತಿಗಳು) 'ಪ್ರವರ್ಗ 2ಸಿ', 'ಪ್ರವರ್ಗ 3ಬಿ' ಸಮುದಾಯವನ್ನು (ಲಿಂಗಾಯತ ವೀರಶೈವ, ಪಂಚಮ ಸಾಲಿ ಹಾಗೂ ಇತರ ಸಮುದಾಯಗಳು) 'ಪ್ರವರ್ಗ 2ಡಿ' ಎಂದು ಸೃಜಿಸಿ ಮೀಸಲಾತಿ ಪ್ರಮಾಣ ಹೆಚ್ಚಿಸಲು ಹಿಂದುಳಿದ ವರ್ಗಗಳ ಆಯೋಗ ಮಧ್ಯಂತರ ವರದಿಯಲ್ಲಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿತ್ತು.


'ಪ್ರವರ್ಗ 3ಎ'ಯಮೀಸಲಾತಿಯನ್ನು ಶೇ 4ರಿಂದ 12ರಷ್ಟು ಹೆಚ್ಚಿಸಬೇಕೆಂದು ಒಕ್ಕಲಿಗ ಸಮುದಾಯ ಬೇಡಿಕೆ ಇಟ್ಟಿದೆ. ತಮಗೆ 2ಎ ಮೀಸಲಾತಿ ನೀಡಬೇಕು ಎಂದು ಲಿಂಗಾಯತ ಸಮುದಾಯ ಪಟ್ಟು ಹಿಡಿದಿದೆ. ಈ ಬೇಡಿಕೆ ಈಡೇರಿಸಲು ಸರ್ಕಾರ ಮುಂದಾಗಿದೆ. 'ಇದೇ 24ರಂದು ನಡೆಯಲಿರುವ ಸಚಿವ ಸಂಪುಟ ಸಭೆಯ ಬಳಿಕ ಪಂಚಮಸಾಲಿಗಳಿಗೆ 2ಎ ಮೀಸಲಾತಿ ನೀಡುವ ಬಗ್ಗೆ ಮಾಹಿತಿ ಸಿಗಲಿದೆ' ಎಂದು ಮುಖ್ಯಮಂತ್ರಿ ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ವರ್ಗೀಕರಣ ವಿಚಾರದಲ್ಲಿ ಶಿಫಾರಸು ಮಾಡಲು ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಚಿವ ಸಂಪುಟ ಸಮಿತಿ ಈಗಾಗಲೇ ವರದಿ ಸಿದ್ಧಪಡಿಸಿದೆ. ಸದಾಶಿವ ಆಯೋಗದ ವರದಿಯ ಟಿಪ್ಪಣಿಯ ಆಧಾರದಲ್ಲಿ ಚರ್ಚೆ ನಡೆಸಿರುವ ಸಮಿತಿಯು, ಪರಿಶಿಷ್ಟ ಜಾತಿಯ ಶೇ 17 ಮೀಸಲಾತಿಯನ್ನು 4 ಗುಂಪುಗಳಿಗೆ ವರ್ಗೀಕರಿಸುವ ಬಗ್ಗೆ ಶಿಫಾರಸು ಮಾಡಿದೆ. ಈ ಬಗ್ಗೆ ತೀರ್ಮಾನ ಕೈಗೊಂಡು, ಕೇಂದ್ರಕ್ಕೆ ಶಿಫಾರಸು ಮಾಡುವ ವಿಚಾರದಲ್ಲಿ ಸಭೆ ತೀರ್ಮಾನ ತೆಗೆದುಕೊಳ್ಳಲಿದೆ ಎಂದೂ ಮೂಲಗಳು ತಿಳಿಸಿವೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 55%

ಅಲ್ಲ 45%



ಟ್ವೆಂಟಿ20 ಮಾದರಿಯ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಭಾರತ ಕ್ರಿಕೆಟ್ ತಂಡದ ಆಮೂಲಾಗ್ರ ಬದಲಾವಣೆ ಅಗತ್ಯ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

'ತಾಂತ್ರಿಕ ಕಾಲೇಜು: ನಿರ್ಬಂಧ ತೆರವು'

ನವದೆಹಲಿ (ಪಿಟಿಐ): 2023-24ರ ಶೈಕ್ಷಣಿಕ ವರ್ಷದಿಂದ ಹೊಸ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜುಗಳನ್ನು ತೆರೆಯಲು ಇದ್ದ ನಿರ್ಬಂಧವನ್ನು ತೆಗೆದು ಹಾಕಲಾಗುವುದು ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಗುರುವಾರ ತಿಳಿಸಿದೆ.

ಕೋರ್ಸ್‌ನಲ್ಲಿ ದಾಖಲಾತಿಗಳು ಕಡಿಮೆಯಾಗುತ್ತಿರುವ ಕಾರಣ ತಾಂತ್ರಿಕ ಶಿಕ್ಷಣ ನಿಯಂತ್ರಕರು 2020-21ರ ಶೈಕ್ಷಣಿಕ ವರ್ಷದಿಂದ ಹೊಸ ಎಂಜಿನಿಯರಿಂಗ್ ಸಂಸ್ಥೆಗಳನ್ನು ತೆರೆಯಲು ಎರಡು ವರ್ಷಗಳ ನಿಷೇಧ ವಿಧಿಸಿದ್ದರು.

ಕಲಬುರಗಿ ಪಾಲಿಕೆ ಬಿಜೆಪಿ ತೆಕ್ಕೆಗೆ

ಕಲಬುರಗಿ: ಕಲಬುರಗಿ ಮಹಾನಗರದ ಮೇಯರ್ ಆಗಿ, ಬಿಜೆಪಿಯ 46ನೇ ವಾರ್ಡ್ ಸದಸ್ಯ ವಿಶಾಲ್ ದರ್ಗಿ ಮೇಯರ್ ಆಗಿ ಮತ್ತು ಉಪ ಮೇಯರ್ ಆಗಿ 25ನೇ ವಾರ್ಡ್ ಸದಸ್ಯ ಶಿವಾನಂದ ಪಿಸ್ತಿ ಚುನಾಯಿತರಾದರು.

ಆ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರಿನಲ್ಲಿ 13 ವರ್ಷಗಳ ಬಳಿಕ ಬಿಜೆಪಿ ಅಧಿಕಾರದ ಗದ್ದುಗೆ ಏರಿತು. ವಿಶಾಲ ದರ್ಗಿ ಅವರು 33 ಮತ ಪಡೆದರೆ, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಪ್ರಕಾಶ ಕಪನೂರ 32 ಮತ ಪಡೆದರು.

ಉಪ ಮೇಯರ್ ಹುದ್ದೆಗೆ ಸ್ಪರ್ಧಿಸಿದ್ದ ಶಿವಾನಂದ ಪಿಸ್ತಿ 33 ಮತ ಪಡೆದರೆ, ಕಾಂಗ್ರೆಸ್ ಬೆಂಬಲಿತ ಜೆಡಿಎಸ್ ಅಭ್ಯರ್ಥಿ ವಿಜಯಲಕ್ಷ್ಮಿ ರೆಡ್ಡಿ 32 ಮತ ಪಡೆದರು. ಫಲಿತಾಂಶವನ್ನು ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯಿ ಪ್ರಕಟಿಸಿದರು.

68 ಜನರಿಗೆ ಮತದಾನಕ್ಕೆ ಅವಕಾಶವಿತ್ತು. 63 ಮಂದಿ ಮತ ಚಲಾಯಿಸಿದರು.

ನಿಧನ ವಾರ್ತೆ

ಮಾಜಿ ಸಚಿವ ಆಂಜನಮೂರ್ತಿ



ನೆಲಮಂಗಲ: ಮಾಜಿ ಸಚಿವ ಆಂಜನಮೂರ್ತಿ (82) ಅವರು ಹೃದಯಾಘಾತದಿಂದ ನಿಧನರಾದರು.

ಪತ್ನಿ ಧನಲಕ್ಷ್ಮೀ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ವಯೋಸಹಜ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. ಬುಧವಾರ ಮತ್ತೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ಬೆಳಗಿನ ಜಾವ ನಿಧನರಾದರು. ಸರ್ಕಾರಿ ಗೌರವಗಳೊಂದಿಗೆ ವಿಶ್ವೇಶ್ವರಪುರದ ತಮ್ಮ ತೋಟದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಆಂಜನಮೂರ್ತಿ ಅವರು ವಿಧಾನಸಭೆಗೆ 7 ಬಾರಿ ಸ್ಪರ್ಧಿಸಿ 3 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ವಸತಿ ಸಚಿವರಾಗಿ, ವಿಧಾನಸಭೆ ಉಪಸಭಾಪತಿಯಾಗಿ ಕಾರ್ಯ ನಿರ್ವಹಿಸಿದ್ದರು. ತಾಲ್ಲೂಕು ಯುವ ಕಾಂಗ್ರೆಸ್ ಕಾರ್ಯದರ್ಶಿಯಾಗಿ, ಜಿಲ್ಲಾ ಕಾರ್ಯದರ್ಶಿಯಾಗಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ಅಧ್ಯಕ್ಷರಾಗಿ, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು.

ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮುಖಂಡರಾದ ಎಂ.ವೀರಪ್ಪ ಮೊಯಿಲಿ, ಕಾಂಗ್ರೆಸ್ ಕಾರ್ಯಾಧ್ಯಕ್ಷ ಜಿ. ಪರಮೇಶ್ವರ್ ಸೇರಿ ಹಲವರು ಅಂತಿಮ ದರ್ಶನ ಪಡೆದರು.

ದೇಶದ ಹಲವೆಡೆ ಕಾಂಗ್ರೆಸ್ ಪ್ರತಿಭಟನೆ • ಅಂತರ ಕಾಯ್ದುಕೊಂಡ ಟಿಎಂಸಿ, ಎಡಪಕ್ಷಗಳು

ರಾಹುಲ್‌ಗೆ ವಿಪಕ್ಷಗಳ ಬೆಂಬಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ, ಮಾನಹಾನಿ ಪ್ರಕರಣದಲ್ಲಿ ಎರಡು ವರ್ಷ ಜೈಲುಶಿಕ್ಷೆ ವಿಧಿಸಿರುವುದನ್ನು ಬಹುತೇಕ ವಿರೋಧ ಪಕ್ಷಗಳು ಖಂಡಿಸಿವೆ. ಇದು ಬಿಜೆಪಿಯೇತರ ಮತ್ತು ಬಿಜೆಪಿ ವಿರೋಧಿ ಪಕ್ಷಗಳನ್ನು ಹತ್ತಿಕ್ಕುವ ನಡೆ ಎಂದು ವಿರೋಧ ಪಕ್ಷಗಳು ಟೀಕಿಸಿವೆ. ರಾಹುಲ್ ಅವರಿಗೆ ತಮ್ಮ ಬೆಂಬಲ ಸೂಚಿಸಿವೆ.

ತೀರ್ಪು ಪ್ರಕಟವಾದ ನಂತರ, ವಿವಿಧ ವಿರೋಧ ಪಕ್ಷಗಳ ನಾಯಕರು ರಾಹುಲ್ ಅವರಿಗೆ ಕರೆ ಮಾಡಿದ್ದಾರೆ. ತಮ್ಮ ಬೆಂಬಲ ಸೂಚಿಸಿದ್ದಾರೆ. ತೀರ್ಪು ಮತ್ತು ಬಿಜೆಪಿಯನ್ನು ಖಂಡಿಸಿ ಟ್ವೀಟ್ ಮಾಡಿದ್ದಾರೆ. ಜಮ್ಮು–ಕಾಶ್ಮೀರದ ಪಿಡಿಪಿಯ ಮೆಹಬೂಬಾ ಮುಫ್ತಿ, ಡಿಎಂಕೆಯ ಸ್ಟಾಲಿನ್, ಶಿವಸೇನಾ ಉದ್ಧವ್ ಬಣದ ಪ್ರಿಯಾಂಕಾ ಚತುರ್ವೇದಿ ಮತ್ತು ಎನ್‌ಸಿಪಿ ವಕ್ತಾರರು ಅವರು ರಾಹುಲ್ ಅವರನ್ನು ಬೆಂಬಲಿಸಿ ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ಇಲ್ಲದ ವಿರೋಧ ಪಕ್ಷಗಳ ಒಕ್ಕೂಟ ರಚಿಸುವ ಯತ್ನದಲ್ಲಿರುವ ಮಮತಾ ಬ್ಯಾನರ್ಜಿ ಅವರ ಟಿಎಂಸಿ, ಈ ತೀರ್ಪಿನ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಇದೇ ಬಣದಲ್ಲಿ ಗುರುತಿಸಿಕೊಂಡಿರುವ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಅವರು ರಾಹುಲ್ ಅವರನ್ನು ಬೆಂಬಲಿಸಿ ಟ್ವೀಟ್ ಮಾಡಿದ್ದಾರೆ. ಆದರೆ, ಬಿಹಾರದಲ್ಲಿ ಕಾಂಗ್ರೆಸ್ ಜತೆಗೆ ಮೈತ್ರಿಯಲ್ಲಿರುವ ಜೆಡಿಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಎಡಪಕ್ಷಗಳು ಸಹ ಯಾವುದೇ ಪ್ರತಿಕ್ರಿಯೆ ನೀಡದೆ ಅಂತರ ಕಾಯ್ದುಕೊಂಡಿವೆ.

ಹಲವೆಡೆ ಪ್ರತಿಭಟನೆ: ಸೂರತ್ ನ್ಯಾಯಾಲಯದ ತೀರ್ಪನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಮಹಾರಾಷ್ಟ್ರ, ತಮಿಳುನಾಡು, ಜಾರ್ಖಂಡ್, ರಾಜಸ್ಥಾನ, ಹಿಮಾಚಲ ಪ್ರದೇಶ, ಉತ್ತರಖಾಂಡ ಸೇರಿ ದೇಶದ ಹಲವೆಡೆ ಪ್ರತಿಭಟನೆ ನಡೆಸಿದ್ದಾರೆ.

ರಾಹುಲ್ ಅವರನ್ನು ಬೆಂಬಲಿಸಿ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ತಮ್ಮ ಸಾಮಾಜಿಕ ಜಾಲತಾಣ ಖಾತೆಗಳ ಡಿಪಿಗಳಲ್ಲಿ 'ಡರೋ ಮತ್ (ಹೆದರಬೇಡಿ)' ಎಂಬ ಬರಹ ಇರುವ ಚಿತ್ರಗಳನ್ನು ಹಾಕಿಕೊಂಡಿದ್ದಾರೆ.



ರಾಹುಲ್‌ಗೆ ಜೈಲುಶಿಕ್ಷೆ ವಿಧಿಸಿರುವುದನ್ನು ಖಂಡಿಸಿ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಎಳೆದೊಯ್ದರು — ಪಿಟಿಐ ಚಿತ್ರ

ಬಿಜೆಪಿ ಸ್ವಾಗತ

ರಾಹುಲ್ ಅವರಿಗೆ ಎರಡು ವರ್ಷಗಳ ಜೈಲುಶಿಕ್ಷೆ ನೀಡಿರುವುದನ್ನು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಸ್ವಾಗತಿಸಿವೆ.

'ಕಾಂಗ್ರೆಸ್‌ಗೆ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆಯೇ ಇಲ್ಲ. ದೇಶದಲ್ಲಿ ಕಾನೂನು ಆಡಳಿತವಿದೆ. ಮಾನಹಾನಿ ಹೇಳಿಕೆ ನೀಡಿದವರು, ಕ್ಷಮೆ ಕೇಳಲು ಅವಕಾಶವಿದೆ. ಆದರೆ, ಕ್ಷಮೆ ಕೇಳುವಲ್ಲಿ ಕಾಂಗ್ರೆಸ್‌ಗೆ ಆಕ್ಷೇಪವಿದೆ. ಎಲ್ಲರನ್ನು ತೆಗಳುವಲ್ಲಿ ರಾಹುಲ್ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು ಎಂದು ಕಾಂಗ್ರೆಸ್ ಬಯಸುತ್ತಿದೆಯೇ' ಎಂದು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಪ್ರಶ್ನಿಸಿದ್ದಾರೆ.

'ವಿದೇಶಗಳಲ್ಲಿ ದೇಶವನ್ನು ಅವಮಾನಿಸಿದ ಮತ್ತು ರಾಷ್ಟ್ರ ನಾಯಕರನ್ನು ಅವಮಾನಿಸಿದ ವಿಚಾರದಲ್ಲೂ ರಾಹುಲ್ ಅವರಿಗೆ ಶಿಕ್ಷೆಯಾಗಬೇಕು' ಎಂದು ಮಹಾರಾಷ್ಟ್ರದ ಆಡಳಿತಾರೂಢ ಶಿವಸೇನಾ ಒತ್ತಾಯಿಸಿದೆ.

ಸದಸ್ಯತ್ವ ಅನರ್ಹತೆ ಸದ್ಯಕ್ಕೆ ಅನ್ವಯಿಸದು

ರಾಹುಲ್ ಅವರಿಗೆ ಎರಡು ವರ್ಷ ಶಿಕ್ಷೆ ವಿಧಿಸಿರುವುದರಿಂದ ಸದಸ್ಯತ್ವ ಅನರ್ಹತೆಯು ಅವರಿಗೆ ಅನ್ವಯ ಆಗುತ್ತದೆ. ಆದರೆ, ಅದು ತಕ್ಷಣವೇ ಜಾರಿಗೆ ಬರುವುದಿಲ್ಲ.

ಜನ ಪ್ರಾತಿನಿಧ್ಯ ಕಾಯ್ದೆ ಪ್ರಕಾರ, ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಶಿಕ್ಷೆಗೆ ಒಳಗಾದ ಜನಪ್ರತಿನಿಧಿಯು ಶಿಕ್ಷೆ ವಿಧಿಸಲಾದ ದಿನದಿಂದಲೇ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ. ಶಿಕ್ಷೆ ಪೂರ್ಣಗೊಳಿಸಿದ ನಂತರ ಆರು ವರ್ಷ ಅವರು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಇಲ್ಲ.

ಆದರೆ, ತೀರ್ಪು ಬಂದು ಮೂರು ತಿಂಗಳವರೆಗೆ ಸದಸ್ಯತ್ವ ಅನರ್ಹತೆಯು ಅನ್ವಯ ಆಗುವುದಿಲ್ಲ. ಈ ಅವಧಿಯ ಒಳಗೆ, ಅವರು ತಪ್ಪಿತಸ್ಥರು ಎಂಬ ತೀರ್ಪಿಗೆ ಅಥವಾ ಅವರಿಗೆ ವಿಧಿಸಲಾದ ಶಿಕ್ಷೆಗೆ ಮೇಲ್ಮನವಿ ನ್ಯಾಯಾಲಯವು ತಡೆ ಕೊಟ್ಟರೆ ಸದಸ್ಯತ್ವದಿಂದ ಅವರು ಅನರ್ಹಗೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ವಕೀಲ ಮಹೇಶ್ ಜೇಠ್ಮಲಾನಿ ಹೇಳಿದ್ದಾರೆ.

ಮೇಲ್ಮನವಿ ನ್ಯಾಯಾಲಯವು ಅಪರಾಧ ನಿರ್ಣಯ ಮತ್ತು ಶಿಕ್ಷೆ ಎರಡನ್ನೂ ಅಮಾನತಿನಲ್ಲಿ ಇರಿಸಬಹುದು. ಹಾಗೆ ಆದರೆ, ಮೇಲ್ಮನವಿ ಅರ್ಜಿಯ ವಿಚಾರಣೆ ಪೂರ್ಣಗೊಳ್ಳುವವರೆಗೆ ಅನರ್ಹತೆಯು ಅನ್ವಯ ಆಗುವುದಿಲ್ಲ.

ಸಂಸದ ಅಥವಾ ಶಾಸಕರೊಬ್ಬರು ಅಪರಾಧ ಪ್ರಕರಣದಲ್ಲಿ ತಪ್ಪಿತಸ್ಥರು ಎಂದು ತೀರ್ಪು ಬಂದರೆ, ಅವರ ಸದಸ್ಯತ್ವವು ತಕ್ಷಣದಿಂದಲೇ ಅನರ್ಹಗೊಳ್ಳುತ್ತದೆ ಎಂದು ಸುಪ್ರೀಂ ಕೋರ್ಟ್ ಲಿಲಿ ಥಾಮಸ್ ಪ್ರಕರಣದಲ್ಲಿ 2013ರಲ್ಲಿ ತೀರ್ಪು ನೀಡಿತ್ತು.

ಅದಕ್ಕೂ ಹಿಂದೆ, ಜನಪ್ರಾತಿನಿಧ್ಯ ಕಾಯ್ದೆಯ 8(4) ಸೆಕ್ಷನ್ ಅನ್ವಯ ಆಗುತ್ತಿತ್ತು. ಶಾಸಕ ಅಥವಾ ಸಂಸದರೊಬ್ಬರು ಅಪರಾಧ ಪ್ರಕರಣದಲ್ಲಿ ತಪ್ಪಿತಸ್ಥ ಎಂದು ತೀರ್ಪು ಬಂದರೂ ಅವರು ಮೂರು ತಿಂಗಳೊಳಗೆ ಮೇಲ್ಮನವಿ ಸಲ್ಲಿಸಿದರೆ ಸದಸ್ಯತ್ವವು ಉಳಿಯುತ್ತಿತ್ತು.

ಜನಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8(4)ರ ಅಡಿಯಲ್ಲಿನ ಅನರ್ಹತೆಯ ನಿಯಮವು ಎರಡು ವರ್ಷಕ್ಕಿಂತ ಕಡಿಮೆ ಶಿಕ್ಷೆಯಾಗಿದ್ದರೆ ಮಾತ್ರ ಅನ್ವಯ ಎಂದು ಮನೋಜ್ ನರೂಲ ಮತ್ತು ಭಾರತ ಸರ್ಕಾರದ ನಡುವಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2014ರಲ್ಲಿ ತೀರ್ಪು ನೀಡಿತ್ತು ಎಂದು ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಸಿದ್ಧಾರ್ಥ ಲೂತ್ರಾ ಹೇಳಿದ್ದಾರೆ.

ಸಂವಿಧಾನದ 101 (3) (ಎ) ಮತ್ತು 190 (3) (ಎ) ವಿಧಿಗಳ ಪ್ರಕಾರ, ಜನಪ್ರತಿನಿಧಿಯು ತಪ್ಪಿತಸ್ಥ ಎಂದು ತೀರ್ಪು ಬಂದ ಕೂಡಲೇ ಅವರ ಸದಸ್ಯತ್ವವು ರದ್ದಾಗುತ್ತದೆ ಎಂದು ಲಿಲಿ ಥಾಮಸ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಆದರೆ, ಲೋಕ್ ಪ್ರಹಾರಿ ಮತ್ತು ಭಾರತೀಯ ಚುನಾವಣಾ ಆಯೋಗ ನಡುವಣ ಪ್ರಕರಣದಲ್ಲಿ (2018) ಸುಪ್ರೀಂ ಕೋರ್ಟ್ ಸ್ಪಷ್ಟೀಕರಣ ಕೊಟ್ಟಿದೆ. ಮೇಲ್ಮನವಿ ನ್ಯಾಯಾಲಯವು ಅಪರಾಧ ನಿರ್ಣಯಕ್ಕೆ ತಡೆ ಕೊಟ್ಟ ದಿನದಿಂದ ಅನರ್ಹತೆಯು ಅನ್ವಯ ಆಗುವುದಿಲ್ಲ. ಹಾಗಾಗಿ, ಜನಪ್ರತಿನಿಧಿಯು ಅನರ್ಹತೆಯಿಂದ ತಪ್ಪಿಸಿಕೊಳ್ಳಬಹುದು ಎಂದು ಲೂತ್ರಾ ಅವರು ವಿವರಿಸಿದ್ದಾರೆ.

ಕೋರ್ಟ್ ಹೇಳಿದ್ದೇನು?

ಅಪರಾಧಿಯು ಸಂಸತ್ ಸದಸ್ಯರಾಗಿದ್ದಾರೆ. ಅವರು ಸಾರ್ವಜನಿಕವಾಗಿ ಮಾಡುವ ಭಾಷಣಗಳಿಂದ ವ್ಯಾಪಕ ಪರಿಣಾಮ ಉಂಟಾಗುತ್ತದೆ. ಹಾಗಾಗಿಯೇ ಅವರು ಎಸಗಿದ ಅಪರಾಧವು ಹೆಚ್ಚು ಗಂಭೀರವಾಗಿದೆ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಅಪರಾಧಿಗೆ ಕಡಿಮೆ ಶಿಕ್ಷೆ ನೀಡಿದರೆ ಅದು ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನಿಸುತ್ತದೆ. ಮಾನನಷ್ಟ ತಡೆಯ ಉದ್ದೇಶವೇ ಈಡೇರುವುದಿಲ್ಲ. ಯಾರು ಯಾರನ್ನು ಬೇಕಿದ್ದರೂ ಸುಲಭದಲ್ಲಿ ಅವಮಾನಿಸಬಹುದು ಎಂದಾಗುತ್ತದೆ. 'ಚೌಕೀದಾರ್ ಚೋರ್ ಹೈ' ಎಂಬ ಹೇಳಿಕೆಯ ವಿಚಾರದಲ್ಲಿ ರಾಹುಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಕ್ಷಮೆ ಯಾಚಿಸಿದ್ದರು. ಮುಂದಿನ ದಿನಗಳಲ್ಲಿ, ಮಾತನಾಡುವಾಗ ಎಚ್ಚರದಿಂದ ಇರಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಹಾಗಿದ್ದರೂ ರಾಹುಲ್ ನಡವಳಿಕೆಯಲ್ಲಿ ಯಾವುದೇ ಬದಲಾವಣೆ ಆದಂತೆ ಕಾಣಿಸುತ್ತಿಲ್ಲ ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಸಂಸತ್ತಿನಿಂದ ಹೊರಗಿಡುವುದೇ ಬಿಜೆಪಿ ಉದ್ದೇಶ: ಮಲ್ಲಿಕಾರ್ಜುನ ಖರ್ಗೆ ಆರೋಪ

'ರಾಹುಲ್ ಗಾಂಧಿ ಅವರನ್ನು ಲೋಕಸಭೆಯಿಂದ ಹೊರಗಿಡುವುದೇ ಬಿಜೆಪಿ ಉದ್ದೇಶ. ರಾಹುಲ್ ಲೋಕಸಭೆಯಲ್ಲಿ ಸತ್ಯವನ್ನು ಮಾತನಾಡುತ್ತಾರೆ ಮತ್ತು ಬಿಜೆಪಿಯನ್ನು ಬಟಾಬಯಲು ಮಾಡುತ್ತಾರೆ. ಹೀಗಾಗಿ ಅವರನ್ನು ಲೋಕಸಭೆಯಿಂದ ಹೊರಗಟ್ಟಲು ಇಂಥದ್ದನ್ನೆಲ್ಲಾ ಬಿಜೆಪಿ ಮಾಡುತ್ತಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆರೋಪಿಸಿದ್ದಾರೆ.

'ಮಾನಹಾನಿ ಪ್ರಕರಣಗಳಲ್ಲಿ ಯಾರಿಗೂ 2 ವರ್ಷ ಜೈಲುಶಿಕ್ಷೆ ನೀಡಿದ ಉದಾಹರಣೆ ಇಲ್ಲ. ಕೆಲವರಿಗೆ ಆರು ತಿಂಗಳು, ಕೆಲವರಿಗೆ ಒಂದು ವರ್ಷ ಶಿಕ್ಷೆ ನೀಡಿದ್ದರೆ, ಕೆಲವರು ಕ್ಷಮೆ ಕೇಳಿದಾಗ ಬಿಡಲಾಗಿದೆ. ಚುನಾಯಿತ ಜನಪ್ರತಿನಿಧಿ ಅನರ್ಹನಾಗಬೇಕಾದರೆ ಕನಿಷ್ಠ ಎರಡು ವರ್ಷ ಜೈಲುಶಿಕ್ಷೆಗೆ ಗುರಿಯಾಗಬೇಕು. ರಾಹುಲ್ ಅವರನ್ನು ಸಂಸತ್ತಿನಿಂದ ಹೊರಗಿಡುವ ಉದ್ದೇಶದಿಂದಲೇ ಈ ಪ್ರಕರಣದಲ್ಲಿ ಗರಿಷ್ಠ ಪ್ರಮಾಣದ ಶಿಕ್ಷೆಯನ್ನು ನೀಡಲಾಗಿದೆ' ಎಂದು ಖರ್ಗೆ ಆರೋಪಿಸಿದ್ದಾರೆ.

'ಒಬ್ಬ ವ್ಯಕ್ತಿಯ ಬಾಯಿ ಮುಚ್ಚಿಸುವ ಮೂಲಕ ದೇಶದ 140 ಕೋಟಿ ಜನರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಎರಡು ವರ್ಷಗಳ ಶಿಕ್ಷೆಯಿಂದ ಕಾಂಗ್ರೆಸ್ ಅನ್ನು ನಿರ್ನಾಮ ಮಾಡಲು ಸಾಧ್ಯವಿಲ್ಲ. ನಾವು ಹೋರಾಡುತ್ತೇವೆ' ಎಂದು ಖರ್ಗೆ ಹೇಳಿದ್ದಾರೆ.

ಪ್ರಭುತ್ವವು ಹೆದರಿದೆ. ಸಾಮ, ಧಾನ, ದಂಡ, ಭೇದಗಳನ್ನು ಬಳಸಿಕೊಂಡು ರಾಹುಲ್ ಗಾಂಧಿಯ ಧ್ವನಿಯನ್ನು ಅಡಗಿಸಲು ಯತ್ನಿಸುತ್ತಿದೆ. ನನ್ನ ಅಣ್ಣ ಎಂದಿಗೂ ಹೆದರಿರಲಿಲ್ಲ, ಮುಂದೆಯೂ ಹೆದರುವುದಿಲ್ಲ. ಆತ ಸತ್ಯ ಹೇಳುತ್ತಲೇ ಬದುಕಿದ್ದಾನೆ, ಮುಂದೆಯೂ ಸತ್ಯವನ್ನೇ ಹೇಳುತ್ತಾನೆ ಮತ್ತು ಸತ್ಯದ ಜನರಿಗಾಗಿ ದನಿ ಎತ್ತುತ್ತಾನೆ. ಸತ್ಯ ಮತ್ತು ಕೋಟ್ಯಂತರ ದೇಶವಾಸಿಗಳ ಪ್ರೀತಿ ಅವನ ಬೆಂಬಲಕ್ಕಿದೆ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಬಿಜೆಪಿ ವಿರೋಧಿ ಪಕ್ಷಗಳ ನಾಯಕರ ಮೇಲೆ ಪ್ರಕರಣಗಳನ್ನು ದಾಖಲಿಸಿ, ಅಂತಹ ನಾಯಕರನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಕಾಂಗ್ರೆಸ್ ಜೊತೆಗೆ ನಾವು ಭಿನ್ನಾಭಿಪ್ರಾಯ ಹೊಂದಿದ್ದೇವೆ. ಆದರೆ, ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿ ಅವರನ್ನು ಈ ರೀತಿ ಸಿಲುಕಿಸುವುದು ಸರಿಯಲ್ಲ. ಪ್ರಶ್ನೆ ಎತ್ತುವುದೇ ಜನರು ಮತ್ತು ವಿಪಕ್ಷಗಳ ಕೆಲಸ. ನಾನು ನ್ಯಾಯಾಲಯವನ್ನು ಗೌರವಿಸುತ್ತೇನೆ. ಆದರೆ, ಈ ತೀರ್ಪಿಗೆ ನನ್ನ ಸಹಮತವಿಲ್ಲ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಬಿಜೆಪಿ ಅಧಿಕಾರಕ್ಕೆ ಬಂದರೆ ಮುಸ್ಲಿಮರ ಮೇಲೆ ಮುಗಿಬೀಳುತ್ತದೆ ಎನ್ನಲಾಗುತ್ತಿತ್ತು. ಆದರೆ, ಬಿಜೆಪಿ ಜೈಲಿಗೆ ಅಟ್ಟಿದವರಲ್ಲಿ ಯಾರೂ ಮುಸ್ಲಿಮರಲ್ಲ. ಮನೀಷ್ ಸಿಸೋಡಿಯಾ ಮುಸ್ಲಿಮರಲ್ಲ. ಎನ್‌ಸಿಪಿ ನಾಯಕರು ಮುಸ್ಲಿಮರಲ್ಲ. ಸಂಜಯ್ ರಾವುತ್ ಮುಸ್ಲಿಮರಲ್ಲ. ಈಗ ರಾಹುಲ್ ಗಾಂದಿ ಹಿಂದೆ ಬಿದ್ದಿದ್ದಾರೆ. ಇದು ಮುಸ್ಲಿಂ ವರ್ಸಸ್ ಬಿಜೆಪಿ ಅಲ್ಲ. ತಮ್ಮನ್ನು ವಿರೋಧಿಸಿದವರು ಮತ್ತು ಭಿನ್ನ ದನಿ ಎತ್ತಿದ ಎಲ್ಲರ ಮೇಲೂ ಬಿಜೆಪಿ ಮುಗಿಬೀಳುತ್ತಿದೆ. ವಿಪಕ್ಷಗಳೆಲ್ಲವೂ ಒಟ್ಟಾಗಬೇಕು

ಮೆಹಬೂಬಾ ಮುಫ್ತಿ, ಪಿಡಿಪಿ ಮುಖ್ಯಸ್ಥೆ

ದೇಶದ ಮಾನಹಾನಿ, ಜನತೆಯ ಮಾನಹಾನಿ, ಸಂವಿಧಾನದ ಮಾನಹಾನಿ, ಸೌಹಾರ್ದದ ಮಾನಹಾನಿ, ಆರ್ಥಿಕತೆಯ ಮಾನಹಾನಿ... ಬಿಜೆಪಿ ಮೇಲೆ ಇಷ್ಟೆಲ್ಲಾ ಮಾನಹಾನಿ ಪ್ರಕರಣಗಳನ್ನು ದಾಖಲಿಸಬೇಕು. ವಿರೋಧ ಪಕ್ಷಗಳ ಮೇಲೆ ಕ್ಷುಲ್ಲಕ ಪ್ರಕರಣಗಳನ್ನು ದಾಖಲಿಸಿ ತನ್ನ ರಾಜಕೀಯ ಭವಿಷ್ಯ ಗಟ್ಟಿ ಮಾಡಿಕೊಳ್ಳಲು ಹೊರಟಿರುವ ಬಿಜೆಪಿಯು, ವಿರೋಧ ಪಕ್ಷಗಳ ಶಕ್ತಿಯನ್ನು ನೋಡಿ ಹೆದರಿಹೋಗಿದೆ

ಅಖಿಲೇಶ್ ಯಾದವ್ ಎಸ್‌ಪಿ ಮುಖ್ಯಸ್ಥ

ಸರ್ವಾಧಿಕಾರದ ವಿರುದ್ಧ ರಾಹುಲ್ ಗಾಂಧಿ ದನಿ ಎತ್ತುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ತಪ್ಪನ್ನು ತಪ್ಪು ಎಂದು ಹೇಳುವ ಸಾಹಸ ಮಾಡಿದ್ದಾರೆ. ಈ ಸಾಹಸದಿಂದ ಸರ್ವಾಧಿಕಾರಿಯು ಹೆದರಿದ್ದಾರೆ. ಹೀಗಾಗಿ ಒಮ್ಮೆ ಇ.ಡಿ., ಒಮ್ಮೆ ಪೊಲೀಸ್, ಒಮ್ಮೆ ಪ್ರಕರಣ ಮತ್ತು ಈಗ ಶಿಕ್ಷೆಯ ಮೂಲಕ ಹೆದರಿಸಲು ಯತ್ನಿಸುತ್ತಿದ್ದಾರೆ. ಇದನ್ನು ಕಾನೂನಿನ ಪ್ರಕಾರವೇ ಪ್ರಶ್ನಿಸುತ್ತೇವೆ, ಹೋರಾಡುತ್ತೇವೆ, ಗೆಲ್ಲುತ್ತೇವೆ

ಕಾಂಗ್ರೆಸ್ ಟ್ವೀಟ್

ವಿರೋಧ ಪಕ್ಷಗಳನ್ನು ಬಿಜೆಪಿ ಗುರಿ ಮಾಡುತ್ತಿದೆ ಮತ್ತು ಈಗ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕುವ ಮಟ್ಟಕ್ಕೆ ಇಳಿದಿದೆ. ಇಂತಹ ದಬ್ಬಾಳಿಕೆಗಳು ಕೊನೆಯಾಗಲಿವೆ. ರಾಹುಲ್ ಒಟ್ಟಿಗೆ ಮಾತನಾಡಿದೆ ಮತ್ತು ನಾನು ಅವರೊಂದಿಗೆ ಇದ್ದೇನೆ. ಅಂತಿಮವಾಗಿ ನ್ಯಾಯಕ್ಕೆ ಜಯ ದೊರೆಯುತ್ತದೆ ಎಂಬ ವಿಶ್ವಾಸ ನನಗಿದೆ

ಎಂ.ಕೆ.ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

'ಪರಿಶಿಷ್ಟರಿಗೆ ದ್ರೋಹ ಖಂಡಿಸಿ ಪ್ರತಿಭಟನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೀಸಲಾತಿ ಹೆಚ್ಚಿಸುವ ವಿಚಾರದಲ್ಲಿ ಪರಿಶಿಷ್ಟರಿಗೆ ರಾಜ್ಯ ಸರ್ಕಾರ ಮೋಸ ಮಾಡುತ್ತಿದೆ' ಎಂದು ಆರೋಪಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಇದನ್ನು ಖಂಡಿಸಿ ಶುಕ್ರವಾರ (ಮಾರ್ಚ್ 24) ಬೆಳಿಗ್ಗೆ 10 ಗಂಟೆಗೆ ರಾಜಭವನದ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಮೀಸಲಾತಿ ಹೆಚ್ಚಳ ಕುರಿತ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸದೇ, ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸದೇ, ಸುಳ್ಳು ಹೇಳುವ ಮೂಲಕ ರಾಜ್ಯ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಕಿವಿಗೆ ಹೂವು ಇಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಮೀಸಲಾತಿ ಹೆಚ್ಚಿಸುವ ವಿಚಾರದಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಯಾವುದೇ ಪ್ರಸ್ತಾವ ಬಂದಿಲ್ಲ ಎಂದು ಕೇಂದ್ರ ಸಚಿವರು ಸಂಸತ್ತಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಲು ಪ್ರಸ್ತಾವನೆಯನ್ನೇ ಸಲ್ಲಿಸದೇ, ಮೀಸಲಾತಿ ಮಾಡಿದ್ದೇವೆ ಎಂದು ಹೇಳಿಕೊಂಡು ದಲಿತರಿಗೆ ಸರ್ಕಾರ ಮೋಸ ಮಾಡುತ್ತಿದೆ' ಎಂದರು.

'ಈ ದ್ರೋಹವನ್ನು ಖಂಡಿಸಲು ಪಕ್ಷದ ಎಲ್ಲ ನಾಯಕರು ಶುಕ್ರವಾರ ಬೆಳಿಗ್ಗೆ ರಾಜ್ಯಪಾಲರ ಭೇಟಿಗೆ ಸಮಯಾವಕಾಶ ಕೇಳಿದ್ದೇವೆ. ಸಂಸತ್ತಿನಲ್ಲಿ ಅಧಿವೇಶನ ನಡೆಯುತ್ತಿರುವಾಗ ಬಿಜೆಪಿ ಸರ್ಕಾರ ಈ ವಿಚಾರವಾಗಿ ಪ್ರಸ್ತಾವ ಸಲ್ಲಿಸಲಿಲ್ಲ ಯಾಕೆ? ಈ ವಿಚಾರದಲ್ಲಿ ಬಿಜೆಪಿಯವರಿಗೆ ಬದ್ಧತೆ ಇದ್ದರೆ, ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿ ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಈ ಮೀಸಲಾತಿ ಹೆಚ್ಚಳ ವಿಚಾರವನ್ನು ಸೇರಿಸಬೇಕು' ಎಂದು ಆಗ್ರಹಿಸಿದರು.

ಎಸ್‌ಸಿ, ಎಸ್‌ಟಿ ಮೀಸಲು: ಶೆಡ್ಯೂಲ್ 9ಕ್ಕೆ ಸೇರಿಸಲು ಕೇಂದ್ರಕ್ಕೆ ಪತ್ರ

ಬೆಂಗಳೂರು: ಪರಿಶಿಷ್ಟ ಜಾತಿಗೆ ಶೇ 15ರಿಂದ ಶೇ 17, ಪರಿಶಿಷ್ಟ ಪಂಗಡಕ್ಕೆ ಶೇ 3ರಿಂದ ಶೇ7ರಷ್ಟು ಮೀಸಲಾತಿ ಹೆಚ್ಚಿಸಿ ರಾಜ್ಯ ಸರ್ಕಾರ ಮಾಡಿದ 'ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಕಾಯ್ದೆ–2022'ನ್ನು ಸಂವಿಧಾನದ ಶೆಡ್ಯೂಲ್ 9ರಲ್ಲಿ ಸೇರಿಸುವಂತೆ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರಿಗೆ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಪತ್ರ ಬರೆದಿದ್ದಾರೆ.

ಕಾಯ್ದೆಯ ಪ್ರತಿ ಸಹಿತ ಗುರುವಾರ ಪತ್ರ ಬರೆದಿರುವ ಅವರು, ಕಾಯ್ದೆಯನ್ನು ಸಂವಿಧಾನದ ಶೆಡ್ಯೂಲ್ 9ರಲ್ಲಿ ಸೇರಿಸಲು ಫೆ. 9ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನೂ ಉಲ್ಲೇಖಿಸಿದ್ದಾರೆ. 'ಕಾಯ್ದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಹೀಗಾಗಿ, ಕಾಯ್ದೆಯನ್ನು ತಮಗೆ ಕಳುಹಿಸುತ್ತಿದ್ದೇನೆ' ಎಂದೂ ಪತ್ರದಲ್ಲಿ ಅವರು ತಿಳಿಸಿದ್ದಾರೆ.

ಶೆಡ್ಯೂಲ್ 9ಕ್ಕೆ ಸೇರಿಸಲು ಬದ್ಧ– ಸಿಎಂ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಹೆಚ್ಚಿಸಿ ಈಗಾಗಲೇ ಕಾನೂನು ರಚಿಸಿದ್ದು, ಅದನ್ನು ಸಂವಿಧಾನದ ಶೆಡ್ಯೂಲ್ 9ಕ್ಕೆ ಸೇರಿಸುವ ಬದ್ಧತೆ ಸರ್ಕಾರಕ್ಕಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಪರಿಶಿಷ್ಟರ ಮೀಸಲಾತಿ ವಿಚಾರದಲ್ಲಿ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಸುರ್ಜೇವಾಲಾ ಅವರು ಮೀಸಲಾತಿಗೆ ಸಂಬಂಧಿಸಿದಂತೆ ಇತಿಹಾಸ ಓದಬೇಕು. ಅಷ್ಟೇ ಅಲ್ಲ, ಮೀಸಲಾತಿ ಬಗ್ಗೆ ಕಾಂಗ್ರೆಸ್‌ಗೆ ಮಾತನಾಡುವ ನೈತಿಕ ಹಾಗೂ ರಾಜಕೀಯ ಅಧಿಕಾರ ಇಲ್ಲ' ಎಂದರು.

ಬಿಜೆಪಿ: ಬಿಹಾರ ಸೇರಿ 4 ರಾಜ್ಯಗಳಿಗೆ ನೂತನ ಅಧ್ಯಕ್ಷರ ನೇಮಕ

ನವದೆಹಲಿ (ಪಿಟಿಐ): ಬಿಜೆಪಿಯು ಗುರುವಾರ ನಾಲ್ಕು ರಾಜ್ಯಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸಿದ್ದು, ಚುನಾವಣೆ ಹೊಸ್ತಿಲಲ್ಲಿರುವ ಬಿಹಾರದಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗೆ ಆದ್ಯತೆ ನೀಡಿದೆ.

ಲೋಕಸಭೆ ಸದಸ್ಯ ಸಿ.ಪಿ. ಜೋಶಿ ಅವರನ್ನು ರಾಜಸ್ಥಾನ ಘಟಕದ ಅಧ್ಯಕ್ಷರನ್ನಾಗಿ, ಒಬಿಸಿ ನಾಯಕ, ವಿಧಾನಪರಿಷತ್ತಿನ ಸದಸ್ಯ ಸಾಮ್ರಾಟ್ ಚೌಧರಿ ಅವರನ್ನು ಬಿಹಾರ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಸಾಂಸ್ಥಿಕ ಘಟಕಗಳನ್ನು ಬಲಪಡಿಸಲು ಲೋಕಸಭೆ ಹಾಗೂ ಬಿಹಾರ ವಿಧಾನಸಭೆಗೆ ಚುನಾವಣೆಗೆ ಸಜ್ಜಾಗುತ್ತಿರುವ ನಿರ್ಣಾಯಕ ಹಂತದಲ್ಲಿ ನೂತನ ಅಧ್ಯಕ್ಷರನ್ನು ನೇಮಕ ಮಾಡಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಆದೇಶ ಹೊರಡಿಸಿದ್ದಾರೆ.

ಒಡಿಶಾದ ಮಾಜಿ ಸಚಿವ ಮನ್‌ಮೋಹನ್ ಸಾಮಲ್ ಅವರನ್ನು ಒಡಿಶಾ ಘಟಕದ ಅಧ್ಯಕ್ಷರಾಗಿ ನೇಮಿಸಿದ್ದು, ದೆಹಲಿಯಲ್ಲಿ ಈವರೆಗೂ ಕಾರ್ಯಾಧ್ಯಕ್ಷರಾಗಿದ್ದ ವೀರೇಂದ್ರ ಸಚ್‌ದೇವ ಅವರಿಗೆ ಅಧ್ಯಕ್ಷರಾಗಿ ಬಡ್ತಿ ನೀಡಲಾಗಿದೆ.

ಬಿಗಿ ಭದ್ರತೆ, ಸಿಸಿಟಿವಿ ಕ್ಯಾಮೆರಾ ನಿಗಾ

ದಿಬ್ರೂಗಢ ಕಾರಾಗೃಹದ ಪ್ರತ್ಯೇಕ ಸೆಲ್‌ನಲ್ಲಿ ಅಮೃತಪಾಲ್ ಸಿಂಗ್ ಸಹಚರರು

ದಿಬ್ರೂಗರ್, ಅಸ್ಸಾಂ (ಪಿಟಿಐ): ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತಪಾಲ್ ಸಿಂಗ್‌ನ ಏಳು ಸಹಚರರನ್ನು, ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಪ್ರತ್ಯೇಕ ಕೋಣೆಗಳಲ್ಲಿ ಇರಿಸಿದ್ದು, ಸಿಸಿಟಿವಿ ಕಣ್ಗಾವಲು ಇಡಲಾಗಿದೆ.



ಅಮೃತಪಾಲ್ ಸಿಂಗ್

ಇಡೀ ಕಾರಾಗೃಹದಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿದೆ. 'ವಾರಿಸ್ ಪಂಜಾಬ್ ಡೇ' (ಡಬ್ಲ್ಯುಪಿಡಿ) ಸಂಘಟನೆಯ ಏಳು ಸದಸ್ಯರ ಆರೋಗ್ಯ ತಪಾಸಣೆ ನಡೆಸಲಾಗಿದೆ. ಪ್ರತ್ಯೇಕ ಕೋಣೆಯಲ್ಲಿ ಹಾಸಿಗೆ, ಹೊದಿಕೆ, ಟಿ.ವಿ. ಒದಗಿಸಲಾಗಿದೆ.

ಕಣ್ಗಾವಲು ಬಿಗಿಗೊಳಿಸುವ ಕ್ರಮವಾಗಿ ಜೈಲಿನ ಒಳ ಭಾಗದಲ್ಲಿ ನಾಲ್ಕು ಸಿಸಿಟಿವಿ ಕ್ಯಾಮೆರಾ ಹಾಗೂ ಹೊರ ಭಾಗದಲ್ಲಿಯೂ ಹೆಚ್ಚುವರಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಭದ್ರತೆಗಾಗಿ ಹೊರಗೆ ಬ್ಲ್ಯಾಕ್ ಪ್ಯಾಂಥರ್ ಅಸ್ಸಾಂ ಪೊಲೀಸ್ ಪಡೆ ಕಮ್ಯಾಂಡೊ ಹಾಗೂ ಒಳಗೆ ಸಿಆರ್‌ಪಿಎಫ್ ಯೋಧರನ್ನು ನಿಯೋಜಿಸಲಾಗಿದೆ.

ಭದ್ರತಾ ಕ್ರಮಗಳನ್ನು ಐಜಿಪಿ ಪ್ರಶಾಂತ ಭುಯನ್, ಜಿಲ್ಲಾಧಿಕಾರಿ ಬಿಸ್ವೈಟ್ ಪೆಗು ಅವರು ಬುಧವಾರ ಪರಿಶೀಲಿಸಿದರು.

ಅಮೃತ್‌ಪಾಲ್ ಸಿಂಗ್ ಅವರ ಚಿಕ್ಕಪ್ಪ ಹರಜೀತ್ ಸಿಂಗ್ ಸೇರಿದಂತೆ ಏಳು ಮಂದಿ ಸಹಚರರನ್ನು ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಬಂಧಿಸಿದ್ದು, ದಿಬ್ರೂಗರ್‌ಗೆ ಕರೆತರಲಾಗಿತ್ತು.

ಪ್ರಮುಖ ಸದಸ್ಯನ ಬಂಧನ (ಚಂಡೀಗಢ ವರದಿ): ಅಮೃತ್‌ಪಾಲ್ ಸಿಂಗ್‌ನ ಖಾಸಗಿ ಭದ್ರತೆಯ ಪ್ರಮುಖ ಸದಸ್ಯ ಎನ್ನಲಾದ ತೇಜಿಂದರ್ ಸಿಂಗ್ ಗಿಲ್ ಎಂಬಾತನನ್ನು ಪಂಜಾಬ್‌ನ ಪೊಲೀಸರು ಬಂಧಿಸಿದ್ದಾರೆ. ಲೂಧಿಯಾನ ಜಿಲ್ಲೆಯ ಖನ್ನಾ ವಲಯದ ಮಂಗೇವಾಲ್ ಗ್ರಾಮದ ಆತನ ನಿವಾಸದಲ್ಲಿ ಬಂಧಿಸಲಾಯಿತು.

'ಮಾಜಿ ಸೈನಿಕರು, ಯುವಕರು ಗುರಿ'

ಚಂಡೀಗಢ(ಪಿಟಿಐ): ಅಮೃತ್ ಪಾಲ್ ಸಿಂಗ್ ಭಯೋತ್ಪಾದಕ ಸಂಘಟನೆಯನ್ನು ಕಟ್ಟಲು ಮಾದಕ ದ್ರವ್ಯ ವ್ಯಸನಿಗಳು ಮತ್ತು ಮಾಜಿ ಸೈನಿಕರನ್ನೇ ಗುರಿಯಾಗಿಸಿದ್ದ ಎಂದು ಗುರುವಾರ ಇಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

ಅಮೃತ್‌ಪಾಲ್ ಅವರ ಪಯಣ ಮತ್ತು ಯೋಜನೆಯ ಕಾರ್ಯಗತವು ಪಾಕಿಸ್ತಾನ ಗುಪ್ತಚರ ಸಂಸ್ಥೆಯ ಅಪ್ಪಣೆಯ ಮೇರೆಗೆ ನಡೆಯುವ ಸಾಧ್ಯತೆ ಇತ್ತು. ದುಬೈನಿಂದ ವಾಪಸಾದ ಬಳಿಕ ಜಲ್ಲುಪುರ್ ಖೇರಾ ಗ್ರಾಮದಲ್ಲಿ ವ್ಯಸನ ಮುಕ್ತ ಕೇಂದ್ರವನ್ನು ಆರಂಭಿಸಿದ್ದ. ಇದರ ಜತೆಗೆ ದುರ್ನಡತೆಯಿಂದ ನಿವೃತ್ತಿ ಹೊಂದಿರುವ ಮಾಜಿ ಸೈನಿಕರನ್ನು ಹುಡುಕಿ ಅವರನ್ನು ಶಸ್ತ್ರಾಸ್ತ್ರಗಳ ತರಬೇತಿಗೆ ಬಳಸಿಕೊಳ್ಳಲಾಗುತ್ತಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ನಟ, ಹೋರಾಟಗಾರ ದೀಪು ಸಿಧುವಿನ ಮರಣದ ನಂತರ 'ವಾರಿಸ್ ಪಂಜಾಬ್ ಡೇ' (ಡಬ್ಲ್ಯುಪಿಡಿ) ಸಂಘಟನೆಯ ಉಸ್ತುವಾರಿ ವಹಿಸಿಕೊಂಡು, ಇಬ್ಬರು ಖಾಸಗಿ ರಕ್ಷಣಾ ಸಿಬ್ಬಂದಿಯನ್ನು ಇರಿಸಿಕೊಂಡಿದ್ದ, ಈ ವರ್ಷ ಅವರ ಸಂಖ್ಯೆ 16ಕ್ಕೆ ಏರಿಕೆಯಾಗಿತ್ತು.

ಅಮೃತ್‌ಪಾಲ್‌ಗೆ ಆಶ್ರಯ ನೀಡಿದ್ದ ಮಹಿಳೆ ಬಂಧನ

ಅಮೃತಪಾಲ್ ಸಿಂಗ್ ಮತ್ತು ಆತನ ಸಹಚರ ಪಾಪಲ್‌ಪ್ರೀತ್ ಸಿಂಗ್‌ಗೆ ಕುರುಕ್ಷೇತ್ರ ಜಿಲ್ಲೆಯ ತನ್ನ ಮನೆಯಲ್ಲಿ ಆಶ್ರಯ ನೀಡಿದ ಆರೋಪದ ಮೇರೆಗೆ ಬಲ್ಜಿತ್ ಕೌರ್ ಎಂಬ ಮಹಿಳೆಯನ್ನು ಹರಿಯಾಣ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುರುಕ್ಷೇತ್ರ ಜಿಲ್ಲೆಯ ಶಹಾಬಾದ್‌ನಿಂದ ಮಹಿಳೆಯನ್ನು ಬಂಧಿಸಲಾಗಿದ್ದು, ಅವರನ್ನು ಪಂಜಾಬ್ ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ಕುರುಕ್ಷೇತ್ರದ ಪೊಲೀಸ್ ವರಿಷ್ಠಾಧಿಕಾರಿ ಸುರೀಂದರ್ ಸಿಂಗ್ ಭೋರಿಯಾ ಮಾಹಿತಿ ನೀಡಿದ್ದಾರೆ. ಬಂಧಿತ ಮಹಿಳೆ ಮತ್ತು ಪಾಪಲ್‌ಪ್ರೀತ್ ಸಿಂಗ್ ಎರಡು ವರ್ಷಗಳಿಂದ ಪರಿಚಿತರಾಗಿದ್ದರು. ಬೈಕ್, ಕಾರು, ಎಸ್‌ಯುವಿಗಳ ಮೂಲಕ ತಪ್ಪಿಸಿಕೊಂಡಿರುವ ಪಾಪಲ್‌ಪ್ರೀತ್ ಸಿಂಗ್ ಮತ್ತು ಅಮೃತಪಾಲ್ ಸಿಂಗ್ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ ಎಂದು ಅವರು ಹೇಳಿದರು. ಕುರುಕ್ಷೇತ್ರದಲ್ಲಿ ಮನೆಯಿಂದ ಹೊರಟ ಅಮೃತ್‌ಪಾಲ್ ತನ್ನ ಮುಖ ಮರೆಮಾಚಲು ಛತ್ರಿಯನ್ನು ಹಿಡಿದುಕೊಂಡು ಹೋಗಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಕೇಂದ್ರ ಬಜೆಟ್‌ಗೆ ಚರ್ಚೆ ಇಲ್ಲದೇ ಅನುಮೋದನೆ

ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಆರಂಭವಾಗುವ ಹಣಕಾಸು ವರ್ಷದ ಖರ್ಚು–ವೆಚ್ಚದ ₹45 ಲಕ್ಷ ಕೋಟಿಯ ಕೇಂದ್ರ ಬಜೆಟ್‌ಗೆ ಯಾವುದೇ ಚರ್ಚೆ ಇಲ್ಲದೆ ಲೋಕಸಭೆಯು ಗುರುವಾರ ಅನುಮೋದನೆ ನೀಡಿದೆ. ಅದಾನಿ ಸಮೂಹಕ್ಕೆ ಸಂಬಂಧಿಸಿದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಯ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿ ವಿರೋಧ ಪಕ್ಷಗಳು ಸತತವಾಗಿ ಪ್ರತಿಭಟನೆ ನಡೆಸುತ್ತಿವೆ. ರಾಹುಲ್ ಗಾಂಧಿ ಲಂಡನ್‌ನಲ್ಲಿ ನೀಡಿದ ಹೇಳಿಕೆಗೆ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಸಂಸದರು ಪ್ರತಿಭಟಿಸುತ್ತಿದ್ದಾರೆ. ಹೀಗಾಗಿ, ಲೋಕಸಭೆಯಲ್ಲಿ ಚರ್ಚೆ ನಡೆದಿಲ್ಲ.

ಆಡಳಿತ ಮತ್ತು ವಿರೋಧ ಪಕ್ಷಗಳ ಪ್ರತಿಭಟನೆಯ ಕೋಲಾಹಲದಿಂದಾಗಿ ಲೋಕಸಭೆಯ ಕಲಾಪವನ್ನು ಎರಡು ಬಾರಿ ಮುಂದೂಡಲಾಯಿತು. ಸಂಜೆ ಆರು ಗಂಟೆಯ ಬಳಿಕ ನಡೆದ ಕಲಾಪದಲ್ಲಿ ಬಜೆಟ್‌ಗೆ ಒಪ್ಪಿಗೆ ನೀಡಲಾಯಿತು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಸಂಬಂಧಿ ಮಸೂದೆಗಳನ್ನು ಚರ್ಚೆ ಮತ್ತು ಮತದಾನಕ್ಕಾಗಿ ಮಂಡಿಸಿದರು. ಮಸೂದೆಗಳನ್ನು ಮತಕ್ಕೆ ಹಾಕಿದಾಗ ವಿರೋಧ ಪಕ್ಷಗಳ ಸಂಸದರು ಸ್ಪೀಕರ್ ಪೀಠದ ಮುಂದೆ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಮಸೂದೆಗಳಿಗೆ ಸದನವು ಅಂಗೀಕಾರ ನೀಡಿತು. ಈ ಇಡೀ ಪ್ರಕ್ರಿಯೆಯು 12 ನಿಮಿಷಗಳಲ್ಲಿ ಪೂರ್ಣಗೊಂಡಿತು.

ತೆರಿಗೆ ಪ್ರಸ್ತಾವಗಳನ್ನು ಹೊಂದಿರುವ ಹಣಕಾಸು ಮಸೂದೆ 2023 ಅನ್ನೂ ನಿರ್ಮಲಾ ಅವರು ಮಂಡಿಸಿದ್ದಾರೆ. ಇದು ಲೋಕಸಭೆಯಲ್ಲಿ ಶುಕ್ರವಾರ ಚರ್ಚೆಗೆ ಬರಲಿದೆ.

ಬಜೆಟ್ ಸಂಬಂಧಿತ ಎಲ್ಲ ಮಸೂದೆಗಳನ್ನು ರಾಜ್ಯಸಭೆಯಲ್ಲಿಯೂ ಮಂಡಿಸಲಾಗುವುದು. ಇವೆಲ್ಲವೂ ಹಣಕಾಸು ಮಸೂದೆ ವರ್ಗದಲ್ಲಿ ಬರುವುದರಿಂದ ಇವುಗಳಲ್ಲಿ ಬದಲಾವಣೆ ಮಾಡಲು ರಾಜ್ಯಸಭೆಗೆ ಅಧಿಕಾರ ಇಲ್ಲ. ಚರ್ಚೆ ಮಾಡುವುದಕ್ಕೆ ಮಾತ್ರ ಅವಕಾಶ ಇದೆ. ಹಣಕಾಸು ಮಸೂದೆಗಳಿಗೆ ಲೋಕಸಭೆಯ ಅಂಗೀಕಾರ ಮಾತ್ರ ಸಾಕು.

ಸಂಸತ್ ಅಧಿವೇಶನವು ಏ.6ರ ವರೆಗೆ ನಿಗದಿಯಾಗಿದೆ. ಆದರೆ, ಬಜೆಟ್ ಸಂಬಂಧಿ ಕೆಲಸಗಳು ಮುಗಿದ ಕೂಡಲೇ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗುವುದು ಎಂದು ಹೇಳಲಾಗುತ್ತಿದೆ. ಸತತವಾಗಿ ಗದ್ದಲ ನಡೆದ ಕಾರಣ ಈ ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿದು ಬಂದಿದೆ.

ಸೈಬರಾಬಾದ್ ಪೊಲೀಸರ ಮಹತ್ವದ ಕಾರ್ಯಾಚರಣೆ

ಸೂಕ್ಷ್ಮ ದತ್ತಾಂಶಗಳ ಕದ್ದು, ಮಾರುವ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸರ್ಕಾರಿ ಸಂಸ್ಥೆಗಳಿಗೆ ಸೇರಿದ ಸೂಕ್ಷ್ಮ, ಗೋಪ್ಯ ದತ್ತಾಂಶಗಳು ಹಾಗೂ 16.8 ಕೋಟಿ ಜನರ ವೈಯಕ್ತಿಕ ದತ್ತಾಂಶಗಳನ್ನು ಕದ್ದು ಮಾರುವವರ ಜಾಲವನ್ನು (ಗ್ಯಾಂಗ್) ಬೇಧಿಸಿರುವುದಾಗಿ ಸೈಬರಾಬಾದ್ ಪೊಲೀಸರು ತಿಳಿಸಿದ್ದಾರೆ.

ಈ ಜಾಲದವರು ರಕ್ಷಣಾ ಸಿಬ್ಬಂದಿ, ಸರ್ಕಾರಿ ನೌಕರರು, ವ್ಯಕ್ತಿಗಳ ಮೊಬೈಲ್ ಸಂಖ್ಯೆಗಳು, 'ನೀಟ್' ವಿದ್ಯಾರ್ಥಿಗಳ ಮಾಹಿತಿ, ಇಂಧನ ಮತ್ತು ವಿದ್ಯುತ್ ವಲಯ, ಪ್ಯಾನ್ ಕಾರ್ಡ್ ದತ್ತಾಂಶಗಳೂ ಸೇರಿ ಸೂಕ್ಷ್ಮ ವಿವರಗಳನ್ನು ಒಳಗೊಂಡ ಸುಮಾರು 140 ಬಗೆಯ ಮಾಹಿತಿಗಳನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದಿದೆ ಎಂದು ಸೈಬರಾಬಾದ್ ಪೊಲೀಸ್ ಕಮಿಷನರ್ ಸ್ಟೀಫನ್ ರವೀಂದ್ರ ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಗ್ಯಾಸ್ ಮತ್ತು ಪೆಟ್ರೋಲಿಯಂ ಫ್ರಾಂಚೈಸಿಗಳು, ಡಿ–ಮ್ಯಾಟ್ ಖಾತೆಗಳು, ವಿದ್ಯಾರ್ಥಿಗಳು, ಮಹಿಳೆಯರ ದತ್ತಾಂಶ, ಬೆಂಗಳೂರು ಮಹಿಳಾ ಗ್ರಾಹಕರ ದತ್ತಾಂಶ, ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಜನರ ದತ್ತಾಂಶ, ವಿಮೆ, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಹೊಂದಿರುವವರ (ಆ್ಯಕ್ಸಿಸ್, ಎಚ್‌ಎಸ್‌ಬಿಸಿ ಇತ್ಯಾದಿ ಬ್ಯಾಂಕ್‌ಗಳು) ದತ್ತಾಂಶ, ವಾಟ್ಸ್‌ಆ್ಯಪ್–ಫೇಸ್‌ಬುಕ್ ಬಳಕೆದಾರರು, ಐಟಿ ಉದ್ಯೋಗಿಗಳು, ಪದೇ ಪದೇ ವಿಮಾನದಲ್ಲಿ ಪ್ರಯಾಣಿಸುವವರ ದತ್ತಾಂಶಗಳನ್ನೂ ಈ ಜಾಲದವರು ಕದ್ದು ಮಾರುತ್ತಿದ್ದದ್ದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪೈಕಿ ಕೆಲವರನ್ನು ಬಂಧಿಸಲಾಗಿದೆ. ಅವರು ಜಸ್ಟ್ ಡೈಲ್ ಮತ್ತು ಅದೇ ರೀತಿಯ ಇತರ ವೇದಿಕೆಗಳ ಮೂಲಕ ದತ್ತಾಂಶಗಳ ಮಾರಾಟದಲ್ಲಿ ತೊಡಗಿದ್ದಾರೆ ಎಂದು ಅವರು ವಿವರಿಸಿದರು.

'ಹೀಗೆ ಕದ್ದ ದತ್ತಾಂಶಗಳಿಂದ ಅಪರಿಚಿತರು ಪ್ರಮುಖ ಸಂಸ್ಥೆಗಳನ್ನು ಅನಧಿಕೃತವಾಗಿ ಪ್ರವೇಶಿಸಿ, ಅದನ್ನು ಬಳಸಬಹುದು. ರಕ್ಷಣಾ ಮತ್ತು ಸರ್ಕಾರಿ ಉದ್ಯೋಗಿಗಳ ಡೇಟಾವನ್ನು ಬೇಹುಗಾರಿಕೆಗೆ ಬಳಸಬಹುದು. ಇದರಿಂದ ರಾಷ್ಟ್ರೀಯ ಭದ್ರತೆಗೆ ಧಕ್ಕೆ ಎದುರಾಗುವ ಸಾಧ್ಯತೆಯೂ ಇರುತ್ತದೆ. ಗಂಭೀರ ಅಪರಾಧ ಕೃತ್ಯಕ್ಕೂ ಇದು ಬಳಕೆಯಾಗಬಹುದು. ಪ್ಯಾನ್ ಕಾರ್ಡ್ ದತ್ತಾಂಶಗಳನ್ನು ಬಳಸಿ ಗಂಭೀರ ಆರ್ಥಿಕ ಅಪರಾಧಗಳನ್ನು ಎಸಗಬಹುದು. ಇನ್ನೂ ವಿವಿಧ ರೀತಿಯಲ್ಲಿ ದತ್ತಾಂಶಗಳನ್ನು ದುರ್ಬಳಕೆ ಮಾಡಿಕೊಂಡು ಸೈಬರ್ ಅಪರಾಧಗಳಿಗೆ ಕಾರಣವಾಗಬಹುದು' ಎಂದು ಅವರು ಹೇಳಿದರು.

ಮೂರು ಕಂಪನಿಗಳ ಮೂಲಕ ಕಾರ್ಯಾಚರಣೆ

ಈ ಆರೋಪಿಗಳ ಜಾಲವು ಪ್ರಸ್ತುತ 'ಡೇಟಾ ಮಾರ್ಟ್ ಇನ್ಫೋಟೆಕ್', 'ಗ್ಲೋಬಲ್ ಡೇಟಾ ಆರ್ಟ್ಸ್' ಮತ್ತು 'ಎಂಎಸ್ ಡಿಜಿಟಲ್ ಗ್ರೋ' ಎಂಬ ಮೂರು ಕಂಪನಿಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿತ್ತು ಎಂದು ಪೊಲೀಸ್ ಕಮಿಷನರ್ ಮಾಹಿತಿ ನೀಡಿದರು.

ಕುಮಾರ್ ನಿತಿನ್ ಭೂಷನ್, ಕುಮಾರಿ ಪೂಜಾ ಪಾಲ್, ಸುಶೀಲ್ ಥೋಮರ್, ಅತುಲ್ ಪ್ರತಾಪ್ ಸಿಂಗ್, ಮುಸ್ಕಾನ್ ಹಾಸನ್, ಸಂದೀಪ್ ಪಾಲ್, ಜಿಯಾ ಉರ್ ರೆಹಮಾನ್ ಬಂಧಿತ ಆರೋಪಿಗಳಾಗಿದ್ದಾರೆ. ಇವರಲ್ಲಿ ಮುಖ್ಯ ಆರೋಪಿ ಕುಮಾರ್ ನಿತಿನ್ ಭೂಷಣ್ ಉತ್ತರ ಪ್ರದೇಶದ ನೋಯ್ಡಾದಲ್ಲಿ 'ಕಾಲ್ ಸೆಂಟರ್' ಹೊಂದಿದ್ದು, ಅವರು ಜಸ್ಟ್ ಡೈಲ್ ಮತ್ತು ಇತರ ಸಾಮಾಜಿಕ ಜಾಲತಾಣಗಳ ಮೂಲಕ ಗ್ರಾಹಕರ ದತ್ತಾಂಶಗಳನ್ನು ಲಾಭಕ್ಕಾಗಿ ವಂಚಕರಿಗೆ ಮರು ಮಾರಾಟ ಮಾಡುತ್ತಿದ್ದ ಎಂದರು.

ರಕ್ಷಣಾ ಸಿಬಂದಿಯ ಸೂಕ್ಷ್ಮ ದತ್ತಾಂಶಗಳಲ್ಲಿ ಸಿಬ್ಬಂದಿಯ ಶ್ರೇಣಿ, ಇಮೇಲ್ ವಿಳಾಸ, ಕೆಲಸ ಮಾಡುವ ಸ್ಥಳ; 'ನೀಟ್' ವಿದ್ಯಾರ್ಥಿಗಳ ಹೆಸರು, ತಂದೆಯ ಹೆಸರು, ಮೊಬೈಲ್ ಸಂಖ್ಯೆ ಮತ್ತು ವಿಳಾಸ; ಪ್ಯಾನ್ ಕಾರ್ಡ್ ಮೂಲಕ ಸಂಬಂಧಿಸಿದವರ ಆದಾಯ, ಇಮೇಲ್ ವಿಳಾಸ, ಮೊಬೈಲ್ ಸಂಖ್ಯೆ, ಮನೆ ವಿಳಾಸ ಇತ್ಯಾದಿ ದತ್ತಾಂಶಗಳು ಆರೋಪಿಗಳ ಬಳಿ ಲಭ್ಯವಿದ್ದವು ಎಂದು ಅವರು ಹೇಳಿದರು.

3 ಕೋಟಿ ಜನರ ಮೊಬೈಲ್ ಮಾಹಿತಿ ಸೋರಿಕೆ

ಇವೇ ಅಲ್ಲದೆ, ಸುಮಾರು ಮೂರು ಕೋಟಿ ವ್ಯಕ್ತಿಗಳ ಮೊಬೈಲ್ ಸಂಖ್ಯೆ, ಸೇವೆ ಆರಂಭವಾದ ದಿನಾಂಕ, ಬಿಲ್ಲಿಂಗ್ ವಿವರ, ಖಾತೆ ಸಂಖ್ಯೆ, ಸಿಮ್ ಕಾರ್ಡ್ ಸಂಖ್ಯೆ ಇತ್ಯಾದಿಗಳು ಸೋರಿಕೆ ಆಗಿರುವುದು ಪತ್ತೆಯಾಗಿದೆ ಎಂದು ಸೈಬರಾಬಾದ್ ಪೊಲೀಸ್ ಕಮಿಷನರ್ ಸ್ಟೀಫನ್ ರವೀಂದ್ರ ಮಾಹಿತಿ ನೀಡಿದರು.

ಬಂಧಿತರಿಂದ 12 ಮೊಬೈಲ್, ಮೂರು ಲ್ಯಾಪ್‌ಟಾಪ್, ಎರಡು ಸಿಪಿಯು, ಜಸ್ಟ್ ಡೈಲ್‌ನ ತೆರಿಗೆ ಇನ್‌ವಾಯ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳಲ್ಲಿ ಸರ್ಕಾರಿ, ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳ 138 ಬಗೆಯ ಸೂಕ್ಷ್ಮ ಮಾಹಿತಿಗಳ ದತ್ತಾಂಶಗಳಿವೆ ಎಂದರು.


ಬಿಲ್ಕಿಸ್ ಬಾನೊ ಪ್ರಕರಣ: ವಿಶೇಷ ಪೀಠ ರಚನೆಗೆ ಸಮ್ಮತಿ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನೊ ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಮಂದಿ ಅಪರಾಧಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಿದ್ದನ್ನು ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆಗೆ ವಿಶೇಷ ಪೀಠ ರಚಿಸಲು ಸುಪ್ರಿಂ ಕೋರ್ಟ್ ಸಮ್ಮತಿಸಿದೆ. ಗುಜರಾತ್ ಗಲಭೆಯ ವೇಳೆ ಏಳು ಜನರನ್ನು ಕೊಲೆ ಮಾಡಿದ್ದ ಆರೋಪವೂ ಅಪರಾಧಿಗಳ ಮೇಲಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದಿವಾಲಾ ಸದಸ್ಯರಾಗಿದ್ದ ಪೀಠವು ಈ ತೀರ್ಮಾನ ತೆಗೆದುಕೊಂಡಿತು. ಅರ್ಜಿದಾರರ ಪರ ವಕೀಲರಾದ ಶೋಭಾ ಗುಪ್ತಾ, ಪ್ರಕರಣದ ತುರ್ತು ವಿಚಾರಣೆ ಅಗತ್ಯವಿದ್ದು, ವಿಶೇಷ ಪೀಠ ರಚಿಸಬೇಕು ಎಂದಿದ್ದರು.

11 ಅಪರಾಧಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಿದ್ದ ಸರ್ಕಾರದ ಕ್ರಮ ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿತ್ತು.


ಷೇರುಪೇಟೆ ವಹಿವಾಟು 289



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,151
ಇಂದಿನ ಅಂತ್ಯ	17,076
▼	75
ದಿನದ ಕನಿಷ್ಠ	17,045

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1700 (1700)
ಸೋಯಾ (ರಿಫೈಂಡ್)	₹1030 (1040)
ಸೂರ್ಯಕಾಂತಿ (ರಿಫೈಂಡ್)	₹1105 (1100)
ಪಾಮೋಲಿನ್	₹950 (955)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹142
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹129

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹301-539
ದ್ವಿತಳಿ (ಬಿ.ವಿ)	₹229-671


ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1500
ಸಣ್ಣ	₹500-1000

ಬಾಷ್ ಇಂಡಿಯಾ ಅಧ್ಯಕ್ಷರಾಗಿ ಗುರುಪ್ರಸಾದ್ ನೇಮಕ



ಗುರುಪ್ರಸಾದ್

ನವದೆಹಲಿ (ಪಿಟಿಐ): ಬಾಷ್ ಸಮೂಹದ ಭಾರತದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಗುರುಪ್ರಸಾದ್ ಮುದ್ಲಾಪುರ ಅವರನ್ನು ನೇಮಕ ಮಾಡಿರುವುದಾಗಿ ಬಾಷ್ ಲಿಮಿಟೆಡ್ ತಿಳಿಸಿದೆ.

ಹಾಲಿ ಅಧ್ಯಕ್ಷ ಸೌಮಿತ್ರ ಭಟ್ಟಾಚಾರ್ಯ ಅವರು ಜೂನ್ 30ರಂದು ನಿವೃತ್ತಿ ಆಗಲಿದ್ದು, ಜುಲೈ 1 ರಂದು ಗುರುಪ್ರಸಾದ್ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಗುರುಪ್ರಸಾದ್ ಅವರು ಸದ್ಯ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಆಗಿದ್ದು, ಆ ಹೊಣೆಗಾರಿಕೆಯನ್ನು ಸಹ ನೋಡಿಕೊಳ್ಳಲಿದ್ದಾರೆ ಎಂದು ಕಂಪನಿ ತಿಳಿಸಿದೆ.

ಬಾಷ್ ಸಮೂಹದಲ್ಲಿ 15 ವರ್ಷಕ್ಕೂ ಹೆಚ್ಚಿನ ಅನುಭವ ಹೊಂದಿರುವ ಅವರು ಹಲವು ವಿಭಾಗಗಳಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿದ್ದಾರೆ.

ಬಾಷ್ ಲಿಮಿಟೆಡ್‌ನಲ್ಲಿ ಸದ್ಯ ಕಾರ್ಯನಿರ್ವಾಹಕ ನಿರ್ದೇಶಕ ಆಗಿರುವ ಸಂದೀಪ್ ನೆಲಮಂಗಲ ಅವರನ್ನು ಬಾಷ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಆಗಿ ಜುಲೈ 1ರಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.

ಒಎನ್‌ಡಿಸಿ ಸೇರಿದ 'ನಮ್ಮ ಯಾತ್ರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಚಾಲಕರೇ ಒಗ್ಗೂಡಿ ರಚಿಸಿಕೊಂಡಿರುವ 'ನಮ್ಮ ಯಾತ್ರಿ' ಆ್ಯಪ್ ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ (ಒಎನ್‌ಡಿಸಿ) ಸೇರಿದೆ.

ಜಸ್ಪೇ ಟೆಕ್ನಾಲಜಿಸ್ ಕಂಪನಿಯು ಬೆಂಗಳೂರಿನ ಆಟೊ ಚಾಲಕರ ಜೊತೆಗೂಡಿ ನಮ್ಮ ಯಾತ್ರಿ ಆ್ಯಪ್ ಬಿಡುಗಡೆ ಮಾಡಿದೆ. ಈ ಆ್ಯಪ್, 42 ಸಾವಿರಕ್ಕೂ ಹೆಚ್ಚು ಚಾಲಕರು ಮತ್ತು 4.5 ಲಕ್ಷ ಗ್ರಾಹಕರನ್ನು ಒಳಗೊಂಡಿದೆ.

ಇ–ವಾಣಿಜ್ಯ ವಹಿವಾಟುಗಳು ಎಲ್ಲರಿಗೂ ಲಭ್ಯವಾಗುವಂತೆ ಒಎನ್‌ಡಿಸಿ ಮಾಡುತ್ತಿದೆ. ಒಎನ್‌ಡಿಸಿ ಮೂಲಕವೇ ಗ್ರಾಹಕರು ತಮ್ಮಿಷ್ಟದ ಆ್ಯಪ್ ಬಳಸಿ ಕಡಿಮೆ ಬೆಲೆಗೆ, ಯಾವುದೇ ಸಮಸ್ಯೆಗಳಿಲ್ಲದೇ ಪ್ರಯಾಣವನ್ನು ಬುಕ್ ಮಾಡಬಹುದಾಗಿದೆ.

ಒಎನ್‌ಡಿಸಿಯಲ್ಲಿನ ಮುಕ್ತ ಸಾರಿಗೆ ಜಾಲವು ಗ್ರಾಹಕರು ಮತ್ತು ಸೇವಾ ಪೂರೈಕೆದಾರರ ಅತಿದೊಡ್ಡ ಜಾಲವನ್ನು ಕಲ್ಪಿಸುತ್ತದೆ. ಎಲ್ಲ ಬಗೆಯ ಸಂಚಾರ ಸೇವೆಗಳನ್ನು ಡಿಜಿಟಲೀಕರಣಗೊಳಿಸುವ ಮತ್ತು ಪರಸ್ಪರ ಸಂಯೋಜಿಸುವ ಮೂಲಕ ಗ್ರಾಹಕರ ಹೆಚ್ಚಿನ ಅನುಕೂಲ ಒದಗಿಸುತ್ತದೆ ಎಂದು ಒಎನ್‌ಡಿಸಿ ಸಿಇಒ ಟಿ. ಕೋಶಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಗರಗಳ ವ್ಯಾಪ್ತಿ ವಿಸ್ತರಿಸುತ್ತಿರುವುದರಿಂದ ಪ್ರಯಾಣವನ್ನು ಹೆಚ್ಚು ಅನುಕೂಲಕರ ಮತ್ತು ಕೈಗೆಟುಕುವಂತೆ ಮಾಡಲು ಗ್ರಾಹಕರಿಗೆ ತಡೆರಹಿತ ಸೇವೆಗಳನ್ನು ನೀಡುವುದು ಮುಖ್ಯವಾಗಲಿದೆ. ಒಎನ್‌ಡಿಸಿಯಂತಹ ಮುಕ್ತ ವ್ಯವಸ್ಥೆಯೊಂದಿಗೆ ಪಾಲುದಾರಿಕೆ ಮಾಡಿಕೊಂಡಿರುವುದರಿಂದ ಅದು ಸಾಧ್ಯವಾಗಲಿದೆ ಎಂದು ಕೈಗಾರಿಕೆ ಉತ್ತೇಜನ ಮತ್ತು ಆಂತರಿಕ ವ್ಯಾಪಾರ ಇಲಾಖೆಯ ಕಾರ್ಯದರ್ಶಿ ಅನುರಾಗ್ ಜೈನ್ ಹೇಳಿದರು.

ಭಾರತದ ಇತರ ನಗರಗಳು ಮತ್ತು ಪಟ್ಟಣಗಳಲ್ಲಿ 'ನಮ್ಮ ಯಾತ್ರಿ' ಸ್ವರೂಪದ ಸೇವೆಯನ್ನು ಜಾರಿಗೊಳಿಸಲು ಉತ್ಸುಕರಾಗಿದ್ದೇವೆ ಎಂದು ಜಸ್ಪೇ ಟೆಕ್ನಾಲಜೀಸ್‌ನ ಸಿಇಒ ವಿಮಲ್ ಕುಮಾರ್ ತಿಳಿಸಿದರು.

ಭಾರತದ ಸಿರಿವಂತರ ಪಟ್ಟಿ • ಹಿಂಡನ್‌ಬರ್ಗ್ ವರದಿ ಪರಿಣಾಮ

ಎರಡನೇ ಸ್ಥಾನಕ್ಕಿಳಿದ ಅದಾನಿ

ಮುಂಬೈ (ಪಿಟಿಐ): ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ವರದಿಯ ಬಳಿಕ ಉದ್ಯಮಿ ಗೌತಮ್ ಅದಾನಿ ಭಾರತದ ಸಿರಿವಂತರ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಇಳಿಕೆ ಕಂಡಿದ್ದಾರೆ. ಉದ್ಯಮಿ ಮುಕೇಶ್ ಅಂಬಾನಿ ಮೊದಲ ಸ್ಥಾನಕ್ಕೆ ಏರಿದ್ದಾರೆ.

ಅದಾನಿ ಅವರು ಕಳೆದ ವರ್ಷದಲ್ಲಿ ಒಂದು ವಾರಕ್ಕೆ ₹3 ಸಾವಿರ ಕೋಟಿಯಷ್ಟು ಸಂಪತ್ತು ನಷ್ಟ ಅನುಭವಿಸಿದ್ದಾರೆ. ಅವರ ಒಟ್ಟಾರೆ ಸಂಪತ್ತು ಮೌಲ್ಯವು ಶೇ 60ರಷ್ಟು ಇಳಿಕೆ ಆಗಿದೆ. ಎಂ3ಎಂ–ಹುರೂನ್ ಗ್ಲೋಬಲ್ ಇಂಡಿಯಾ ಪ್ರಕಟಿಸಿರುವ ಸಿರಿವಂತರ ಪಟ್ಟಿಯ ಪ್ರಕಾರ ಮಾರ್ಚ್ ಮಧ್ಯಭಾಗದ ವೇಳೆಗೆ ಅದಾನಿ ಅವರು ಒಟ್ಟು ಸಂಪತ್ತು ಮೌಲ್ಯ ₹4.34 ಲಕ್ಷ ಕೋಟಿಯಷ್ಟು ಇದೆ.

ಮುಖ್ಯಾಂಶಗಳು

- ಭಾರತದ ಸಿರಿವಂತರ ಸಂಖ್ಯೆ 187
- ದೇಶದ ಸಿರಿವಂತರ ಪೈಕಿ ಮುಂಬೈನಲ್ಲೇ ಇದ್ದಾರೆ 66 ಸಿರಿವಂತರು

ಅಂಬಾನಿ ಅವರ ಸಂಪತ್ತು ಮೌಲ್ಯ ಶೇ 20ರಷ್ಟು ಕಡಿಮೆ ಆಗಿದೆ. ಹೀಗಿದ್ದರೂ ಅವರ ಒಟ್ಟು ಸಂಪತ್ತು ₹6.72 ಲಕ್ಷ ಕೋಟಿಯಷ್ಟು ಇರುವುದರಿಂದ ಅದಾನಿ ಅವರನ್ನು ಹಿಂದಿಕ್ಕಿ ಭಾರತದ ಸಿರಿವಂತರ ಪಟ್ಟಿಯಲ್ಲಿ ಮೊಲದ ಸ್ಥಾನಕ್ಕೆ ತಲುಪಿದ್ದಾರೆ.

ವಿಶ್ವದ ಸಿರಿವಂತರ ಪಟ್ಟಿಯಲ್ಲಿ ಅಂಬಾನಿ 9ನೇ ಸ್ಥಾನದಲ್ಲಿ, ಅದಾನಿ 23ನೇ ಸ್ಥಾನದಲ್ಲಿ ಇದ್ದಾರೆ.




ಅದಾನಿ

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ಮೇಲೆ ಷೇರು ಬೆಲೆಯ ಮೇಲೆ ಕೃತಕವಾಗಿ ಪ್ರಭಾವ ಬೀರಿದ ಹಾಗೂ ಲೆಕ್ಕಪತ್ರಗಳ ಅಕ್ರಮದಲ್ಲಿ ತೊಡಗಿದ ಆರೋಪವನ್ನು ಹೊರಿಸಿದೆ. ಆದರೆ, ಸಮೂಹವು ಎಲ್ಲಾ ಆರೋಪಗಳನ್ನು ತಿರಸ್ಕರಿಸಿದೆ. ಆದರೆ, ವರದಿಯಿಂದಾಗಿ ಅದಾನಿ ಸಮೂಹದ ಕಂಪನಿಗಳ ಷೇರು ಬೆಲೆಯಲ್ಲಿ ಭಾರಿ ಇಳಿಕೆ ಕಂಡುಬಂದಿತು.

ಅದಾನಿ ಮತ್ತು ಅಂಬಾನಿ ಸಂಪತ್ತು ಮೌಲ್ಯ ಕಡಿಮೆ ಆಗಿದ್ದರಿಂದ ಸಿರಿವಂತರ ಜಾಗತಿಕ ಪಟ್ಟಿಯಲ್ಲಿ ಇಬ್ಬರ ಸ್ಥಾನವೂ ಇಳಿಕೆ ಕಂಡಿದೆ. ಹೀಗಿದ್ದರೂ 10 ವರ್ಷಗಳ ಅವಧಿಗೆ ಇಬ್ಬರ ನಿವ್ವಳ ಸಂಪತ್ತಿನಲ್ಲಿ ಏರಿಕೆ ಆಗುತ್ತಿದೆ. ಅದಾನಿ ನಿವ್ವಳ ಸಂಪತ್ತು ಮೌಲ್ಯ ಶೇ 1,225 ಮತ್ತು ಅಂಬಾನಿ ಸಂಪತ್ತು ಮೌಲ್ಯ ಶೇ 356ರಷ್ಟು ಹೆಚ್ಚಾಗಿದೆ.

ಜಾಗತಿಕ ಸಿರಿವಂತರ ಪಟ್ಟಿಯಲ್ಲಿ ಭಾರತದಲ್ಲಿ 10 ಮಹಿಳೆಯರು ಇದ್ದು, ಸ್ವ–ಪರಿಶ್ರಮದಿಂದ ಸಿರಿವಂತರ ಪಟ್ಟಿಯಲ್ಲಿ ಸ್ಥಾನ ಪಡೆದಿರುವವರ ಸಾಲಿನಲ್ಲಿ ಸಾಫ್ಟ್‌ವೇರ್ ಮತ್ತು ಸೇವೆಗಳ ವಲಯದಲ್ಲಿ ರಾಧಾ ವೆಂಬು ಅವರು ಎರಡನೇ ಸ್ಥಾನದಲ್ಲಿ ಇದ್ದಾರೆ. ಅವರ ಸಂಪತ್ತು ಮೌಲ್ಯ ₹32,800 ಕೋಟಿ ಇದೆ ಎಂದು ಹುರೂನ್ ವರದಿ ತಿಳಿಸಿದೆ.

ಚಿನ್ನದ ದರ ₹450 ಹೆಚ್ಚಳ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10ಗ್ರಾಂಗೆ ₹450ರಷ್ಟು ಹೆಚ್ಚಾಗಿ ₹59,350ಕ್ಕೆ ತಲುಪಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹815ರಷ್ಟು ಏರಿಕೆ ಕಂಡು ₹69,800ರಂತೆ ಮಾರಾಟವಾಯಿತು.

ಮಾರುಕಟ್ಟೆಯ ನಿರೀಕ್ಷೆಯಂತೆಯೇ ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಬಡ್ಡಿದರವನ್ನು ಶೇ 0.25ರಷ್ಟು ಹೆಚ್ಚಳ ಮಾಡಿದೆ. ಈ ಬೆಳವಣಿಗೆಯು ಚಿನ್ನದ ದರ ಹೆಚ್ಚಳಕ್ಕೆ ಕಾರಣವಾಯಿತು. ದೇಶದ ಹಣಕಾಸು ವಲಯದಲ್ಲಿನ ಈಚಿನ ಬಿಕ್ಕಟ್ಟನ್ನು ಗಮನದಲ್ಲಿ ಇಟ್ಟುಕೊಂಡು ಭವಿಷ್ಯದಲ್ಲಿ ಬಡ್ಡಿದರ ಹೆಚ್ಚಿಸುವ ಪ್ರವೃತ್ತಿಗೆ ತುಸು ವಿರಾಮ ನೀಡುವ ಸೂಚನೆಯನ್ನು ಅದು ನೀಡಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಹಿರಿಯ ಉಪಾಧ್ಯಕ್ಷ ನವ್‌ನೀತ್ ದಮಾನಿ ಹೇಳಿದ್ದಾರೆ.

ಇನ್ಫೊಸಿಸ್: ಕಿರಣ್ ಮಜುಂದಾರ್ ಶಾ ನಿವೃತ್ತಿ



ಮಜುಂದಾರ್ ಶಾ

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯ ಸ್ವತಂತ್ರ ನಿರ್ದೇಶಕ ಸ್ಥಾನದಿಂದ ಕಿರಣ್ ಮಜುಂದಾರ್ ಶಾ ಅವರು ಬುಧವಾರ ನಿವೃತ್ತ ಆಗಿದ್ದು, ಅವರ ಸ್ಥಾನಕ್ಕೆ ಡಿ. ಸುಂದರಂ ಅವರನ್ನು ನೇಮಿಸಲಾಗಿದೆ.

ಶಾ ಅವರ ಅವಧಿಯು ಬುಧವಾರ ಅಂತ್ಯವಾಗಿದೆ. ಹೀಗಾಗಿ ಅವರ ಸ್ಥಾನಕ್ಕೆ ಸ್ವತಂತ್ರ ನಿರ್ದೇಶಕರನ್ನಾಗಿ ಡಿ. ಸುಂದರಂ ಅವರನ್ನು ಗುರುವಾರದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

23-3-2023

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (---)
ಒಂದು ವಾರದ ಡೆಲಿವರಿ	1695 (---)
ಸೋಯಾ ಕಚ್ಚಾ	942 (---)
ಪಾಮ್ ವಾರದ ಡೆಲಿವರಿ	928 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	935 (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,950 (---)
ಬೆಳ್ಳಿ ಕೆ.ಜಿ 69,200 (---)

ಸುಧಾ, ಮಯೂರ ಓದಿ

ತೆರಿಗೆದಾರರಿಗೆ ಹೊಸ ಆ್ಯಪ್

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು 'AIS for Taxpayers' ಎನ್ನುವ ಮೊಬೈಲ್ ಆ್ಯಪ್ ಬಿಡುಗಡೆ ಮಾಡಿದೆ. ಟಿಡಿಎಸ್/ಟಿಸಿಎಸ್, ಬಡ್ಡಿ, ಲಾಭಾಂಶಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಈ ಆ್ಯಪ್ ಮೂಲಕ ತೆರಿಗೆ ಪಾವತಿದಾರರು ಪಡೆದುಕೊಳ್ಳಬಹುದು ಎಂದು ಇಲಾಖೆಯು ತಿಳಿಸಿದೆ.

ಆದಾಯ ತೆರಿಗೆ ಇಲಾಖೆಯು ಉಚಿತವಾಗಿ ಈ ಮೊಬೈಲ್ ಆ್ಯಪ್ ನೀಡಿದ್ದು, ಗೂಗಲ್ ಪ್ಲೇ ಮತ್ತು ಆ್ಯಪ್ ಸ್ಟೋರ್‌ನಲ್ಲಿ ಲಭ್ಯವಿದೆ.

ಬಳಕೆ ಹೇಗೆ: ಆ್ಯಪ್ ಡೌನ್‌ಲೊಡ್ ಮಾಡಿಕೊಂಡ ಬಳಿಕ ಪ್ಯಾನ್ ಮತ್ತು ಜನ್ಮದಿನಾಂಕ ನಮೂದಿಸಬೇಕು. ಮುಂದಿನ ಹಂತದಲ್ಲಿ ಇ–ಫೈಲಿಂಗ್ ಪೋರ್ಟಲ್‌ಗೆ ನೀಡಿರುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ನೀಡಬೇಕು. ಮೊಬೈಲ್ ಮತ್ತು ಇ–ಮೇಲ್‌ಗೆ ಬರುವ 'ಒಟಿಪಿ' ಯನ್ನು ನೀಡಿದ ಬಳಿಕ 4 ಸಂಖ್ಯೆಗಳ ಎಂಪಿನ್ ನೀಡಿದರೆ ಆ್ಯಪ್ ಬಳಕೆಗೆ ಲಭ್ಯವಾಗುತ್ತದೆ.

ಮಾರುತಿ, ಹೀರೊಮೊಟೊ, ಹುಂಡೈನಿಂದ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ, ಹೀರೊಮೊಟೊ ಕಾರ್ಪ್ ಮತ್ತು ಹೋಂಡಾ ಕಂಪನಿಗಳು ಏಪ್ರಿಲ್‌ನಿಂದ ಬೆಲೆ ಏರಿಕೆ ಮಾಡುವುದಾಗಿ ಹೇಳಿವೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದು ಹಾಗೂ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಏಪ್ರಿಲ್‌ನಿಂದ ಕಠಿಣ ನಿಯಮಗಳು ಜಾರಿಗೆ ಬರುತ್ತಿರುವುದರಿಂದ ಈ ನಿರ್ಧಾರಕ್ಕೆ ಬಂದಿರುವುದಾಗಿ ಕಂಪನಿಗಳು ತಿಳಿಸಿವೆ.

ಮಾರುತಿ ಸುಜುಕಿ ಕಂಪನಿಯು ಏಪ್ರಿಲ್ 1ರಿಂದ ಬೆಲೆ ಹೆಚ್ಚಳಕ್ಕೆ ನಿರ್ಧರಿಸಿದೆ. ಆದರೆ ಬೆಲೆ ಏರಿಕೆಯ ಪ್ರಮಾಣವನ್ನು ಅದು ತಿಳಿಸಿಲ್ಲ.

ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯು ತನ್ನ ಅಮೇಜ್ ಕಾರಿನ ಬೆಲೆಯನ್ನು ₹12 ಸಾವಿರದವರೆಗೆ ಹೆಚ್ಚಳ ಮಾಡುವುದಾಗಿ ತಿಳಿಸಿದೆ.

ಹೀರೊ ಮೊಟೊ ಕಾರ್ಪ್ ಕಂಪನಿ ಸಹ ಏಪ್ರಿಲ್ 1ರಿಂದ ಶೇ 2ರವರೆಗೆ ಬೆಲೆ ಏರಿಕೆ ಮಾಡುವುದಾಗಿ ಹೇಳಿದೆ. ಮಾದರಿಯಿಂದ ಮಾದರಿಗೆ ಬೆಲೆಯಲ್ಲಿ ವ್ಯತ್ಯಾಸ ಆಗಲಿದೆ ಎಂದು ಕಂಪನಿಯು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಕೆಂಪುಗೋಟು	22899-36309	**ಶಿರಸಿ**	
ಕೋಕ	12500-25000	ರಾಶಿ	39899-45099	ಬೆಟ್ಟೆ	32919-42299
ಹೊಸತು	22500-40000	ಸಿಪ್ಪೆಗೋಟು	5099-19009	ಬಿಳಿಗೋಟು	24399-33699
ಹಳತು	48000-54500	**ಶಿವಮೊಗ್ಗ**		ಚಾಲಿ	33010-36131
ಕುಮಟಾ		ಬೆಟ್ಟೆ	45169-49569	ಕೆಂಪುಗೋಟು	
ಚಿಪ್ಪು	23219-30669	ಗೊರಬಲು	18800-31609		24699-30689
ಕೋಕ	16060-28719	ರಾಶಿ	31359-44862	ರಾಶಿ	42018-44389
ಹಳೆಚಾಲಿ	36069-39069	ಸರಕು	50219-80210	**ಯಲ್ಲಾಪುರ**	
ಹೊಸಚಾಲಿ	33519-35759	**ಸಿದ್ದಾಪುರ**		ಬಿಳಿಗೋಟು	22312-32212
ಪುತ್ತೂರು		ಬಿಳಿಗೋಟು	27699-30608	ಚಾಲಿ	33719-37001
ಕೋಕ	11000-26000	ಚಾಲಿ	34299-35599	ಕೋಕ	15601-28999
ಹೊಸತು	32000-38300	ಕೋಕ	25699-30699	ಕೆಂಪುಗೋಟು	26899-34519
ಸಾಗರ		ಹೊಸಚಾಲಿ	32699-35099	ರಾಶಿ	40499-50200
ಬಿಳಿಗೋಟು	18989-31599	ಕೆಂಪುಗೋಟು	27089-33299	ತಟ್ಟಿಬೆಟ್ಟೆ	37040-43150
ಚಾಲಿ	33399-35709	ರಾಶಿ	40009-44559	ಆಪಿ	52800-52800
ಕೋಕ	14619-30299	ತಟ್ಟಿಬೆಟ್ಟೆ	37869-39949		

'ಪುಟಿನ್ ಬಂಧಿಸಿದರೆ ಯುದ್ಧ ಸಾರಿದಂತೆ'

ಮಾಸ್ಕೊ (ಎಎಫ್‌ಪಿ): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವಿರುದ್ಧ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯ (ಐಸಿಸಿ) ಬಂಧನ ವಾರಂಟ್ ಹೊರಡಿಸಿದ ಹಿನ್ನೆಲೆಯಲ್ಲಿ ಅವರನ್ನು ವಿದೇಶದಲ್ಲಿ ಬಂಧಿಸುವ ಪ್ರಯತ್ನಗಳನ್ನು ತನ್ನ ವಿರುದ್ಧ 'ಯುದ್ಧ ಘೋಷಣೆ' ಮಾಡಿದಂತೆ ಎಂಬುದಾಗಿ ಭಾವಿಸಲಾಗುತ್ತದೆ ಎಂದು ರಷ್ಯಾ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್ವೆಡೇವ್ ಎಚ್ಚರಿಸಿದ್ದಾರೆ.

ಲಂಡನ್: 'ಹೈಕಮಿಷನ್ ಕಚೇರಿ ಮೇಲಿನ ದಾಳಿಗೆ ತಕ್ಕ ಪ್ರತಿಕ್ರಿಯೆ'

ಲಂಡನ್ (ಪಿಟಿಐ): ಖಾಲಿಸ್ತಾನ ಪರ ಪ್ರತ್ಯೇಕತಾವಾದಿಗಳು ಇಲ್ಲಿನ ಭಾರತೀಯ ಹೈಕಮಿಷನ್ ಎದುರಿನ ತ್ರಿವರ್ಣ ಧ್ವಜವನ್ನು ಕೆಳಗಿಳಿಸಿ, ಕಚೇರಿ ಮೇಲೆ ನಡೆಸಿರುವ ದಾಳಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡುತ್ತೇವೆ ಎಂದು ಬ್ರಿಟನ್ ವಿದೇಶಾಂಗ ಸಚಿವ ಜೇಮ್ಸ್ ಕ್ಲೆವರ್ಲಿ ಹೇಳಿದ್ದಾರೆ.

ಕಚೇರಿಗೆ ಅಗತ್ಯ ಭದ್ರತೆಯನ್ನು ನೀಡುವ ಕುರಿತು ಪರಿಶೀಲಿಸುತ್ತಿದ್ದೇವೆ. ಈ ಬಗ್ಗೆ ಪೊಲೀಸರ ಜೊತೆ ಚರ್ಚೆ ನಡೆಸಿದ್ದೇವೆ ಎಂದೂ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.


'ಕಚೇರಿ ಮೇಲಿನ ದಾಳಿಯು ಸ್ವೀಕಾರಾರ್ಹವಲ್ಲ. ಈ ಕುರಿತ ನಮ್ಮ ನಿಲುವನ್ನು ಭಾರತದ ರಾಯಭಾರಿ ವಿಕ್ರಂ ದೊರೈಸ್ವಾಮಿ ಅವರಿಗೆ ಸ್ಪಷ್ಟಪಡಿಸಿದ್ದೇವೆ' ಎಂದೂ ವಿವರಿಸಿದ್ದಾರೆ.

'ದಾಳಿಯ ಕುರಿತು ತನಿಖೆ ನಡೆಯುತ್ತಿದೆ. ನಾವು ಭಾರತ ಸರ್ಕಾರದ ಜೊತೆ ನಿಕಟ ಸಂಪರ್ಕದಲ್ಲಿದ್ದೇವೆ' ಎಂದಿದ್ದಾರೆ.

'ಭಾರತದ ಹೈಕಮಿಷನ್ ಕಚೇರಿ ಸೇರಿದಂತೆ ಬ್ರಿಟನ್‌ನಲ್ಲಿರುವ ವಿವಿಧ ದೇಶಗಳ ಹೈಕಮಿಷನ್ ಕಚೇರಿಗಳಿಗೆ ಹೆಚ್ಚಿನ ಭದ್ರತೆ ನೀಡುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುತ್ತೇವೆ' ಎಂದು ಕ್ಲೆವರ್ಲಿ ಹೇಳಿದ್ದಾರೆ. 'ಭಾರತ, ಬ್ರಿಟನ್ ನಡುವಿನ ಸಂಬಂಧವು ಇನ್ನಷ್ಟು ಪ್ರವರ್ಧಮಾನಕ್ಕೆ ಬರುತ್ತಿದೆ. ಹೊಸ ಮಾರುಕಟ್ಟೆ, ಉದ್ಯೋಗ ಸೃಷ್ಟಿಗಾಗಿ ಉಭಯ ದೇಶಗಳು ಜೊತೆಯಾಗಿ ಕೆಲಸ ಮಾಡುತ್ತಿವೆ. ಭವಿಷ್ಯದಲ್ಲಿ ಎರಡು ದೇಶಗಳ ನಡುವಿನ ನಂಟು ಇನ್ನಷ್ಟು ಗಟ್ಟಿಗೊಳ್ಳಬೇಕೆಂದು ನಾವು ಬಯಸುತ್ತೇವೆ' ಎಂದೂ ತಿಳಿಸಿದ್ದಾರೆ.

ಬ್ರಿಟನ್‌ನಲ್ಲಿರುವ ಹೈಕಮಿಷನ್ ಕಚೇರಿಗೆ ಸೂಕ್ತ ಭದ್ರತೆ ಒದಗಿಸದಿರುವುದಕ್ಕೆ ಭಾರತವು ತೀವ್ರ ಪ್ರತಿಭಟನೆ ದಾಖಲಿಸಿದ ಬಳಿಕ ಕ್ಲೆವರ್ಲಿ ಅವರ ಈ ಹೇಳಿಕೆ ಹೊರಬಿದ್ದಿದೆ. ಖಾಲಿಸ್ತಾನ ಪರವಾಗಿ ಬುಧವಾರ ಮತ್ತೆ ಪ್ರತಿಭಟನೆ ನಡೆಸಲು ಯತ್ನಿಸಿದವರನ್ನು ಪೊಲೀಸರು ಹೈಕಮಿಷನ್ ಕಚೇರಿಯ ಸಮೀಪ ತಡೆದರು. ಕಚೇರಿ ಆವರಣಕ್ಕೆ ಪ್ರತಿಭಟನಕಾರರು ಪ್ರವೇಶಿಸದಂತೆ ಬ್ಯಾರಿಕೇಡ್‌ಗಳನ್ನು ಸ್ಥಾಪಿಸಲಾಗಿತ್ತು.

ಖಾಲಿಸ್ತಾನ ಧ್ವಜ ಹಿಡಿದಿದ್ದ ಎರಡು ಸಾವಿರಕ್ಕೂ ಹೆಚ್ಚು ಮಂದಿ ಈಚೆಗೆ ಭಾರತೀಯ ಹೈಕಮಿಷನ್ ಕಚೇರಿ ಎದುರಿನ ಧ್ವಜವನ್ನು ಕೆಳಗಿಳಿಸಿ ಪ್ರತಿಭಟನೆ ನಡೆಸಿದ್ದರು. ಬಳಿಕ ಹೈಕಮಿಷನ್ ಅಧಿಕಾರಿಗಳು ಕಚೇರಿ ಮುಂಭಾಗದಲ್ಲಿ ಬೃಹತ್ ತ್ರಿವರ್ಣಧ್ವಜ ಹಾರಿಸಿದ್ದರು.



ವಿವಾದಿತ ಪಿಂಚಣಿ ನೀತಿಯನ್ನು ಮತಕ್ಕೆ ಹಾಕದೇ ಫ್ರಾನ್ಸ್ ಸಂಸತ್ತಿನಲ್ಲಿ ಬುಧವಾರ ಅಂಗೀಕಾರ ಮಾಡಿದ್ದನ್ನು ವಿರೋಧಿಸಿ ಪ್ಯಾರಿಸ್‌ನ ಡೆ ಲ ಬ್ಯಾಸ್ಟೈಲ್ ಸ್ಕ್ವೇರ್‌ನಲ್ಲಿ ಸಾರ್ವಜನಿಕರು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಮಿಲಿಟರಿ ನೆರವು ಹೆಚ್ಚಳ ಐರೋಪ್ಯ ಒಕ್ಕೂಟ ನಿರ್ಧಾರ

ಬ್ರುಸೆಲ್ಸ್ (ಎಪಿ): ರಷ್ಯಾ ವಿರುದ್ಧ ಹೋರಾಡಲು ಉಕ್ರೇನ್‌ಗೆ ಮುಂದಿನ ಒಂದು ವರ್ಷದ ಒಳಗೆ 10 ಲಕ್ಷ ಫಿರಂಗಿ ಗುಂಡುಗಳ ಪೂರೈಕೆ ಸೇರಿದಂತೆ ಮಿಲಿಟರಿ ನೆರವನ್ನು ಹೆಚ್ಚಿಸಲು ಐರೋಪ್ಯ ಒಕ್ಕೂಟದ ನಾಯಕರು ನಿರ್ಧರಿಸಿದ್ದಾರೆ.

'ಐರೋಪ್ಯ ದೇಶಗಳೆಲ್ಲವೂ ಸೇರಿ ತಮ್ಮ ಬಳಿ ಇರುವ ಶಸ್ತ್ರಾಸ್ತ್ರಗಳನ್ನು ಆದಷ್ಟು ಬೇಗ ಉಕ್ರೇನ್‌ಗೆ ನೀಡುವ ಯೋಜನೆ ರೂಪಿಸಲು ಒಕ್ಕೂಟದ ವಿದೇಶಾಂಗ ಹಾಗೂ ರಕ್ಷಣಾ ಸಚಿವರು ವಾರದ ಆರಂಭದಲ್ಲಿ ಸಭೆ ಸೇರಿ ನಿರ್ಧರಿಸಿದ್ದರು. ಒಕ್ಕೂಟದ ನಾಯಕರು ಗುರುವಾರ ಇಲ್ಲಿ ಸಭೆ ಸೇರಿ ಈ ಯೋಜನೆಗೆ ಒಪ್ಪಿಗೆ ನೀಡಿದ್ದಾರೆ' ಎಂದು ಒಕ್ಕೂಟದ ವಕ್ತಾರರು ಮಾಹಿತಿ ನೀಡಿದರು.

27 ದೇಶಗಳ ಪೈಕಿ ಹಂಗೆರಿಯು ಉಕ್ರೇನ್‌ಗೆ ಶಸ್ತ್ರಾಸ್ತ್ರ ನೀಡಲು ನಿರಾಕರಿಸಿದೆ. ರಷ್ಯಾ ವಿರುದ್ಧ ಹೋರಾಡಲು ಉಕ್ರೇನ್ ಬಳಿ ಸಾಕಷ್ಟು ಶಸ್ತ್ರಾಸ್ತ್ರ ಬಾಕಿ ಉಳಿದಿಲ್ಲ. ಆದ್ದರಿಂದ ಐರೋಪ್ಯ ಒಕ್ಕೂಟ ಈ ಯೋಜನೆಯನ್ನು ರೂಪಿಸಿದೆ.

ಕೆರ್ಸಾನ್‌ಗೆ ಅಧ್ಯಕ್ಷ ಭೇಟಿ: (ಕೀವ್ ವರದಿ): ರಷ್ಯಾ ದಾಳಿಯಿಂದ ತೀವ್ರ ಹಾನಿಗೆ ಒಳಗಾಗಿರುವ ಉಕ್ರೇನ್‌ನ ದಕ್ಷಿಣ ಭಾಗದಲ್ಲಿರುವ ಕೆರ್ಸಾನ್ ಪ್ರದೇಶಕ್ಕೆ ಎರಡು ದಿನದಲ್ಲಿ ಮೂರನೇ ಬಾರಿಗೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಗುರುವಾರ ಭೇಟಿ ನೀಡಿದರು.

ಪ್ರೀಕ್ವಾರ್ಟರ್ ಫೈನಲ್‌ಗೆ ಸಿಂಧು

ಸ್ವಿಸ್ ಓಪನ್ ಬ್ಯಾಡ್ಮಿಂಟನ್: ಪ್ರಣಯ್, ಕಿದಂಬಿ ಶ್ರೀಕಾಂತ್‌ಗೆ ಸೋಲು

ಬಾಸೆಲ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತದ ಪಿ.ವಿ.ಸಿಂಧು ಅವರು ಇಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಕೆ.ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ಸೋತು ಹೊರಬಿದ್ದರು.

ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ, ನಾಲ್ಕನೇ ಶ್ರೇಯಾಂಕದ ಸಿಂಧು 21-9, 21-16ರಿಂದ ಸ್ವಿಟ್ಜರ್ಲೆಂಡ್‌ನ ಜಂಜೀರಾ ಸ್ಟೇಡಲ್‌ಮನ್ ಅವರನ್ನು ಪರಾಭವಗೊಳಿಸಿದರು. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು, ಈ ಸೆಣಸಾಟದಲ್ಲಿ ಎದುರಾಳಿಯ ವಿರುದ್ಧ ಸಂಪೂರ್ಣ ಪಾರಮ್ಯ ಮೆರೆದರು.

16ರ ಘಟ್ಟದ ಪಂದ್ಯದಲ್ಲಿ ಸಿಂಧು ಅವರಿಗೆ ಇಂಡೊನೇಷ್ಯಾದ 20 ವರ್ಷದ ಆಟಗಾರ್ತಿ ಪುತ್ರಿ ಕುಸುಮಾ ವರ್ದಾನಿ ಸವಾಲು ಎದುರಾಗಲಿದೆ. ಕುಸುಮಾ ಅವರು 2022ರ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಇಂಡೊನೇಷ್ಯಾ ತಂಡದಲ್ಲಿದ್ದರು.

ಪ್ರಣಯ್‌ಗೆ ಸೋಲು: ಪುರುಷರ ಸಿಂಗಲ್ಸ್ ವಿಭಾಗದ 16ರ ಘಟ್ಟದ ಪಂದ್ಯದಲ್ಲಿ ಪ್ರಣಯ್ 8–21, 8–21 ರಲ್ಲಿ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಕೈಯಲ್ಲಿ ಪರಾಭವಗೊಂಡರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಭಾರತದ ಆಟಗಾರ ಎರಡೂ ಗೇಮ್‌ಗಳಲ್ಲಿ ನೀರಸ ಪ್ರದರ್ಶನ ನೀಡಿದರು. ಪ್ರಣಯ್ ಅವರು ಮೊದಲ ಸುತ್ತಿನಲ್ಲಿ 21-17 19-21 21-17ರಿಂದ ಚೀನಾದ ಶಿ ಯು ಕಿ ಎದುರು ಗೆದ್ದಿದ್ದರು.

ಇನ್ನೊಂದು ಪ್ರೀಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶ್ರೀಕಾಂತ್ 20–22, 17–21 ರಲ್ಲಿ ಲೀ ಚೆಯುಕ್ ಯಿಯು ಎದುರು ಸೋತರು. ಈ ಪಂದ್ಯ 40 ನಿಮಿಷ ನಡೆಯಿತು. ನಿರ್ಣಾಯಕ ಘಟ್ಟದಲ್ಲಿ ಸ್ವಯಂಕೃತ ತಪ್ಪುಗಳನ್ನು ಮಾಡಿದ್ದು ಶ್ರೀಕಾಂತ್‌ಗೆ ಮುಳುವಾಗಿ ಪರಿಣಮಿಸಿತು.

ಕರ್ನಾಟಕದ ಮಿಥುನ್ ಮಂಜುನಾಥ್ 19–21, 10–21 ರಲ್ಲಿ ಚೀನಾ ತೈಪೆಯ ಚಿಯಾ ಹಾವೊ ಲಿ ಎದುರು ಪರಾಭವಗೊಂಡರು.



ಪಿ.ವಿ.ಸಿಂಧು

‘ಮಹಿಳಾ ಅಥ್ಲೆಟಿಕ್ಸ್: ಲಿಂಗತ್ವ ಅಲ್ಪಸಂಖ್ಯಾತರಿಗೆ ನಿರ್ಬಂಧ’

ಪ್ಯಾರಿಸ್ (ಎಎಫ್‌ಪಿ): ಮಹಿಳೆಯರಿಗಾಗಿ ಇರುವ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೆಟಿಕ್ ಕೂಟಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತ (ಮಹಿಳೆ) ಅಥ್ಲೀಟ್‌ಗಳಿಗೆ ಸ್ಪರ್ಧಿಸಲು ಅವಕಾಶ ನೀಡುವುದಿಲ್ಲ ಎಂದು ವಿಶ್ವ ಅಥ್ಲೆಟಿಕ್ಸ್ ಅಧ್ಯಕ್ಷ ಸೆಬಾಸ್ಟಿಯನ್ ಕೋ ಗುರುವಾರ ತಿಳಿಸಿದ್ದಾರೆ.

ಪುರುಷ ಹಾರ್ಮೋನ್ ಪ್ರಮಾಣ ಹೆಚ್ಚು ಇರುವ ಅಥ್ಲೀಟ್‌ಗಳು ಮಾರ್ಚ್ 31ರಿಂದ ವಿಶ್ವ ರ‍್ಯಾಂಕಿಂಗ್ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಇಲ್ಲ ಎಂದು ವಿಶ್ವ ಅಥ್ಲೆಟಿಕ್ಸ್ ಸಭೆಯ ಬಳಿಕ ಕೋ ಹೇಳಿದ್ದಾರೆ.

‘40 ರಾಷ್ಟ್ರೀಯ ಫೆಡರೇಷನ್‌ಗಳ ಪ್ರತಿನಿಧಿಗಳು, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮತ್ತು ಲಿಂಗತ್ವ ಅಲ್ಪಸಂಖ್ಯಾತರೊಂದಿಗೆ ಈ ಕುರಿತು ಸಮಾಲೋಚನೆ ನಡೆಸಲಾಗಿದೆ. ಅವರಲ್ಲಿ ಬಹುತೇಕರ ಅಭಿಪ್ರಾಯ ಲೈಂಗಿಕ ಅಲ್ಪಸಂಖ್ಯಾತರು ಮಹಿಳಾ ಕೂಟಗಳಲ್ಲಿ ಸ್ಪರ್ಧಿಸಬಾರದು ಎಂಬುದಾಗಿದೆ. ಕ್ರೀಡೆಯ ಹಿತಾಸಕ್ತಿಯ ದೃಷ್ಟಿಯಿಂದ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ‘ ಎಂದು ಅವರು ಹೇಳಿದ್ದಾರೆ.

ಕೊಡವ ಕೌಟುಂಬಿಕ ಹಾಕಿ ಟೂರ್ನಿ

ಬೊಟ್ಟೋಳಂಡ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಬೊಟ್ಟೋಳಂಡ ತಂಡದವರು ಕೊಡವ ಕೌಟುಂಬಿಕ ಹಾಕಿ ಉತ್ಸವದ ಟೂರ್ನಿಯಲ್ಲಿ ಗುರುವಾರ ಗೆಲುವು ಸಾಧಿಸಿದರು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೊಟ್ಟೋಳಂಡವು 6–0 ಗೋಲುಗಳ ಬಲದಿಂದ ಮಂದನೆರವಂಡ ತಂಡದವರನ್ನು ಮಣಿಸಿತು.

ಮಂಡೇಟಿರ ತಂಡವು 5-0ರಲ್ಲಿ ನಡಿಕೇರಿಯಂಡ ವಿರುದ್ಧ ಜಯಿಸಿದರೆ, ಮಾಚಂಗಡ ತಂಡವು 2-1ರಲ್ಲಿ ನಾಯಕಂಡ ತಂಡವನ್ನು ಸೋಲಿಸಿತು. ಅಚ್ಚಪಂಡ 3-2 ಅಂತರದಿಂದ ಮುದ್ದಿಯಂಡ ತಂಡದ ವಿರುದ್ಧ ರೋಚಕ ಗೆಲುವು ಪಡೆಯಿತು. ಕನ್ನಂಡ ತಂಡದವರು 4-0ರಿಂದ ಅಪ್ಪಾರಂಡ ತಂಡದವರ ಎದುರು ಗೆಲುವು ಪಡೆದರು. ಬಡ್ಡೀರ ತಂಡವು ದಾಸಂಡ ವಿರುದ್ಧ, ಕುಮ್ಮಡ ತಂಡವು ಚಂಗುಲಂಡ ವಿರುದ್ಧ, ಆಳಮೇಂಗಡ ತಂಡವು ಕುಂದ್ರಂಡ ತಂಡದ ಎದುರು, ಚೆಯ್ಯಂಡ ತಂಡವು ಬೊಟ್ಟಂಗಡ ತಂಡದ ಎದುರು, ಅಜ್ಜಮಾಡ ತಂಡವು ಬೊಳ್ಳುತಂಡ ಎದುರು, ಬೊಟ್ಟಂಗಡ ತಂಡವು ಚೆಯ್ಯಂಡ ಎದುರು, ಅಲ್ಲುಮಡ ತಂಡವು ಕೊಟ್ರಮಾಡ ವಿರುದ್ಧ ಜಯ ಸಾಧಿಸಿದವು.

ಅಪ್ಪಚ್ಚಿರ ತಂಡದವರು 3-0ರಿಂದ ಪಟ್ಟಚೆರುವಂಡ ಗೆಲುವು ಸಾಧಿಸಿದರೆ, ಬೊಳ್ಳಚೆಟ್ಟೀರ, ಅಜ್ಜಮಾಡ, ಕುಂಡ್ಯೋಳಂಡ, ಮತ್ತಂಡ, ಕರವಟ್ಟಿರ, ಕಾಳೆಂಗಡ, ಚೋಯಮಾಡಂಡ, ಚಂಗೇಟಿರ ತಂಡಗಳು ಮುನ್ನಡೆ ಸಾಧಿಸಿವೆ.

ಗಾಲ್ಫ್ ಟೂರ್ನಿ: ಅಗ್ರಸ್ಥಾನದಲ್ಲಿ ಮ್ಯಾನುಯೆಲ್

ಬೆಂಗಳೂರು: ಸ್ಪೇನ್‌ನ ಮ್ಯಾನುಯೆಲ್ ಎಲ್ವಿರಾ ಅವರು ಇಲ್ಲಿ ಆರಂಭವಾದ ಡಂಕನ್ ಟೇಲರ್ ಬ್ಲ್ಯಾಕ್ ಬುಲ್ ಚಾಲೆಂಜ್ ಗಾಲ್ಫ್ ಟೂರ್ನಿಯ ಮೊದಲ ಸುತ್ತಿನಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಕರ್ನಾಟಕ ಗಾಲ್ಫ್ ಸಂಸ್ಥೆ ಕೋರ್ಸ್‌ನಲ್ಲಿ ಗುರುವಾರ ನಡೆದ ಮೊದಲ ಸುತ್ತಿನ ಸ್ಪರ್ಧೆಯನ್ನು ಅವರು 63 ಸ್ಟ್ರೋಕ್‌ಗಳಲ್ಲಿ ಕೊನೆಗೊಳಿಸಿದರು. ವೇಲ್ಸ್‌ನ ಅಲಿವರ್ ಫರ್ (64) ಅವರು ಎರಡನೇ ಸ್ಥಾನದಲ್ಲಿದ್ದಾರೆ. ಕಣದಲ್ಲಿರುವ ಭಾರತದ ಆಟಗಾರರೂ ಮೊದಲ ದಿನ ಗಮನಾರ್ಹ ಪ್ರದರ್ಶನ ನೀಡಿದರು. ತಲಾ 67 ಸ್ಕೋರ್‌ಗಳೊಂದಿಗೆ ಅಮನ್ ರಾಜ್ ಮತ್ತು ಎಂ.ಧರ್ಮ ಅವರು ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್‌ನ ಆಶ್ಲೆ ಚೆಸ್ಟರ್ಸ್, ಸ್ಟೀವನ್ ಬ್ರೌನ್, ಇಟಲಿಯ ಸ್ಟೆಫಾನೊ ಮಝೋಲಿ, ಮಟೆಯೊ ಮನಸೆರೊ, ಸ್ವೀಡನ್‌ನ ಜೊಯೆಲ್ ಸೊಹೋಲ್ಮ್ ಮತ್ತು ಜರ್ಮನಿಯ ವೆಲ್ಟನ್ ಮೆಯೆರ್ ಅವರು ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ಆರ್.ಮಾರಿಮುತ್ತು, ಅಂಗದ್ ಚೀಮಾ, ಬೇಡಿ, ಸುಧೀರ್ ಶರ್ಮಾ ಅವರು ಜಂಟಿ 12ನೇ ಸ್ಥಾನ ಹೊಂದಿದ್ದಾರೆ.

ರಾಷ್ಟ್ರಮಟ್ಟದ ಕಬಡ್ಡಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಸವಣೂರು ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಇದೇ 24ರಿಂದ ಮಾರ್ಚ್ 26ರವರೆಗೆ ರಾಷ್ಟ್ರಮಟ್ಟದ ಆಹ್ವಾನಿತ ‘ಸವಣೂರು ಕಬಡ್ಡಿ ಉತ್ಸವ–2023’ ಆಯೋಜಿಸಲಾಗಿದೆ.

ಪುರುಷರ ಮತ್ತು ಮಹಿಳೆಯರ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಟೂರ್ನಿ ಇದಾಗಿದೆ. ಹಾವೇರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಬಸವರಾಜ ಎಸ್. ಬೊಮ್ಮಾಯಿ ಅಭಿಮಾನಿ ಬಳಗವು ಜಂಟಿಯಾಗಿ ಟೂರ್ನಿ ಏರ್ಪಡಿಸಿದೆ. ಪುರುಷರ ವಿಭಾಗದ ಚಾಂಪಿ ಯನ್ನರಿಗೆ ₹5 ಲಕ್ಷ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದವರಿಗೆ ತಲಾ ₹3 ಲಕ್ಷ ಹಾಗೂ ₹2 ಲಕ್ಷ ನಗದು ಬಹುಮಾನ ದೊರೆಯಲಿದೆ. ಮಹಿಳೆಯರ ವಿಭಾಗದಲ್ಲಿ ಪ್ರಥಮ ₹3 ಲಕ್ಷ, ದ್ವಿತೀಯ ₹2 ಲಕ್ಷ ಹಾಗೂ ತೃತೀಯ ₹1.50 ಲಕ್ಷ ನಗದು ಬಹುಮಾನ ಲಭಿಸಲಿದೆ.

ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಬೆಸ್ಟ್ ರೈಡರ್‌ಗೆ ₹25 ಸಾವಿರ, ಬೆಸ್ಟ್ ಕ್ಯಾಚರ್‌ಗೆ ₹25 ಸಾವಿರ, ಬೆಸ್ಟ್ ಆಲ್ ರೌಂಡರ್‌ಗೆ ₹35 ಸಾವಿರ ನಗದು ಬಹುಮಾನ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಮಾರ್ಚ್ 24ರಂದು ಸಂಜೆ 5.30ಕ್ಕೆ ಟೂರ್ನಿ ಆರಂಭವಾಗಲಿದೆ. ಮಾರ್ಚ್ 25 ಮತ್ತು 26ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 12.30ರವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 10ರವರೆಗೆ ಪಂದ್ಯಗಳು ನಡೆಯಲಿವೆ.

‘ಪ್ರೊ ಕಬಡ್ಡಿ ಮತ್ತು ಅಂತರರಾಷ್ಟ್ರೀಯ ಕಬಡ್ಡಿ ಆಟಗಾರರು ಭಾಗವಹಿಸಲಿದ್ದಾರೆ. ಸ್ಪರ್ಧೆಗೆ ಹಾವೇರಿ ಜಿಲ್ಲಾಡಳಿತ ಮತ್ತು ಕ್ರೀಡಾ ಇಲಾಖೆಯಿಂದ ಎಲ್ಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ’ ಎಂದು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಲತಾ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಏಕದಿನ ವಿಶ್ವಕಪ್‌ಗೆ ಅ.5ರಂದು ಚಾಲನೆ

ನವದೆಹಲಿ (ಪಿಟಿಐ): ಭಾರತದ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಟೂರ್ನಿ ಅ.5 ರಂದು ಆರಂಭವಾಗಲಿದೆ ಎಂದು ಇಎಸ್‌ಪಿಎನ್‌ಕ್ರಿಕ್‌ಇನ್ಫೊ ವೆಬ್‌ಸೈಟ್ ವರದಿ ಮಾಡಿದೆ.

ಫೈನಲ್ ಪಂದ್ಯ ನ.19 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ವರದಿ ತಿಳಿಸಿದೆ. ಪಂದ್ಯದ ತಾಣಗಳು ಮತ್ತು ವೇಳಾಪಟ್ಟಿಯನ್ನು ಬಿಸಿಸಿಐ ಇನ್ನೂ ಅಂತಿಮಗೊಳಿಸಿಲ್ಲ.

ಅಹಮದಾಬಾದ್ ಹೊರತುಪಡಿಸಿ ಪಂದ್ಯಗಳ ಆಯೋಜನೆಗೆ ಒಟ್ಟು 11 ತಾಣಗಳನ್ನು ಬಿಸಿಸಿಐ ಆಯ್ಕೆ ಮಾಡಿದೆ. ಬೆಂಗಳೂರು, ಚೆನ್ನೈ, ದೆಹಲಿ, ಧರ್ಮಶಾಲಾ, ಗುವಾಹಟಿ, ಹೈದರಾಬಾದ್, ಕೋಲ್ಕತ್ತ, ಲಖನೌ, ಇಂದೋರ್, ರಾಜ್‌ಕೋಟ್ ಮತ್ತು ಮುಂಬೈನಲ್ಲಿ ಪಂದ್ಯಗಳು ನಡೆಯಲಿವೆ.

ಮೊಹಾಲಿ ಮತ್ತು ನಾಗಪುರದ ಹೆಸರು ಪಟ್ಟಿಯಲ್ಲಿಲ್ಲ. ಆಸ್ಟ್ರೇಲಿಯಾ ವಿರುದ್ಧ ಈಚೆಗೆ ನಡೆದ ಟೆಸ್ಟ್ ಪಂದ್ಯಗಳಿಗೆ ಈ ಎರಡು ತಾಣಗಳು ಆತಿಥ್ಯ ವಹಿಸಿದ್ದವು.

ಫೈನಲ್ ಹೊರತುಪಡಿಸಿ, ಇತರ ಯಾವುದೇ ಪಂದ್ಯಗಳಿಗೂ ಬಿಸಿಸಿಐ ನಿರ್ದಿಷ್ಟ ತಾಣವನ್ನು ಅಂತಿಮಗೊಳಿಸಿಲ್ಲ. ವಿಶ್ವಕಪ್ ಟೂರ್ನಿಯಲ್ಲಿ 10 ತಂಡಗಳು ಪಾಲ್ಗೊಳ್ಳಲಿದ್ದು, ನಾಕೌಟ್ ಹಣಾಹಣಿ ಸೇರಿದಂತೆ ಒಟ್ಟು 48 ಪಂದ್ಯಗಳು ನಡೆಯಲಿವೆ.

ಡಬ್ಲ್ಯುಪಿಎಲ್: ಮುಂಬೈ– ಯುಪಿ ಸೆಣಸು



ಹರ್ಮನ್‌ಪ್ರೀತ್

ನವಿ ಮುಂಬೈ: ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಟೂರ್ನಿಯ ಫೈನಲ್ ಮೇಲೆ ಕಣ್ಣಿಟ್ಟಿರುವ ಮುಂಬೈ ಇಂಡಿಯನ್ಸ್ ತಂಡ ಶುಕ್ರವಾರ ನಡೆಯಲಿರುವ ‘ಎಲಿಮಿನೇಟರ್’ ಪಂದ್ಯದಲ್ಲಿ ಯುಪಿ ವಾರಿಯರ್ಸ್ ತಂಡವನ್ನು ಎದುರಿಸಲಿದೆ.

ಗೆಲ್ಲುವ ತಂಡ ಫೈನಲ್ ಪ್ರವೇಶಿಸಲಿರುವುದರಿಂದ ಈ ಪಂದ್ಯ ಸೆಮಿಫೈನಲ್ ಎನಿಸಿಕೊಂಡಿದೆ. ಮಾರ್ಚ್ 26 ರಂದು ನಡೆಯಲಿರುವ ಫೈನಲ್‌ಗೆ ಡೆಲ್ಲಿ ಕ್ಯಾಪಿಟಲ್ಸ್ ತಂಡ ನೇರ ಅರ್ಹತೆ ಪಡೆದುಕೊಂಡಿತ್ತು. ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದ ಕಾರಣ ಮುಂಬೈ ತಂಡ ನೇರ ಅರ್ಹತೆಯ ಅವಕಾಶ ಕಳೆದುಕೊಂಡಿತ್ತು.

ಲೀಗ್ ಹಂತದಲ್ಲಿ ಇವೆರಡು ತಂಡಗಳ ನಡುವಣ ಮೊದಲ ಪಂದ್ಯವನ್ನು ಮುಂಬೈ ಜಯಿಸಿದ್ದರೆ, ಎರಡನೇ ಪಂದ್ಯ ಗೆದ್ದು ವಾರಿಯರ್ಸ್ ತಿರುಗೇಟು ನೀಡಿತ್ತು. ಆದ್ದರಿಂದ ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ಶುಕ್ರವಾರ ತುರುಸಿನ ಪೈಪೋಟಿ ನಡೆಯುವುದು ಖಚಿತ. ಮುಂಬೈ ತಂಡವು ನಾಯಕಿ ಹರ್ಮನ್‌ಪ್ರೀತ್ ಕೌರ್, ಹೆಯಿಲಿ ಮ್ಯಾಥ್ಯೂಸ್, ನಥಾಲಿ ಸಿವೆರ್ ಬ್ರಂಟ್ ಅವರನ್ನು ನೆಚ್ಚಿಕೊಂಡಿದೆ.

ಯುಪಿ ವಾರಿಯರ್ಸ್ ತಂಡದವರು ನಾಯಕಿ ಅಲಿಸಾ ಹೀಲಿ, ತಹಲಿ ಮೆಕ್‌ಗ್ರಾ ಮತ್ತು ಸೋಫಿ ಎಕ್ಲೆಲ್‌ಸ್ಟನ್ ಅವರಿಂದ ಉತ್ತಮ ಪ್ರದರ್ಶನ ನಿರೀಕ್ಷಿಸುತ್ತಿದೆ. ಗಾಯದ ಕಾರಣ ಕೊನೆಯ ಲೀಗ್ ಪಂದ್ಯದಲ್ಲಿ ಆಡದೇ ಇದ್ದ ಪ್ರಮುಖ ಆಟಗಾರ್ತಿ ಗ್ರೇಸ್ ಹ್ಯಾರಿಸ್ ಅವರು ಕಣಕ್ಕಿಳಿಯುವ ಸಾಧ್ಯತೆಯಿದೆ.

ಪಂದ್ಯ ಆರಂಭ: ಸಂಜೆ 7.30

ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್: ಲವ್ಲಿನಾ, ಸ್ವೀಟಿ ಮುನ್ನಡೆ

ಫೈನಲ್‌ಗೆ ನಿಖತ್, ನೀತು



ಎದುರಾಳಿಗೆ ಪಂಚ್ ಮಾಡಿದ ನಿಖತ್ ಜರೀನ್ (ಎಡ)– ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಎದುರಾಳಿಗಳ ವಿರುದ್ಧ ಪ್ರಾಬಲ್ಯ ಸಾಧಿಸಿದ ಭಾರತದ ನೀತು ಗಂಗಾಸ್ ಮತ್ತು ನಿಖತ್ ಜರೀನ್ ಅವರು ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫೈನಲ್ ತಲುಪಿದ್ದಾರೆ.

ಇಲ್ಲಿಯ ಕೆ.ಡಿ. ಜಾಧವ್ ಒಳಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 48 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ನೀತು ಸೆಮಿಫೈನಲ್ ಬೌಟ್‌ನಲ್ಲಿ 5–2ರಿಂದ ಕಜಕಸ್ತಾನದ ಅಲುವಾ ಬಲ್ಕಿಬೆಕೊವಾ ಅವರ ಸವಾಲು ಮೀರಿದರು.

ಜಿದ್ದಾಜಿದ್ದಿನ ಬೌಟ್‌ನ ಮೊದಲ ಸುತ್ತಿನಿಂದಲೇ ಇಬ್ಬರೂ ಬಾಕ್ಸರ್‌ಗಳು ತೀವ್ರ ಪೈಪೋಟಿ ನಡೆಸಿದರು. ಇದರಲ್ಲಿ ಕಜಕಸ್ತಾನದ ಬಾಕ್ಸರ್ ಪಾರಮ್ಯ ಮೆರೆದರು.

ಎರಡನೇ ಸುತ್ತಿನಲ್ಲಿ ನೀತು, ಹುಕ್ಸ್ ಮತ್ತು ಜಾಬ್ಸ್ ಪ್ರಯೋಗಿಸಿ ತಿರುಗೇಟು ನೀಡಿದರು. ಕೊನೆಯ ಮೂರು ನಿಮಿಷಗಳ ಪೈಪೋಟಿಯಲ್ಲಿ ಭಾರತದ ಬಾಕ್ಸರ್ ಮೇಲುಗೈ ಸಾಧಿಸಿದರು. ಬೌಟ್ ಮರುಪರಿಶೀಲನೆಯ ಬಳಿಕ ನೀತು ವಿಜಯವನ್ನು ಪ್ರಕಟಿಸಲಾಯಿತು.

ಹಾಲಿ ವಿಶ್ವ ಚಾಂಪಿಯನ್ ಆಗಿರುವ ಜರೀನ್ ಅವರು 50 ಕೆಜಿ ವಿಭಾಗದ ನಾಲ್ಕರ ಘಟ್ಟದ ಬೌಟ್‌ನಲ್ಲಿ 5–0ಯಿಂದ ರಿಯೊ ಒಲಿಂಪಿಕ್ಸ್ ಕಂಚು ವಿಜೇತೆ, ಕೊಲಂಬಿಯಾದ ಇನ್‌ಗ್ರಿಟ್ ವೆಲೆನ್ಸಿಯಾ ಅವರನ್ನು ಪರಾಭವಗೊಳಿಸಿದರು.

ವೇಗ ಮತ್ತು ನಿಖರ ಪಂಚ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ಜರೀನ್, ಪ್ರಶಸ್ತಿ ಉಳಿಸಿಕೊಳ್ಳುವತ್ತ ದಾಪುಗಾಲಿಟ್ಟರು.

ಬುಧವಾರ ನಡೆದ ಕ್ವಾರ್ಟರ್ ಫೈನಲ್ ಬೌಟ್‌ಗಳಲ್ಲಿ ನಿಖತ್ ಜರೀನ್ 5–2ರಿಂದ ಥಾಯ್ಲೆಂಡ್‌ನ ಚುಟಾಮತ್ ರಕ್ಸತ್ ಎದುರು ಗೆದ್ದಿದ್ದರೆ, ನೀತು ಆರ್‌ಎಸ್‌ಸಿ ಆಧಾರದಲ್ಲಿ ಜಪಾನ್‌ನ ಮಡೋಕಾ ವಾಡಾ ಎದುರು ಜಯ ಸಾಧಿಸಿದ್ದರು.

ಲವ್ಲಿನಾ, ಸ್ವೀಟಿ ಫೈನಲ್‌ಗೆ: 75 ಕೆಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ ಲವ್ಲಿನಾ ಬೊರ್ಗೊಹೈನ್4–1ರಿಂದ ಚೀನಾದ ಲೀ ಕಿಯಾನ್ ಅವರನ್ನು ಪರಾಭವಗೊಳಿಸಿದರು. 81 ಕೆಜಿ ವಿಭಾಗದ ನಾಲ್ಕರ ಘಟ್ಟದಲ್ಲಿ ಸ್ವೀಟಿ ಬೂರಾ 4–3ರಿಂದ ಆಸ್ಟ್ರೇಲಿಯಾದ ಸ್ಯು ಎಮ್ಮಾ ಗ್ರೀನ್‌ಟ್ರೀ ಎದುರು ಗೆದ್ದು ಫೈನಲ್‌ಗೆ ಲಗ್ಗೆಯಿಟ್ಟರು.

ಸಾಕ್ಷಿ ಚೌಧರಿ (52 ಕೆಜಿ), ಮನೀಷಾ ಮೌನ್ (57 ಕೆಜಿ), ಜಾಸ್ಮಿನ್ ಲಂಬೋರಿಯಾ (60 ಕೆಜಿ) ಮತ್ತು ನೂಪುರ್ ಶರ್ಮಾ (+81 ಕೆಜಿ) ಅವರ ಅಭಿಯಾನ ಕ್ವಾರ್ಟರ್‌ಫೈನಲ್‌ಗಳಲ್ಲಿ ಅಂತ್ಯವಾಯಿತು.



ನೀತು ಗೆಲುವಿನ ಸಂಭ್ರಮ

ವಿಶ್ವಕಪ್ ಸಿದ್ಧತೆ ಹಾದಿಯಲ್ಲಿ ಹಿನ್ನಡೆ

ಏಕದಿನ ಕ್ರಿಕೆಟ್: ಆಸ್ಟ್ರೇಲಿಯಾ ವಿರುದ್ಧದ ಸರಣಿಯಲ್ಲಿ ಭಾರತಕ್ಕೆ ಸೋಲು

ನವದೆಹಲಿ (ಪಿಟಿಐ): ಮುಂಬರುವ ವಿಶ್ವಕಪ್ ಟೂರ್ನಿಗೆ ಸಜ್ಜಾಗುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಎಂದೇ ಬಿಂಬಿತವಾಗಿದ್ದ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯಲ್ಲಿ ಭಾರತಕ್ಕೆ ನಿರಾಶೆ ಎದುರಾಗಿದೆ.

ಚೆನ್ನೈನಲ್ಲಿ ಬುಧವಾರ ನಡೆದಿದ್ದ ಮೂರನೇ ಹಾಗೂ ಕೊನೆಯ ಪಂದ್ಯದಲ್ಲಿ ರೋಹಿತ್ ಶರ್ಮ ಬಳಗ 21 ರನ್‌ಗಳಿಂದ ಸೋತಿತ್ತು. ಈ ಮೂಲಕ ಸ್ಟೀವ್ ಸ್ಮಿತ್ ಬಳಗ ಸರಣಿಯನ್ನು 2–1 ರಲ್ಲಿ ಗೆದ್ದುಕೊಂಡಿದೆ. 'ಈ ಫಲಿತಾಂಶವು ಏಕದಿನ ವಿಶ್ವಕಪ್ ಟೂರ್ನಿಗೆ ಭಾರತದ ಸಿದ್ಧತೆಗೆ ಸಂಬಂಧಿಸಿದಂತೆ ಎಚ್ಚರಿಕೆಯ ಗಂಟೆ' ಎಂದೇ ವಿಶ್ಲೇಷಿಸಲಾಗುತ್ತಿದೆ.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ನೀಡಿದ್ದ 270 ರನ್‌ಗಳ ಗುರಿ ಬೆನ್ನಟ್ಟಿದ್ದ ಭಾರತ, 248 ರನ್‌ಗಳಿಗೆ ಆಲೌಟಾಯಿತು. ಪ್ರಮುಖ ಬ್ಯಾಟರ್‌ಗಳ ವೈಫಲ್ಯ ತಂಡವನ್ನು ಮತ್ತೆ ಕಾಡಿತು.

ಟಿ20 ಸ್ಪೆಷಲಿಸ್ಟ್ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರ 'ಹ್ಯಾಟ್ರಿಕ್ ಗೋಲ್ಡನ್ ಡಕ್' ಚರ್ಚೆಗೆ ಕಾರಣವಾಗಿದೆ. ಮುಂಬೈನ ಬ್ಯಾಟರ್ ಮೂರೂ ಪಂದ್ಯಗಳಲ್ಲಿ ಮೊದಲ ಎಸೆತದಲ್ಲೇ ವಿಕೆಟ್ ಒಪ್ಪಿಸಿದ್ದಾರೆ. ಮೊದಲ ಎರಡು ಪಂದ್ಯಗಳಲ್ಲಿ ಮಿಚೆಲ್ ಸ್ಟಾರ್ಕ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರೆ, ಚೆನ್ನೈನಲ್ಲಿ ಆಸ್ಟನ್ ಅಗರ್ ಎಸೆತದಲ್ಲಿ ಬೌಲ್ಡ್ ಆಗಿದ್ದರು.

ಶ್ರೇಯಸ್ ಅಯ್ಯರ್ ಗಾಯಗೊಂಡದ್ದರಿಂದ, ಸೂರ್ಯಕುಮಾರ್‌ಗೆ ಅಂತಿಮ ಇಲೆವೆನ್‌ನಲ್ಲಿ ಆಡುವ ಅವಕಾಶ ದೊರೆತಿತ್ತು. ಅಯ್ಯರ್ ಅವರು ವಿಶ್ವಕಪ್‌ಗೆ ಲಭ್ಯರಾಗದಿದ್ದರೆ, ನಾಲ್ಕನೇ ಕ್ರಮಾಂಕದಲ್ಲಿ ಸೂರ್ಯಕುಮಾರ್ ಅವರನ್ನೇ ನೆಚ್ಚಿಕೊಳ್ಳುವ ಅನಿವಾರ್ಯತೆ ತಂಡಕ್ಕಿದೆ.

ನಾಯಕ ರೋಹಿತ್ ಅವರು ಸೂರ್ಯಕುಮಾರ್ ಬೆಂಬಲಕ್ಕೆ ನಿಂತಿದ್ದು, ತಂಡದ ವ್ಯವಸ್ಥಾಪನ ಮಂಡಳಿಯು ಸೂರ್ಯಕುಮಾರ್ ವೈಫಲ್ಯದ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂಬ ಸೂಚನೆ ನೀಡಿದ್ದಾರೆ.

'ಅವರು ಈ ಸರಣಿಯಲ್ಲಿ ಕೇವಲ ಮೂರು ಎಸೆತಗಳನ್ನು ಮಾತ್ರ ಎದುರಿಸಿದ್ದಾರೆ. ಆ ಮೂರೂ ಉತ್ತಮ ಎಸೆತಗಳಾಗಿದ್ದವು' ಎಂದು ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದಾರೆ. 'ಕೊನೆಯ ಪಂದ್ಯದಲ್ಲಿ ಮಾತ್ರ ಅವರ ಹೊಡೆತದ ಆಯ್ಕೆ ಸರಿಯಾಗಿರಲಿಲ್ಲ' ಎಂದು ಹೇಳಿದ್ದಾರೆ.

ನಾಲ್ಕು ವರ್ಷಗಳ ಬಳಿಕ ಸೋಲು: ಭಾರತ ತಂಡವು ತವರು ನೆಲದಲ್ಲಿ ಏಕದಿನ ಕ್ರಿಕೆಟ್ ಸರಣಿಯಲ್ಲಿ ಸೋತಿರುವುದು ನಾಲ್ಕು ವರ್ಷಗಳಲ್ಲಿ ಇದೇ ಮೊದಲು. 2019 ರಲ್ಲಿ ಆಸ್ಟ್ರೇಲಿಯಾ ವಿರುದ್ಧದ ಸರಣಿಯನ್ನು 2–3 ರಲ್ಲಿ ಸೋತಿತ್ತು. ಇದೀಗ ಅದೇ ತಂಡದ ಎದುರು ಮತ್ತೆ ಮುಗ್ಗರಿಸಿದೆ. ತವರು ನೆಲದಲ್ಲಿ ಸತತ ಏಳು ಸರಣಿ ಗೆಲುವಿನ ಓಟಕ್ಕೆ ಇದರೊಂದಿಗೆ ತೆರೆಬಿದ್ದಿದೆ.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ 49 ಓವರ್‌ಗಳಲ್ಲಿ 269 (ಟ್ರಾವಿಸ್ ಹೆಡ್ 33, ಮಿಚೆಲ್ ಮಾರ್ಷ್ 47, ಡೇವಿಡ್ ವಾರ್ನರ್ 23, ಮಾರ್ನಸ್ ಲಾಬುಷೇನ್ 28, ಅಲೆಕ್ಸ್ ಕ್ಯಾರಿ 38, ಸೀನ್ ಅಬಾಟ್ 26, ಹಾರ್ದಿಕ್ ಪಾಂಡ್ಯ 44ಕ್ಕೆ 3, ಕುಲದೀಪ್ ಯಾದವ್ 56ಕ್ಕೆ 3, ಮೊಹಮ್ಮದ್ ಸಿರಾಜ್ 37ಕ್ಕೆ 2)

ಭಾರತ 49.1 ಓವರ್‌ಗಳಲ್ಲಿ 248 (ರೋಹಿತ್ ಶರ್ಮಾ 30, ಶುಭಮನ್ ಗಿಲ್ 37, ವಿರಾಟ್ ಕೊಹ್ಲಿ 54, ಕೆ.ಎಲ್.ರಾಹುಲ್ 32, ಹಾರ್ದಿಕ್ ಪಾಂಡ್ಯ 40, ಆ್ಯಡಂ ಜಂಪಾ 45ಕ್ಕೆ 4, ಆಸ್ಟನ್ ಅಗರ್ 41ಕ್ಕೆ 2) ಫಲಿತಾಂಶ: ಆಸ್ಟ್ರೇಲಿಯಾಕ್ಕೆ 21 ರನ್ ಗೆಲುವು



ಸೂರ್ಯಕುಮಾರ್ ಯಾದವ್ ಸರಣಿಯ ಮೂರೂ ಪಂದ್ಯಗಳಲ್ಲಿ ಶೂನ್ಯಕ್ಕೆ ಔಟಾಗಿದ್ದಾರೆ

ಈ ಸೋಲನ್ನು ಮರೆಯಬಾರದು: ಗಾವಸ್ಕರ್

'ಐಪಿಎಲ್‌ನ ಅಬ್ಬರ ಶುರುವಾದಂತೆ ಭಾರತ ತಂಡದವರು ಈ ಸರಣಿ ಸೋಲನ್ನು ಮರೆಯಬಾರದು' ಎಂದು ದಿಗ್ಗಜ ಆಟಗಾರ ಸುನಿಲ್ ಗಾವಸ್ಕರ್ ಕಿವಿಮಾತು ಹೇಳಿದ್ದಾರೆ.

'ಇನ್ನೊಂದು ವಾರದಲ್ಲಿ ಐಪಿಎಲ್ ಶುರುವಾಗುತ್ತದೆ. ಭಾರತ ತಂಡ ಕೆಲವೊಮ್ಮೆ ಸೋಲುಗಳನ್ನು ಬೇಗನೇ ಮರೆತು ತಪ್ಪು ಮಾಡುತ್ತದೆ. ಆದರೆ ವಿಶ್ವಕಪ್ ಟೂರ್ನಿ ಮುಂದಿರುವುದರಿಂದ ಈ ಸೋಲನ್ನು ಮರೆಯಬಾರದು' ಎಂದಿದ್ದಾರೆ.

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್: ವರುಣ್ ತೋಮರ್‌ಗೆ ಕಂಚು

ಚಿನ್ನ ಜಯಿಸಿದ ಸರಬ್ಜೋತ್ ಸಿಂಗ್

ಭೋಪಾಲ್ (ಪಿಟಿಐ): ಭಾರತದ ಸರಬ್ಜೋತ್ ಸಿಂಗ್ ಅವರು ಐಎಸ್‌ಎಸ್‌ಎಫ್ ಪಿಸ್ತೂಲ್‌–ರೈಫಲ್ ವಿಶ್ವಕಪ್ ಟೂರ್ನಿಯಲ್ಲಿ ಬುಧವಾರ ಚಿನ್ನದ ಪದಕಕ್ಕೆ ಗುರಿಯಿಟ್ಟರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಸರಬ್ಜೋತ್ ಅವರಿಗೆ ಪದಕ ಒಲಿಯಿತು.

ಚಿನ್ನದ ಪದಕದ ಸುತ್ತಿನಲ್ಲಿ ಸರಬ್ಜೋತ್ 16–0ರಿಂದ ಅಜರ್‌ಬೈಜಾನ್‌ನ ರುಸ್ಲಾನ್ ಲುನೆವ್ ಅವರನ್ನು ಪರಾಭವಗೊಳಿಸಿದರು. 21 ವರ್ಷದ ಭಾರತದ ಶೂಟರ್ ಅರ್ಹತಾ ಸುತ್ತಿನಲ್ಲಿ 585 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದು ಫೈನಲ್ ಪ್ರವೇಶಿಸಿದ್ದರು.

ಅರ್ಹತಾ ಸುತ್ತಿನ ಆರು ಸರಣಿಗಳಲ್ಲಿ ಕ್ರಮವಾಗಿ 98, 97, 99, 97, 97, 97 ಸ್ಕೋರ್ ದಾಖಲಿಸಿದ್ದರು.

ಇದೇ ಸ್ಪರ್ಧೆಯಲ್ಲಿ ಭಾರತದ ವರುಣ್ ತೋಮರ್ ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ, ಕಂಚು: ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ವರುಣ್ ಮತ್ತು ರಿಧಮ್ ಸಂಗ್ವಾನ್ ಜೋಡಿಯು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರೆ, ಏರ್ ರೈಫಲ್ ವಿಭಾಗದಲ್ಲಿ ರುದ್ರಾಕ್ಷ್ ಪಾಟೀಲ್ ಮತ್ತು ಆರ್. ನರ್ಮದಾ ನಿತಿನ್ ಗುರುವಾರ ಕಂಚು ಗೆದ್ದರು.

ಇದರೊಂದಿಗೆ ಭಾರತ ಗೆದ್ದ ಪದಕಗಳ ಸಂಖ್ಯೆ ನಾಲ್ಕಕ್ಕೇರಿತು. ಸದ್ಯ ತಂಡದ ಬಳಿ ತಲಾ ಒಂದು ಚಿನ್ನ ಮತ್ತು ಬೆಳ್ಳಿ, ಎರಡು ಕಂಚಿನ ಪದಕಗಳಿವೆ.

ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದ ಫೈನಲ್‌ನಲ್ಲಿ ವರುಣ್‌–ರಿಧಮ್ ಜೋಡಿ 11–17ರಿಂದ ಚೀನಾದ ಕಿಯಾನ್ ವೇ ಮತ್ತು ಲಿವು ಜಿನ್ಯಾವೊ ಎದುರು ಸೋತಿತು. ಅರ್ಹತಾ ಸುತ್ತಿನಲ್ಲಿ ಭಾರತದ ಶೂಟರ್‌ಗಳು 581 ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನ ಪಡೆದಿದ್ದರು.

ಪುರುಷರ ಏರ್ ರೈಫಲ್ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿರುವ ರುದ್ರಾಕ್ಷ್ ಮತ್ತು ನರ್ಮದಾ ಜೋಡಿಯು ಕಂಚಿನ ಪದಕದ ಸುತ್ತಿನಲ್ಲಿ 16–8ರಿಂದ ಚೀನಾದ ಜಾಂಗ್ ಕಿಯೊಂಗುಯ್ ಮತ್ತು ಯು ಹೊನಾನ್ ಎದುರು ಗೆದ್ದರು.



ಸರಬ್ಜೋತ್ ಸಿಂಗ್ ಮತ್ತು ವರುಣ್

ಸಲೀಮಾ ಟೆಟೆಗೆ ಎಎಚ್‌ಎಫ್ ಗೌರವ

ನವದೆಹಲಿ (ಪಿಟಿಐ): ರಾಷ್ಟ್ರೀಯ ಮಹಿಳಾ ಹಾಕಿ ತಂಡದ ಆಟಗಾರ್ತಿ ಸಲೀಮಾ ಟೆಟೆ ಅವರು ಗುರುವಾರ ಏಷ್ಯನ್ ಹಾಕಿ ಫೆಡರೇಷನ್‌ಗೆ (ಎಎಚ್‌ಎಫ್) ಭಾರತದಿಂದ ಅಥ್ಲೀಟ್ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಮಾರ್ಚ್ 25ರಿಂದ ಎರಡು ವರ್ಷಗಳ ಅವಧಿಗೆ ಸಲೀಮಾ ಅವರ ನೇಮಕವಾಗಿದೆ.ಕೊರಿಯಾದ ಮುಂಗೆಯೊಂಗ್‌ನಲ್ಲಿ ನಡೆದ ಎಎಚ್‌ಎಫ್‌ನ ಅಧಿವೇಶನದಲ್ಲಿ ಸಲೀಮಾ ಅವರಿಗೆ ಪ್ರಮಾಣಪತ್ರವನ್ನು ನೀಡಲಾಯಿತು.

ಎಚ್‌ಐಗೆ ಗೌರವ: ಈ ವರ್ಷದ ಆರಂಭದಲ್ಲಿ ಭುವನೇಶ್ವರದಲ್ಲಿ ಪುರುಷರ ವಿಶ್ವಕಪ್ ಟೂರ್ನಿಯನ್ನು ಯಶಸ್ವಿಯಾಗಿ ಆಯೋಜಿಸಿದ್ದಕ್ಕಾಗಿ ಹಾಕಿ ಇಂಡಿಯಾಗೆ (ಎಚ್‌ಐ) 'ಅತ್ಯುತ್ತಮ ಆಯೋಜಕ' ಪುರಸ್ಕಾರವನ್ನು ಎಎಚ್‌ಎಫ್ ನೀಡಿದೆ.

ಐಪಿಎಲ್: ಟಾಸ್ ಬಳಿಕ ಅಂತಿಮ ಇಲೆವೆನ್ ಆಯ್ಕೆ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟಿ20 ಟೂರ್ನಿಯಲ್ಲಿ ಈ ಬಾರಿ ಹೊಸ ನಿಯಮ ಜಾರಿಗೊಳಿಸಲಾಗಿದ್ದು, ಪಂದ್ಯದ ಟಾಸ್ ಆದ ಬಳಿಕ ಅಂತಿಮ ಇಲೆವೆನ್ ಆಯ್ಕೆ ಮಾಡುವ ಅವಕಾಶವನ್ನು ತಂಡಗಳಿಗೆ ನೀಡಲಾಗಿದೆ.

ಈಗ ಇರುವ ನಿಯಮದ ಪ್ರಕಾರ ಎರಡೂ ತಂಡಗಳ ನಾಯಕರು ಆಡುವ ಹನ್ನೊಂದರ ಬಳಗದ ಪಟ್ಟಿಯನ್ನು ಟಾಸ್‌ಗೆ ಮುನ್ನವೇ ಎದುರಾಳಿ ತಂಡಕ್ಕೆ ನೀಡಬೇಕಿತ್ತು.

'ಪ್ರತಿ ತಂಡದ ನಾಯಕರು ಆಡುವ 11 ಮಂದಿ ಆಟಗಾರರು ಮತ್ತು ಐವರು ಸಬ್‌ಸ್ಟಿಟ್ಯೂಟ್ ಫೀಲ್ಡರ್‌ಗಳ ಹೆಸರನ್ನು ಟಾಸ್ ಬಳಿಕ ಮ್ಯಾಚ್ ರೆಫರಿಗೆ ನೀಡಬಹುದು' ಎಂದು ಹೊಸ ನಿಯಮ ಹೇಳಿದೆ. ಟಾಸ್ ಬಳಿಕ ಅಂತಿಮ ಹನ್ನೊಂದರ ಬಳಗದಲ್ಲಿ ಏನಾದರೂ ಬದಲಾವಣೆ ಬಯಸಿದರೆ, ಹೊಸ ನಿಯಮವು ಅದಕ್ಕೆ ಅವಕಾಶ ಕಲ್ಪಿಸಿದೆ. ಪಂದ್ಯದ ಆರಂಭದವರೆಗೂ ತಂಡದಲ್ಲಿ ಬದಲಾವಣೆ ಮಾಡಬಹುದು.

ಬೆಸ್ಟೊ ಅಲಭ್ಯ: ಇಂಗ್ಲೆಂಡ್‌ನ ಬ್ಯಾಟರ್ ಜಾನಿ ಬೆಸ್ಟೊ ಐಪಿಎಲ್ ಟೂರ್ನಿಗೆ ಅಲಭ್ಯರಾಗಿದ್ದಾರೆ. ಅವರಿಗೆ ಐಪಿಎಲ್‌ನಲ್ಲಿ ಆಡಲು ನಿರಾಕ್ಷೇಪಣಾ ಪತ್ರವನ್ನು ನೀಡಲು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ನಿರಾಕರಿಸಿದೆ ಎಂದು 'ಕ್ರಿಕ್‌ಬಝ್' ವೆಬ್‌ಸೈಟ್ ವರದಿ ಮಾಡಿದೆ.

ಆದರೆ ಆಲ್‌ರೌಂಡರ್ ಲಿಯಾಮ್ ಲಿವಿಂಗ್‌ಸ್ಟೋನ್ ಅವರಿಗೆ ಐಪಿಎಲ್‌ನಲ್ಲಿ ಆಡಲು ಅನುಮತಿ ನೀಡಿದೆ. ಪಂಜಾಬ್ ಕಿಂಗ್ಸ್ ತಂಡ ಲಿವಿಂಗ್‌ಸ್ಟೋನ್ ಮತ್ತು ಬೈಸ್ಟೊ ಅವರನ್ನು ಕ್ರಮವಾಗಿ ₹ 11.50 ಹಾಗೂ ₹ 6.75 ಕೋಟಿ ನೀಡಿ ತನ್ನದಾಗಿಸಿಕೊಂಡಿತ್ತು.

ಕೊಕ್ಕೊ: ಭಾರತ ತಂಡಗಳಿಗೆ ಪ್ರಶಸ್ತಿ

ತಮುಲ್‌ಪುರ, ಅಸ್ಸಾಂ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಏಷ್ಯನ್ ಕೊಕ್ಕೊ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಪ್ರಶಸ್ತಿ ಜಯಿಸಿವೆ.

ಇಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತ ಒಂದು ಇನಿಂಗ್ಸ್ ಮತ್ತು ಆರು ಪಾಯಿಂಟ್ಸ್‌ನಿಂದ ನೇಪಾಳ ವಿರುದ್ಧ ಗೆದ್ದಿತು. ಸೆಮಿಫೈನಲ್‌ನಲ್ಲಿ ಭಾರತ ತಂಡವು ಶ್ರೀಲಂಕಾ ವಿರುದ್ಧ ಜಯಿಸಿತ್ತು. ಮಹಿಳಾ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಭಾರತ ತಂಡದವರು 33 ಪಾಯಿಂಟ್ಸ್ ಮತ್ತು ಒಂದು ಇನಿಂಗ್ಸ್‌ನಿಂದ ನೇಪಾಳ ತಂಡವನ್ನೇ ಸೋಲಿಸಿದರು. ನಾಲ್ಕರ ಘಟ್ಟದಲ್ಲಿ ಬಾಂಗ್ಲಾದೇಶ ವಿರುದ್ಧ ಭಾರತ ಗೆದ್ದಿತ್ತು.